ಸಂಪುಟ: 13 Volume | ಸಂಚಿಕೆ: 356 Issue | ಪುಟಗಳು 08 Pages | ಸೋಮವಾರ 23 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

**ಬೆಳಗು**

ನಾವು ಬಿಡುಗಡೆ, ಸ್ವಾತಂತ್ರ್ಯ ಪಡೆಯಬೇಕಾದದ್ದು ಅಜ್ಞಾನದಿಂದ, ಅಧರ್ಮದಿಂದ.

–ಬಿ.ಎಂ.ಶ್ರೀ

ಯುಗಾದಿ ಜಾತ್ರೆ: ಹೋಳಿ ಹಬ್ಬ ಸಂಭ್ರಮ 6
ಸಂಭ್ರಮದಿಂದ ಜರುಗಿದ ರಂಜಾನ್ ಆಚರಣೆ 7
ಮಕ್ಕಳನ್ನು ಸರಕಾರಿ ಶಾಲೆಗೆ ಸೇರಿಸಿ 8



ಹುಮನಾಬಾದ: ರಂಜಾನ್ ಹಬ್ಬದ ಅಂಗವಾಗಿ ಪಟ್ಟಣದ ಮಾಜಿ ಸಚಿವ ರಾಜಶೇಖರ ಬಿ. ಪಾಟೀಲ ರವರಿಗೆ ಶನಿವಾರ ಬೆಳಿಗ್ಗೆ ನೂರಧಾಭಾ ಮಾಲೀಕರಾದ ಕಲೀಂ ಮುಲ್ಲಾರವರು ಪರಸ್ಪರ ಕೈ–ಕೈ ಮಿಲಾಯಿಸುವ ಮೂಲಕ ರಂಜಾನ್ ಹಬ್ಬದ ಶುಭಾಶಯಗಳು ಕೋರಿದರು. ಮಹ್ಮದ್ ರೀಹಾನ್ ಜಾಗೂ ಉಪಸ್ಥಿತರಿದ್ದರು.

## ಮೊದಲ ಬಾರಿ ಗೆದ್ದವರಿಗೆ ಬೇಕು

**ರಾಮನಗರ:** ಮೊದಲ ಬಾರಿಗೆ ಹಾಗೂ ಎರಡನೇ ಬಾರಿ ಗೆದ್ದವರಿಗೆ ಈ ಬಾರಿಯ ಸಂಪುಟ ಪುನಾರಚನೆ ವೇಳೆ ಮಂತ್ರಿಗಿರಿ ಕೊಡಿ ಎಂದು ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಒತ್ತಾಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಪ್ರಿಯಾಂಕ ಖರ್ಗೆ ಅವರು ಮೊದಲ ಬಾರಿ ಶಾಸಕರಾಗಿ ಆಯ್ಕೆ ಆಗಿದ್ದಾಗ ಸಚಿವರಾಗಿದ್ದರು. ಹಾಗಾಗಿ, ಈಗಲೂ ಮೊದಲ ಬಾರಿ ಗೆದ್ದವರನ್ನು ಸಚಿವರನ್ನಾಗಿ ಮಾಡಬೇಕೆಂದು ನಾವು ಹೈಕಮಾಂಡ್ ಒತ್ತಾಯಿಸುತ್ತೇವೆ ಎಂದು ಹೇಳಿದ್ದಾರೆ.

## ಯಾಸಿಡ್ ದಾಳಿ: ಐವರಿಗೆ ಗಾಯ

**ಚಿತ್ರದುರ್ಗ:** ಭೀಕರ ಯಾಸಿಡ್ ದಾಳಿಯೊಂದರಲ್ಲಿ ಮಹಿಳೆ ಹಾಗ ಮೂವರು ಮಕ್ಕಳು ಸೇರಿ ಐವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಈ ಘಟನೆ ಮಲಪ್ಪನಹಟ್ಟಿ ಪ್ರದೇಶದಲ್ಲಿ ನಡೆದಿದೆ. ತಹಸೀನಾ ಭಾನು (47), ನಗ್ಮಾ ನಾಯಕ್ (49), ರೋಶ್ನಿ (12), ನೇಹಾ (27) ಮತ್ತು ಇಕ್ರಾ ಫಾತಿಮಾ (4) ಯಾಸಿಡ್ ದಾಳಿಯಲ್ಲಿ ಗಾಯಗೊಂಡವರು. ಚಿತ್ರದುರ್ಗ ನಗರದ ನೆಹರು ನಗರದ ಸುಹೈಲ್ ಬಾಷಾ ಅಲಿಯಾಸ್ ಸುಹೈಲ್ (50) ಈ ಕೃತ್ಯ ಎಸಗಿದ್ದಾನೆ ಎಂದು ಆರೋಪಿಸಿದ್ದು, ಪ್ರಕರಣ ದಾಖಲಾಗಿದೆ.

## ಬ್ಯಾನರ್, ಫ್ಲೆಕ್ಸ್ ತೆರವಿಗೆ ಸೂಚನೆ

**ಬೆಂಗಳೂರು:** ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹಬ್ಬದ ಪ್ರಯುಕ್ತ ಅನಧಿಕೃತವಾಗಿ ಅಳವಡಿಸಿರುವ ಬ್ಯಾನರ್, ಫ್ಲೆಕ್ಸ್ ಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆಯುಕ್ತರಾದ ಶ್ರೀ ರಾಜೇಂದ್ರ ಚೋಳನ್ ರವರು ಸೂಚನೆ ನೀಡಿದ್ದು, ಅದರಂತೆ ಬೆಳಗ್ಗೆಯಿಂದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಅನಧಿಕೃತ ಫ್ಲೆಕ್ಸ್, ಬ್ಯಾನರ್ ತೆರವುಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಅನಧಿಕೃತವಾಗಿ ಫ್ಲೆಕ್ಸ್ ಬ್ಯಾನರ್ ಅಳವಡಿಸುವುದರಿಂದ ನಗರದ ಸೌಂದರ್ಯಕ್ಕೆ ಧಕ್ಕೆಯುಂಟಾಗುತ್ತಿದ್ದು, ಕೂಡಲೇ ತೆರವುಗೊಳಿಸಲು ಆಯುಕ್ತರು ಸೂಚನೆ ನೀಡಿದ್ದಾರೆ.

## ಮಾನವೀಯತೆಯ ಮಹತ್ವದ ಸಾರ ರಂಜಾನ್

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಹಿಂದೂ–ಮುಸ್ಲಿಂ ಭಾವೈಕ್ಯತೆಯ ಸುಂದರ ಸಂದೇಶವನ್ನು ಸಾರುವ ಪವಿತ್ರ ರಂಜಾನ್ ಹಬ್ಬದ ಪ್ರಯುಕ್ತ, ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಇಂದು ಭಾಲ್ಕಿಯ ಈದ್ಗಾ ಮೈದಾನಕ್ಕೆ ಭೇಟಿ ನೀಡಿ ಮುಸ್ಲಿಂ ಬಾಂಧವರನ್ನು ಆತ್ಮೀಯವಾಗಿ ಭೇಟಿ ಮಾಡಿ ಹಬ್ಬದ ಶುಭಾಶಯಗಳನ್ನು ಕೋರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಂಜಾನ್ ಹಬ್ಬವು ತ್ಯಾಗ, ಸಹಾನುಭೂತಿ ಮತ್ತು ಮಾನವೀಯತೆಯ ಮಹತ್ವವನ್ನು ಸಾರುತ್ತದೆ ಎಂದರು. ಇಂತಹ ಹಬ್ಬಗಳು ನಮ್ಮ ಸಮಾಜದಲ್ಲಿ ಏಕತೆ, ಸೌಹಾರ್ದತೆ ಮತ್ತು ಸಹೋದರತ್ವವನ್ನು ಇನ್ನಷ್ಟು ಬಲಪಡಿಸುತ್ತವೆ ಎಂದು ತಿಳಿಸಿದರು.



ನಾಡಿನ ಸಮಸ್ತ ಜನತೆಗೆ ರಂಜಾನ್ ಹಬ್ಬವು ಸುಖ, ಶಾಂತಿ ಮತ್ತು ಸಮೃದ್ಧಿಯನ್ನು ತರಲಿ ಎಂಬ ಹಾರೈಕೆ ವ್ಯಕ್ತಪಡಿಸಿದರು.

## ಛಲಗಾತಿ ವಿಜಯಕುಮಾರಿಗೆ ಬೆಳ್ಳಿ ಪದಕ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಛಲವೊಂದಿದ್ದರೆ ಎಂತಹ ಕಷ್ಟಗಳನ್ನೂ ಮೆಟ್ಟಿನಿಲ್ಲಬಹುದು ಎಂಬುದಕ್ಕೆ ಮಂಡ್ಯದ ಕ್ರೀಡಾಪಟು ವಿಜಯಕುಮಾರಿ ಜಿ.ಕೆ. ಅವರ ಸಾಧನೆಯೇ ಸಾಕ್ಷಿ. ಕೇರಳದ ತ್ರಿವೇಂಡ್ರಮ್ ನಲ್ಲಿ ನಡೆದ 7ನೇ ಇಂಡಿಯನ್ ಓಪನ್ 400 ಮೀಟರ್ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ವಿಜಯಕುಮಾರಿ, 2ನೇ ಸ್ಥಾನ ಪಡೆಯುವ ಮೂಲಕ ಬೆಳ್ಳಿ ಪದಕವನ್ನು ಮುಡಿಗೇರಿಸಿಕೊಂಡು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಇದಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಕಾಲಿಕ ನೆರವು ಕಾರಣವಾಯಿತು ಎಂಬುದಾಗಿ ವಿಜಯಕುಮಾರಿ ಧನ್ಯವಾದಗಳನ್ನು ಅರ್ಪಿಸಿದ್ದಾರೆ.



ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲೂಕಿನ ಗೌಡೇನಹಳ್ಳಿ ಮೂಲದ ವಿಜಯಕುಮಾರಿ, ಆರ್ಥಿಕ ಮುಗ್ಗಟ್ಟು, ಗಾಯದ ಸಮಸ್ಯೆಯಿಂದ ಕ್ರೀಡಾಲೋಕದಿಂದಲೇ ದೂರ ಸರಿಯುವ ನಿರ್ಧಾರಕ್ಕೆ ಬಂದಿದ್ದರು. ಈ ವೇಳೆ ಅವರ ನೆರವಿಗೆ ಬಂದಿದ್ದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್. ಇವರ ಕಷ್ಟಕ್ಕೆ ಸ್ಪಂದಿಸಿದ ಡಿಸಿಎಂ ಅವರು, ಸರ್ಕಾರದಿಂದ 10 ಲಕ್ಷ ರೂ. ಪ್ರೋತ್ಸಾಹಧನ ಘೋಷಿಸಿದ್ದರು. ಆ ಪೈಕಿ ಮೊದಲ ಕಂತಿನ 5 ಲಕ್ಷ ರೂ.ಗಳನ್ನು ಬಿಬಿಎಂಪಿ ಮೂಲಕ ಈಗಾಗಲೇ ಹಸ್ತಾಂತರಿಸಿದ್ದು, ಇದು ಅವರ ತರಬೇತಿ ಮತ್ತು ಚಿಕಿತ್ಸೆಗೆ ಸಂಜೀವಿನಿಯಾಯಿತು.

# ಟಿಕೆಟ್ ಹಂಚಿಕೆ ಕ್ಲೈಮ್ಯಾಕ್ಸ್

### ದಾವಣಗೆರೆ ದಕ್ಷಿಣ, ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಬೈ ಎಲೆಕ್ಷನ್‌ಗೆ ಎರಡೂ ಪಕ್ಷಗಳ ಅಭ್ಯರ್ಥಿ ಹೆಸರು ಅಂತಿಮ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ವಿಧಾನಸಭೆ ಉಪಚುನಾವಣೆಯ ಟಿಕೆಟ್ ಹಂಚಿಕೆಯ ಕ್ಲೈಮ್ಯಾಕ್ಸ್ ಹಂತ ತಲುಪಿದೆ. ದಾವಣಗೆರೆ ದಕ್ಷಿಣದಲ್ಲಿ ಸಚಿವ ಜಮೀರ್ ನಡೆಸಿದ ತಂತ್ರ ವಿಫಲವಾಗಿದ್ದು, ಡಿಸಿಎಂ ಮೇಲುಗೈ ಸಾಧಿಸಿದ್ದಾರೆ. ನಾಲ್ಕು ಷರತ್ತು ಅನ್ವಯ ಜಮೀರ್ ಮೌನವಾಗಿದ್ದಾರೆ.

ರಾಜ್ಯದಲ್ಲಿ ಸದ್ದು ಮಾಡುತ್ತಿರುವ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲಿದ್ದಾರೆ.

**ಬಿಜೆಪಿ ಟಿಕೆಟ್ ಹಂಚಿಕೆ:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಟಿಕೆಟ್ ಪಡೆದಿರುವ ಶ್ರೀನಿವಾಸ ಟಿ.ದಾಸ ಕರಿಯಪ್ಪ ಹಾಗೂ ಬಾಗಲಕೋಟೆಯಲ್ಲಿ ಮಾಜಿ ಶಾಸಕ ವೀರಣ್ಣ ಚರಂತಿಮಠ ಪಕ್ಷದ ಮುಖಂಡರು ಹಾಗೂ ಅಪಾರ ಸಂಖ್ಯೆಯ ಕಾರ್ಯಕರ್ತರ ಸಮುಖದಲ್ಲಿ ತಮ ಉಮೇದುವಾರಿಕೆ ಮಾಡಲಿದ್ದಾರೆ.

**ಕಾಂಗ್ರೆಸ್ ಹುರಿಯಾಳು:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಶ್ಯಾಮನೂರು ಕುಟುಂಬದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥ್ ಅವರಿಗೆ ಟಿಕೆಟ್ ದೊರೆತ್ತಿದೆ. ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಮಾಜಿ ಸಚಿವ ದಿ.ಎಚ್.ವೈ.ಮೇಟಿ ಅವರ ಪುತ್ರ ಉಮೇಶ್ ಮೇಟಿ ಕಣಕ್ಕಿಳಿಯುತ್ತಿದ್ದಾರೆ.



### ನಾಯಕರ 4 ಷರತ್ತು..?

- ಜೂನ್ ತಿಂಗಳಲ್ಲಿ 12 ವಿಧಾನ ಪರಿಷತ್ ಸದಸ್ಯರು ನಿವೃತ್ತರಾಗುತ್ತಿದ್ದು, ಆ ಸ್ಥಾನಗಳಿಗೆ ಮುಸ್ಲಿಂ ನಾಯಕರಿಗೆ ಆದ್ಯತೆ ನೀಡಬೇಕು.
- ಮುಂಬರುವ ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕರಿಗೆ ಅವಕಾಶ ನೀಡಬೇಕು.
- ನಿಗಮ ಮಂಡಳಿಗಳ ನೇಮದಲ್ಲಿ ಅಲ್ಪಸಂಖ್ಯಾತರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು.
- ಸಚಿವ ಸಂಪುಟ ಪುನಾರಚನೆ ವೇಳೆ ಮುಸ್ಲಿಮರಿಗೆ ಹೆಚ್ಚಿನ ಸಚಿವ ಸ್ಥಾನ ನೀಡಬೇಕು.

### ಜಮೀರ್‌ಗೆ ಡೋಂಟ್‌ಕೇರ್..!

ಟಿಕೆಟ್ ಹಂಚಿಕೆಬಗ್ಗೆ ಸಚಿವ ಜಮೀರ್ ಅಹಮದ್‌ಗೆ ಹಿನ್ನಡೆಯಾಗಿದೆ. ಸಂಪುಟದಲ್ಲಿ ಉಳಿಯಬೇಕೆ? ನಿರ್ಗಮಿಸ ಬೇಕೆ ಎಂಬ ಸಂದಿಗ್ಧತೆ ನಿರ್ಮಾಣವಾಗಿದೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಮುಸ್ಲಿಮ್ ಅಭ್ಯರ್ಥಿಗೆ ಅವಕಾಶ ನೀಡದಿದ್ದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಜಮೀರ್ ತಿಳಿಸಿದ್ದು, ಅದಕ್ಕೆ ತಲೆಕೆಡಿಸಿಕೊಳ್ಳದೆ ಹೈಕಮಾಂಡ್ ಶ್ಯಾಮನೂರು ಶಿವಶಂಕರಪ್ಪ ಕುಟುಂಬಕ್ಕೆ ಮಣೆ ಹಾಕಿದೆ..!

### ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮೇಲುಗೈ

ಅಲ್ಪಸಂಖ್ಯಾತ ಅಭ್ಯರ್ಥಿಗೆ ದಾವಣಗೆರೆ ದಕ್ಷಿಣ ಕ್ರೇತ್ರದಲ್ಲಿ ಸ್ಪರ್ಧಿಸಲು ಟಿಕೆಟ್ ಕೊಡಿಸಬೇಕೆಂಬ ಹಿನ್ನೆಲೆಯಲ್ಲಿ ಜಮೀರ್ ಅಹ್ಮದ್ ಖಾನ್ ಅನುಸರಿಸಿದ ಒತ್ತಡದ ತಂತ್ರಗಳು ವಿಫಲವಾಗಿವೆ. ಕಾಂಗ್ರೆಸ್‌ನಲ್ಲಿ ಜಮೀರ್ ಅಹಮದ್ ಖಾನ್ ಅಲ್ಪಸಂಖ್ಯಾತ ಸಮುದಾಯದ ಪ್ರಭಾವಿ ನಾಯಕರಾಗಿ ಗುರುತಿಸಿಕೊಂಡಿದ್ದು, ಮುಖ್ಯಮಂತ್ರಿ ಪರಬ್ಯಾಟ್ ಬೀಸುತ್ತಲೇ ಗಮನ ಸೆಳೆಯುತ್ತಿದ್ದರು. ಅವಕಾಶಕ್ಕಾಗಿ ಕಾದಿದ್ದ ಡಿಕೆಶಿವಕುಮಾರ್ ಇದೀಗ ತಮ್ಮ ಆಪ್ತರಿಗೆ ಟಿಕೆಟ್ ಕೊಡಿಸಿ, ಜಮೀರ್ ತಂತ್ರ ವಿಫಲಗೊಳಿಸಿದ್ದಾರೆ ಎನ್ನುತ್ತಿದೆ ಮೂಲ.

## ಮುಸ್ಲಿಮರಿಗೆ ಕೊಕ್ ಕೊಟ್ಟ ಕಾಂಗ್ರೆಸ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಜಮೀರ್ ಅವರು ದಾವಣಗೆರೆಯಲ್ಲಿ ಮುಸಲ್ಮಾನ್ ಬಂಧುಗಳಿಗೆ ಟಿಕೆಟ್ ಕೊಡಬೇಕು. ಇಲ್ಲವಾದರೆ ರಾಜೀನಾಮೆ ಕೊಡುವ ಬೆದರಿಕೆ ಒಡ್ಡಿದ್ದು, ಇದಕ್ಕೆ ಕಾಂಗ್ರೆಸ್ ಸೊಪ್ಪು ಹಾಕಿಲ್ಲ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

ಸುರ್ಜೇವಾಲಾ ಅವರು ಬೇಕಿದ್ರೆ ನೀವು ರಾಜೀನಾಮೆ ಕೊಟ್ಟುಹೋಗಿ ಎಂದಿದ್ದಾರೆ. ಹಿಂದೆ ಕಾಂಗ್ರೆಸ್‌ನಲ್ಲಿ ಮಂಡ್ಯ ಹೊರತುಪಡಿಸಿ ಇತರ ಜಿಲ್ಲಾ ಕೇಂದ್ರಗಳಲ್ಲಿ ಮುಸಲ್ಮಾನ್ ಬಂಧುಗಳಿಗೇ ಟಿಕೆಟ್ ಕೊಡುತ್ತಿದ್ದರು. ಈಗ ಎಲ್ಲ ಕಡೆಯಲ್ಲಿ ಅವರಿಗೆ ಕಾಂಗ್ರೆಸ್ ಕೊಕ್ ಕೊಡುತ್ತ ಬಂದಿದೆ ಎಂದು ವಿಶ್ಲೇಷಿಸಿದ್ದಾರೆ. ದಾವಣಗೆರೆಯಲ್ಲಿ ಯಾವಾಗಲೂ ಮುಸ್ಲಿಮರಿಗೆ ಕೊಡುತ್ತಿದ್ದರು. ಮುಸಲ್ಮಾನರು ಗುಲಾಮರು; ಟಿಕೆಟ್ ಕೊಡದಿದ್ದರೂ ಬಿಜೆಪಿಯನ್ನು ತೋರಿಸಿದರೆ ಸಾಕು, ನಮಗೆ ಮತ ಕೊಡುತ್ತಾರೆಂಬ ಪ್ರವೃತ್ತಿಯನ್ನು ಕಾಂಗ್ರೆಸ್ ಬೆಳೆಸಿಕೊಂಡಿದೆ ಎಂದು ಟೀಕಿಸಿದ್ದಾರೆ.



## ಟೋಲ್ ದುಬಾರಿ, ಸವಾರರ ಜೇಬಿಗೆ ಕತ್ತರಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಏಪ್ರಿಲ್ 1 ರಿಂದ ಬೆಂಗಳೂರು–ಮೈಸೂರು ಎಕ್ಸ್ ವೇ ಹೆದ್ದಾರಿ ಸೇರಿದಂತೆ ರಾಜ್ಯದ 9 ರಾಷ್ಟ್ರೀಯ ಹೆದ್ದಾರಿಗಳಲ್ಲಿ ಶೇ. 3ರಿಂದ ಶೇ. 5ರಷ್ಟು ಟೋಲ್ ದರ ಹೆಚ್ಚಳವಾಗಲಿದೆ. ಈ ಮೂಲಕ ವಾಹನ ಸವಾರರ ಜೇಬಿಗೆ ಕತ್ತರಿ ಬೀಳಲಿದೆ. ವಾರ್ಷಿಕ ಹಣದುಬ್ಬರ ಆಧಾರಿತ ಹಾಗೂ ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮ 2008ರ ಅನ್ವಯ ಪ್ರತಿ ವರ್ಷ ಟೋಲ್‌ದರ ಶೇ.3 ರಿಂದ ಶೇ.5ರವರೆಗೆ ಹೆಚ್ಚಳ ಆಗಲಿದೆ. ಎರಡು ವರ್ಷಗಳಿಂದ ಇದೇ ರೀತಿ ಟೋಲ್ ದರ ಏರಿಕೆಯಾಗಿತ್ತು. ಈಗಾಗಲೇ ಎನ್‌ಎಚ್‌ಐಎ ಏಪ್ರಿಲ್ 1 ರಿಂದ ಅನ್ವಯವಾಗುವಂತೆ ಫಾಸ್ಟ್‌ಟ್ಯಾಗ್ ಪಾಸ್ ದರವನ್ನು ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ. ಖಾಸಗಿ ಕಾರು, ಜೀಪ್, ವ್ಯಾನ್ ಸೇರಿದಂತೆ ವಾಣಿಜ್ಯೇತರ ವಾಹನ ಬಳಕೆ ಮಾಲೀಕರು ಇನ್ನು ಮುಂದೆ ವಾರ್ಷಿಕ ಪಾಸ್ಗಳನ್ನು 3000ರೂ. ಬದಲಿಗೆ, 3075 ರೂ.ಪಾವತಿಸಿ ಖರೀದಿಸಬೇಕಾಗಿದೆ. ಪ್ರತಿ ವರ್ಷದಂತೆ ಈ ವರ್ಷವೂ ಏಪ್ರಿಲ್ 1 ರಿಂದ ರಾಜ್ಯದ ಎಲ್ಲಾ ಹೆದ್ದಾರಿಗಳಲ್ಲಿ ಟೋಲ್ ದರ ಹೆಚ್ಚಾಗಿರುವುದು ವಾಹನ ಸವಾರರಿಗೆ ಹೊರೆಯಾಗಲಿದೆ.

## ಪಂಚ ಕಮಿಟಿಯ ಪದಾಧಿಕಾರಿ ಆಯ್ಕೆ



• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಅಧ್ಯಕ್ಷರಾಗಿ ಅನಿಲ್ ಕುಮಾರ ರಗಟೆ, ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನ ಕುರಕೋಟೆ, ಕೋಶಾಧ್ಯಕ್ಷರಾಗಿ ಜಗನ್ನಾಥ ಖುಬಾ, ಕಾರ್ಯದರ್ಶಿ ಅಶೋಕ ನಾಗರಾಳೆ, ಸಹ ಕಾರ್ಯದರ್ಶಿ ಬಸವರಾಜ ಬಾಲಕಿಲೆ ಹಾಗೂ ಸುನಿಲ್ ರಾಯವಾಡೆ, ನಿರ್ದೇಶಕರಾಗಿ ಬಸವರಾಜ ಕೊರಕೆ, ಪುಷ್ಪಾವತಿ ಮಾಮಾ, ಇರಣ್ಣ ಹಲಶೆಟ್ಟೆ, ಭದ್ರಿನಾಥ ಪಾಟೀಲ, ವಿವೇಕಾನಂದ ಹೊದಲೂರೆ, ಬಸವರಾಜ ತೊಂಡಾರೆ, ಮಲ್ಲಿಕಾರ್ಜುನ ಚಿರಡೆ, ಸುನಿಲ್ ಕುಮಾರ ಹೊಳಕುಂದೆ, ರಾಜಕುಮಾರ ಹೊಳಕುಂದೆ ಆಯ್ಕೆ ಮಾಡಲಾಯಿತು. ನಂತರ ಆಯ್ಕೆಯಾದ ಎಲ್ಲರಿಗೂ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ ಉಪಸ್ಥಿತರಿದ್ದರು.

## ಒಳ ಮೀಸಲಿಗಾಗಿ ಬೆಂಗಳೂರಲ್ಲಿ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ

ನ್ಯಾಯಮೂರ್ತಿ ಡಾ.ನಾಗಮೋಹನದಾಸ್ ಅವರ ಒಳ ಮೀಸಲಾತಿಯ ಆಯೋಗದ ವರದಿಯನ್ನು ವಿರೋಧಿಸಿ ಬೆಂಗಳೂರಿನಲ್ಲಿ ಮಾ. 24 ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಸಮಿತಿಯ ಜಿಲ್ಲಾ ಉಪಾಧ್ಯ ಜಗದೀಶ್ ಡಿ ಚೌವ್ಹಾಣ್ ತಿಳಿಸಿದ್ದಾರೆ. ಪಟ್ಟಣದ ಬಜಾಜ್ ಕಲ್ಯಾಣ ಮಂಟಪದಲ್ಲಿನ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನ್ಯಾಯಮೂರ್ತಿ ಡಾ.ನಾಗಮೋಹನ್ ದಾಸ್ ಅವರ ಆಯೋಗದ ವರದಿಯೂ ಅಸಂಬದ್ಧವಾಗಿದೆ. ಈ ವರದಿಯಿಂದ ಭೋವಿ, ಬಂಜಾರ, ಕೊರಮ, ಕೊರಚ, ಛಲವಾದಿ, ಚರ್ಮಕಾರ, ಸೂಕ್ಷ್ಮ ಜಾತಿಗಳಿಗೆ ಮೀಸಲಾತಿಯಲ್ಲಿ ಅನ್ಯಾಯವಾಗುತ್ತಿದೆ ಎಂದು ದೂರಿದ್ದಾರೆ. ವಿವಿಧ ಸಮಾಜದ ಮುಖಂಡರಾದ ಗೋಪಾಲ ಡಿ ರಾಠೋಡ್, ವಿಠ್ಠಲ್ ಕಟೀಮನಿ, ಮರಿಯಪ್ಪ ಭಜಂತ್ರಿ, ಪ್ರವೀಣ್ ಪವಾರ್, ದೇವಿದಾಶ್ ಚವ್ಹಾಣ, ಶ್ರೀಕಾಂತ್ ರಾಠೋಡ್, ವಿಜಯ ಪವಾರ, ಮಹದೇವ ಭಜಂತ್ರಿ, ದೀಪಕ್ ಜಾಧವ, ಜಗದೀಶ್ ಪವಾರ್ ಇದ್ದರು.



ಭೋವಿ, ಬಂಜಾರ, ಕೊರಮ, ಕೊರಚ, ಛಲವಾದಿ, ಚರ್ಮಕಾರ ಸೇರಿದಂತೆ ತುಳಿತಕ್ಕೊಳಗಾದ ಸಮುದಾಯಗಳಿಗೇ ಸರ್ಕಾರವು ಮೀಸಲಾತಿಯಲ್ಲಿ ಅನ್ಯಾಯ ಮಾಡುತ್ತಿರುವುದನ್ನು ವಿರೋಧಿಸಿ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆಯುವ ಪ್ರತಿಭಟನೆಯಲ್ಲಿ ನಮ್ಮ ಸ್ವಾಭಿಮಾನಕ್ಕಾಗಿ ಮತ್ತು ನಮ್ಮ ಹಕ್ಕಿಗಾಗಿ ರಾಜ್ಯಾದ್ಯಂತ ಸಾಕಷ್ಟು ಜನರು ಭಾಗವಹಿಸಲಿದ್ದು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತರಾಗಿ ಸಮಾಜದ ಬಾಂಧವರು ಭಾಗವಹಿಸಬೇಕು

–ಮಹೇಶ ಕಾಶಿ, ಸಮಿತಿಯ ತಾಲೂಕ ಅಧ್ಯಕ್ಷ

### ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ನೇತೃತ್ವ

ಈ ವರದಿಯನ್ನು ವಿರೋಧಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಸಮಿತಿ ಹೋರಾಟದ ರಾಜ್ಯಾಧ್ಯಕ್ಷ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಯವರ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು ಚಿತ್ತಾಪುರ ತಾಲೂಕಿನಿಂದ 5000 ಕ್ಕೂ ಹೆಚ್ಚು ಜನರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ. ರಾಜ್ಯದಲ್ಲಿರುವ ಭೋವಿ, ಬಂಜಾರ, ಕೊರಮ, ಕೊರಚ, ಛಲವಾದಿ, ಚರ್ಮಕಾರ, ಸೂಕ್ಷ್ಮ ಸಮುದಾಯಗಳ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರತಿಭಟನೆ ಯಶಸ್ಸಿ ಗೋಳಿಸಬೇಕು ಎಂದು ಕರೆ ನೀಡಿದ್ದಾರೆ.

## ರಾಜ್ಯದ ಉಪಚುನಾವಣೆಯಲ್ಲಿ ಸಮಸ್ತ ಜನ ನಮಗೆ ಆಶೀರ್ವಾದ ಮಾಡಲಿದ್ದಾರೆ: ವಿಜಯೇಂದ್ರ, ಬಿಜೆಪಿ ರಾಜ್ಯ ಅಧ್ಯಕ್ಷ

# ಮಾಜಿ ಸಚಿವರ ಗೃಹ ಕಚೇರಿಯಲ್ಲಿ ರಂಜಾನ್ ಸಂಭ್ರಮಾಚರಣೆ



• ಮಲ್ಲಮ್ಮ ನುಡಿ ವಾರ್ತೆ, ಹುಮನಾಬಾದ್

ನಗರದಲ್ಲಿ ಮಾಜಿ ಸಚಿವ ರಾಜಶೇಖರ ಪಾಟೀಲ್ ಅವರ ಗೃಹ ಕಛೇರಿಯಲ್ಲಿ ಶನಿವಾರ ಶಾಂತಿ, ಸೌಹಾರ್ದತೆಯ ಪವಿತ್ರ ರಂಜಾನ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ನಗರದ ಈದ್ಗಾ ಮೈದಾನದಲ್ಲಿ ಮುಸ್ಲಿಂರು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿ, ಶುಭ್ರವಾದ ಬಿಳಿ ಧಿರಿಸಿನೊಂದಿಗೆ ತಂಡೋಪ ತಂಡವಾಗಿ ಮಾಜಿ ಸಚಿವರ ಗೃಹ ಕಛೇರಿಗೆ ಭೇಟಿ ಮಾಡಿ ಮಾಜಿ ಸಚಿವ ರಾಜಶೇಖರ ಪಾಟೀಲ್, ಎಂಎಲ್ಸಿ ಡಾ. ಚಂದ್ರಶೇಖರ ಪಾಟೀಲ್, ಎಂಎಲ್ಸಿ ಭೀಮರಾವ ಪಾಟೀಲ್ ಅವರಿಗೆ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಸಂಭ್ರಮಿಸಿದರು.

ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಶಯ ಕೋರಿದ ಮಾಜಿ ಸಚಿವ ರಾಜಶೇಖರ ಪಾಟೀಲ್ ಮಾತನಾಡಿ, ನಾವೆಲ್ಲಾ ಶಾಂತಿಯುತವಾಗಿ, ಮಾನವೀಯತೆಯಿಂದ ಬಾಳಬೇಕು. ಭಾರತ ದೇಶ ಅನೇಕ ಧರ್ಮಗಳಿಂದ ಕೂಡಿದೆ. ಯಾವುದೇ ಧರ್ಮವು ಪ್ರೀತಿಯನ್ನು ಬೋಧಿಸಿದೆ, ದ್ವೇಷವನ್ನಲ್ಲ. ಎಲ್ಲರಿಗೂ ಒಳ್ಳೆಯದಾಗಲಿ. ಎಲ್ಲಾ ಮುಸ್ಲಿಂ ಬಾಂಧವರಿಗೂ ಈದ್ ಮುಬಾರಕ್ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್, ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್, ಜಿಪಂ. ಮಾಜಿ ಅಧ್ಯಕ್ಷ ವೀರಣ್ಣ ಪಾಟೀಲ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ್, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಫ್ಸರಮಿಯ, ಗ್ರಾಮೀಣ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಓಂಕಾರ ತುಂಬಾ, ಯುವ ಕಾಂಗ್ರೆಸ್ ಸಮಿತಿ ಸದಸ್ಯ ಉಮೇಶ ಜಮಗಿ, ದತ್ತಕುಮಾರ ಚಿದ್ರಿ, ಸೈಯದ್ ಯಾಸೀನ್ ಅಲಿ, ಫಯಾಜ ಅಲಿ ಗುತ್ತೆದಾರ್, ಗುಂಡಪ್ಪ ಹೊನ್ನಕೇರಿ ಸೇರಿ ಅನೇಕರಿದ್ದರು.

# ಮಹಿಳೆಯರ : ಡಿಜಿಟಲ್ ಸಖಿ ಯೋಜನೆ ಹಿಡಿದ ಕೈಗನ್ನಡಿ



• ಮಲ್ಲಮ್ಮ ನುಡಿ ವಾರ್ತೆ, ಹುಮನಾಬಾದ

ಇಂದಿನ ಯುಗದಲ್ಲಿ ಮಹಿಳೆಯರು ಎಲ್ಲಾ ರಂಗದಲ್ಲಿ ಮುಂಚುಣಿಯಲ್ಲಿದ್ದು ತನ್ನದೇ ಆದ ಛಾಪನ್ನು ಮೂಡಿಸುತ್ತಿದ್ದಾರೆ. ಹೆಣ್ಣು ಅಬಲೆಯಲ್ಲ ಆಕೆ ಸಬಲೇ ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಸತತವಾಗಿ ನಾಲ್ಕು ವರ್ಷಗಳಿಂದ ಡಿಜಿಟಲ್ ಸಖಿ ಯೋಜನೆ ಹಲವಾರು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು, ಡಿಜಿಟಲ್ ಸಖಿ ಹಾಗೂ ಹೊಸ ಪ್ರತಿಭಾವಂತ ಉದ್ಯಮದಾರಿಗೆ ಉತ್ತಮ ರೀತಿಯಲ್ಲಿ ತರಬೇತಿ ನೀಡಿ, ಅವರ ಹಾಗೂ ಗ್ರಾಮದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸದೃಢತೆಯನ್ನು ಕಾಪಾಡಿ ಮಹಿಳೆಯರ ಸಮಾಜಮುಖಿ ಕಾರ್ಯದಲ್ಲಿ ಡಿಜಿಟಲ್ ಸಖಿ ಯೋಜನೆ ಹಿಡಿದ ಕನ್ನಡಿ ಯಾಗಿದೆ ಎಂದು ತಾಲೂಕ ಪಂಚಾಯತ ಇ.ಒ. ದೀಪಿಕಾ ನಾಯ್ಕರ ನಗರದ ತಾಲೂಕ ಪಂಚಾಯತ್ ಸಭಾಂಗಣದಲ್ಲಿ ಎಲ್ ಅಂಡ್ ಟಿ ಫೈನಾನ್ಸ್–ಎಕ್ಸ್ ಲೈವ್ ಲಿ ಹುಡ್ಸ್ ಸಂಸ್ಥೆ ಏರ್ಪಡಿಸಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಮಹಿಳೆ ಎನ್ನುವ ಪದದಲ್ಲಿಯೇ ಅಪಾರವಾದ ತಾಳ್ಮೆ ಅಡಗಿದೆ ಕೆಲವು ಹೆಣ್ಣು ಮಕ್ಕಳು ತಮಗೆ ಇರುವ ಕರ್ತವ್ಯಗಳನ್ನು ಮರೆಯುತ್ತಿದ್ದಾರೆ. ಶೋಷಣೆಗೆ ಒಳಗಾಗಿ ಅಲ್ಲಿಯೆ ಕುಗ್ಗುತ್ತಿದ್ದಾರೆ. ಹೆಣ್ಣಿಗೆ ಹೆಣ್ಣೆ ಶತ್ರು ಎನ್ನುವಂತೆ ಇನ್ನು ನಮ್ಮಲ್ಲಿ ಹೆಣ್ಣಿನ ಭ್ರೂಣ ಹತ್ಯೆ ಸತತವಾಗಿ ನಡೆಯುತ್ತಲೇ ಇದೆ ಇದೊಂದು ವಿಶಾದದ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.

ಪೊಲೀಸ್ ಇಲಾಖೆಯ ಅಕ್ಕಾ ಪಡೆ ಭಾಗ್ಯಶ್ರೀ ಅವರು ಮಾತನಾಡಿ, ಮನುಷ್ಯತ್ವ ಮತ್ತು ಕುಟುಂಬ ಮೌಲ್ಯಗಳ ಬಗ್ಗೆ ತಿಳಿಸಿದರು. ತಂದೆ–ತಾಯಿಯನ್ನು ಗೌರವದಿಂದ ನೋಡಿಕೊಳ್ಳಬೇಕು ಮತ್ತು ವರದಕ್ಷಿಣೆ ಕಿರುಕುಳ ಕಂಡುಬಂದಲ್ಲಿ ದೂರು ನೀಡುವಂತೆ ಸಲಹೆ ನೀಡಿದರು. ಮಹಿಳೆಯರು ಸರಿಯಾದ ಮಾರ್ಗದಲ್ಲಿ ನಡೆದು ಸಮಾಜಕ್ಕೆ ಮಾದರಿಯಾಗಬೇಕು ಎಂದು ಹೇಳಿದರು.

ವೇದಿಕೆಯ ಮೇಲೆ ಪುರಸಭೆ ಅಧಿಕಾರಿ ಶ್ರೀಮತಿ ರೇಣುಕಾ, ಹುಮನಾಬಾದ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಶ್ರೀಮತಿ ಲಕ್ಷ್ಮಿ ಪಾಟೀಲ್, ಕೆ.ಜಿ.ಬಿ ಬ್ಯಾಂಕ್ ಎಫ್.ಎಲ್.ಸಿ ಶ್ರೀಮತಿ ವೈಶಾಲಿ ಇನ್ನು ಮುಂತಾದವರು ಉಪಸ್ಥಿತರಿದ್ದರು. ಹಾಗೂ ಇದೇ ಸಂದರ್ಭದಲ್ಲಿ ಬಸವಕಲ್ಯಾಣ ಕ್ಲಸ್ಟರ್ ವಲಯ ಮ್ಯಾನೇಜರ್ ಶ್ರೀ ಅಂಬರೀಷ್, ಬೀದರ ಕ್ಲಸ್ಟರ್ ಮ್ಯಾನೇಜರ್ ಬಸವರಾಜ್ ಅಷ್ಟಗಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಫ್ಎಲ್ಸಿ ಪ್ರತಿನಿಧಿ ಆನಂದ ಉಡಬಾಳ, ಪರಿಸರವಾದಿ ಪ್ರದೀಪ ರೆಡ್ಡಿ ಚಿನಕೇರಾ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಅತ್ಯಂತ ಅಚ್ಚು ಕಟ್ಟಾಗಿ ಶ್ರೀಮತಿ ಪಿಂಕಿ ನಿರು ಪಿಸಿದರೆ ಶ್ರೀಮತಿ ಪೂಜಾ ಸ್ವಾಗತಿಸಿದರು, ಶ್ರೀಮತಿ ಮೀನಾ ವಂದನಾರ್ಪಣೆ ಸಲ್ಲಿಸಿದರೆ ವಲಯ ವ್ಯವಸ್ಥಾಪಕರಾದ ಶ್ರೀ ಉಮೇಶ ನೇಳಗೆ ಅವರು ಕಾರ್ಯಕ್ರಮದ ಕುರಿತು ಪ್ರಾಸ್ತವಿಕವಾಗಿ ಮಾತನಾಡಿದರು.

# ಸಂಪಾದಕೀಯ




ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

## ಜಾತೀಯತೆ ರಾಜಕಾರಣ ಯಾವಾಗ ನಿಲ್ಲುತ್ತದೆ?

ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಜಾತಿಯ ಪ್ರಭಾವ ಇನ್ನೂ ಗಟ್ಟಿಯಾಗಿ ಉಳಿದಿದೆ. ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ಉದ್ಯೋಗ ಇಂತಹ ಮೂಲಭೂತ ಸಮಸ್ಯೆಗಳಿಗಿಂತಲೂ ಕೆಲವೊಮ್ಮೆ ಜಾತಿಯ ಆಧಾರದ ಮೇಲೆ ರಾಜಕಾರಣ ನಡೆಯುತ್ತಿರುವುದು ವಿಷಾದನೀಯ ಸಂಗತಿ. ಜನರ ಸೇವೆ ಮಾಡುವುದಕ್ಕಿಂತಲೂ ಮತಗಳ ಲೆಕ್ಕಾಚಾರದಲ್ಲಿ ಜಾತಿಯನ್ನು ಬಳಸುವ ಪ್ರವೃತ್ತಿ ಹೆಚ್ಚುತ್ತಿರುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆಯಾಗಿದೆ. ಚುನಾವಣೆ ಸಮಯ ಬಂದಾಗ ಕೆಲವರು ಜಾತಿಯ ಹೆಸರಿನಲ್ಲಿ ಜನರನ್ನು ವಿಭಜಿಸುವ ಪ್ರಯತ್ನ ಮಾಡುತ್ತಾರೆ. ಇದರಿಂದ ಸಮಾಜದಲ್ಲಿ ಅನಗತ್ಯ ವೈಷಮ್ಯ ಉಂಟಾಗುತ್ತದೆ. ಜಾತಿಯ ರಾಜಕಾರಣದಿಂದ ಕೆಲವರಿಗೆ ತಾತ್ಕಾಲಿಕ ಲಾಭವಾಗಬಹುದು, ಆದರೆ ಸಮಾಜದ ಒಗ್ಗಟ್ಟಿಗೆ ಇದು ಹಾನಿಕಾರಕ.

ಅಭಿವೃದ್ಧಿ ಆಧಾರಿತ ರಾಜಕಾರಣ ನಡೆಯಬೇಕಾದರೆ ಜಾತಿಯ ಪ್ರಭಾವ ಕಡಿಮೆಯಾಗುವುದು ಅವಶ್ಯಕ. ಭಾರತದ ಸಂವಿಧಾನವು ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುತ್ತದೆ. ಸಂವಿಧಾನದ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಜಾತಿ ಆಧಾರಿತ ಭೇದಭಾವದಿಂದ ಮುಕ್ತವಾದ ಸಮಾಜವನ್ನು ಕನಸು ಕಂಡಿದ್ದರು. ಆದರೆ ಇಂದಿಗೂ ರಾಜಕೀಯದಲ್ಲಿ ಜಾತಿಯ ಪ್ರಭಾವ ಸಂಪೂರ್ಣವಾಗಿ ಕಡಿಮೆಯಾಗಿಲ್ಲ ಎಂಬುದು ನೋವಿನ ಸಂಗತಿ. ಜಾತಿಯತೆ ರಾಜಕಾರಣ ನಿಲ್ಲಬೇಕಾದರೆ ಮೊದಲು ಜನರ ಮನೋಭಾವ ಬದಲಾಯಬೇಕು. ಮತದಾರರು ಜಾತಿ ನೋಡದೆ ಅಭಿವೃದ್ಧಿ ಮತ್ತು ಪ್ರಾಮಾಣಿಕತೆಯನ್ನು ಗಮನಿಸಿ ನಾಯಕರನ್ನು ಆಯ್ಕೆ ಮಾಡಿದಾಗ ಮಾತ್ರ ನಿಜವಾದ ಪ್ರಜಾಪ್ರಭುತ್ವ ಬಲವಾಗುತ್ತದೆ. ರಾಜಕೀಯ ಪಕ್ಷಗಳೂ ಕೂಡ ಮತಗಳಿಗಾಗಿ ಜಾತಿಯನ್ನು ಬಳಸುವ ಪದ್ಧತಿಯನ್ನು ತ್ಯಜಿಸಬೇಕು. ಸಮಾಜದಲ್ಲಿ ಶಿಕ್ಷಣ, ಜಾಗೃತಿ ಮತ್ತು ಸಮಾನತೆ ಕುರಿತು ಅರಿವು ಹೆಚ್ಚಾದಂತೆ ಜಾತಿಯ ರಾಜಕಾರಣ ನಿಧಾನವಾಗಿ ಕಡಿಮೆಯಾಗುತ್ತದೆ. ಎಲ್ಲರೂ ಒಂದೇ ಸಮಾಜದ ಭಾಗವೆಂಬ ಮನೋಭಾವ ಬೆಳೆದಾಗ ಮಾತ್ರ ಜಾತಿಯತೆ ರಾಜಕಾರಣಕ್ಕೆ ತೆರೆ ಬೀಳಬಹುದು. ಒಗ್ಗಟ್ಟಿನ ಸಮಾಜ ನಿರ್ಮಾಣವೇ ನಿಜವಾದ ಪ್ರಗತಿಯ ಮಾರ್ಗವಾಗಿದೆ.

# ಬೀದರ್ ಜಿಲ್ಲೆಯಿಂದ 2 ಸಾವಿರ ಬಲಗೈ ಸಮಾಜ ಬಾಂಧವರು ಭಾಗಿ: ಜಂಜಿರೆ




• ಮಲ್ಲಮ್ಮ ನುಡಿ ವಾರ್ತೆ ಬೀದರ್

ಒಳ ಮೀಸಲಾತಿ ವಿರೋಧಿಸಿ, ಹಳೆ ಮೀಸಲಾತಿ ಜಾರಿಗೆ ಆಗ್ರಹಿಸಿ ಈ ತಿಂಗಳ 25ರಂದು ರಾಜ್ಯ ರಾಜ್ಯಧಾನಿ ಬೆಂಗಳೂರಿನ ಫ್ರಿಡಮ್ ಪಾರ್ಕ್ನಲ್ಲಿ ಬೀದರ್ ಜಿಲ್ಲೆಯಿಂದ ವಿವಿಧ ತಾಲೂಕುಗಳಿಂದ ಕೆ–ಕೆಆರ್‌ಟಿಸಿ ಬಸ್‌ಗಳ ಮೂಲಕ ಸುಮಾರು 2 ಸಾವಿರ ಬಲಗೈ ಜಾತಿ ಸಮುದಾಯದ ಜನರು ಭಾಗವಹಿಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ಕಲಬುರಗಿ ವಿಭಾಗಿಯ ಅಧ್ಯಕ್ಷರಾದ ಪ್ರದೀಪ ಜಂಜಿರೆ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ರಾಜ್ಯ ಸರ್ಕಾರ ಒಂದು ಜಾತಿಯನ್ನು ಒಲೈಸಲು ಹೋಗಿ ಇಡೀ 100 ಜಾತಿಗಳನ್ನು ತುಳಿಯಲು ಹೊರಟಿದೆ. ಪ್ರತಿಯೊಂದು ಚುನಾವಣೆಯಲ್ಲಿ ಬಲಗೈ ಜಾತಿಗಳು ಸದಾ ಕಾಂಗ್ರೆಸ್ ಸರ್ಕಾರದ ಬೆಂಬಲಕ್ಕೆ ನಿಲ್ಲುತ್ತವೆ. ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರಲು ಬಲಗೈ ಜಾತಿಗಳ ಪರಿಶ್ರಮ ಇದೆ. ಆದರೆ ಇದೆ ಸರ್ಕಾರ ಉಂಡ ಮನೆಗೆ ದ್ರೋಹ ಬಗೆದಂತೆ ಅವೈಜ್ಞಾನಿಕ ನಾಗಮೋಹನದಾಸ ವರದಿ ಆಧರಿಸಿ ಈ ತಿಂಗಳ 27ರಂದು ಒಳ ಮೀಸಲಾತಿ ಜಾರಿ ಮಾಡಲು ಮುಂದಾಗುವ ಮುಖೇನ ನಮ್ಮ ಮೇಲೆ ಮರಣ ಶಾಸನ ಬರೆಯಲು ಹೊರಟಿದೆ. ಇದನ್ನು ಧಿಕ್ಕರಿಸಿ ಸರ್ಕಾರಕ್ಕೆ ಎಚ್ಚರಿಕೆ ಕೊಡಲೆಂದೆ ಪೂಜ್ಯ ಜ್ಞಾನಪ್ರಕಾಶ ಸ್ವಾಮಿಜಿಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ಎಚ್ಚರಿಸಿದರು.

ಈ ಪ್ರತಿಭಟನೆ ನಮ್ಮ ಮುಂದಿನ ಪಿಳಿಗೆಗೋಸ್ಕರ ಬಹಳಷ್ಟು ಮಹತ್ವದ್ದಾಗಿದೆ. ಬಲಗೈ ಜಾತಿಗಳ ಸಮಾಜ ಬಾಂಧವರು ತಮ್ಮ ಹಕ್ಕಿಗಾಗಿ ಸ್ವಯಂಪ್ರೇರಿತರಾಗಿ ಮುಂದೆ ಬರಬೇಕಿದೆ. ಈ ಸರ್ಕಾರ ತರಲು ನಾವೆಷ್ಟು ಕಾರಣರಾಗಿದ್ದೇವೊ ಈ ಸರ್ಕಾರ ಬೀಳಿಸಲು ಯಾವ ತ್ಯಾಗಕ್ಕೂ ಸಿದ್ಧರಾಗುತ್ತೇವೆ. ನಮಗೆ ಜಿಲ್ಲಾ ಪಂಚಾಯತ, ತಾ.ಪಂ ನಲ್ಲಿ ಕೆಲವೊಂದು ಕಡೆ ಟಿಕೇಟ್ ಕೊಟ್ಟು ಬಾಯಿ ಮುಚ್ಚಿಸುವ ಹುನ್ನಾರ ಬಹಳಷ್ಟು ವರ್ಷಗಳಿಂದ ನಡೆಯುತ್ತಲಿದೆ. ಈಗ ತಾಳ್ಮೆಯ ಕಟ್ಟೆಯೊಡೆದಿದ್ದು,. ಹಳೆ ಮೀಸಲಾತಿಯನ್ನೆ ಜಾರಿ ಮಾಡಿ ಒಳ ಮೀಸಲಾತಿ ಕೈಬಿಟ್ಟರೆ ಉತ್ತಮ ಇಲ್ಲದಿದ್ದರೆ ತಕ್ಕ ಪಾಠ ಕಲಿಸಲಾಗುವುದೆಂದು ಜಂಜಿರೆ ಹೇಳಿದರು.

ಮಾಜಿ ವಿಧಾನ ಪರಿಷತ್ ಸದಸ್ಯರಾದ ಅರವಿಂದಕುಮಾರ ಅರಳಿ ಮಾತನಾಡಿ, ಪರಸ್ಪರ ಸಹೋದರರಂತಿದ್ದ ಬಲಗೈ ಹಾಗೂ ಎಡಗೈ ಜಾತಿಗಳ ನಡುವೆ ಒಳ ಮೀಸಲಾಯಿಯ ಕಿಚ್ಚು ಹೊತ್ತಿಸಿ ಈ ಸರ್ಕಾರ ತಮಸೆ ನೋಡಲು ಮುಂದಾಗಿದೆ. ನಾಗಮೋಹನದಾಸ ಒಂದು ಜಾತಿಗೆ ಮಹತ್ವನೀಡಿ ಇಡೀ ಸಂವಿಧಾನದ ಆಶೆಯಗಳನ್ನು ಗಾಳಿಗೆ ತೂರಿ ಜಾತಿಗಣತಿ ನಡೆಸಿ ವರದಿ ಸಲ್ಲಿಸಿದ್ದಾರೆ. ಇದು ಅವೈಜ್ಞಾನಿಕ ಎಂದು ಗೊತ್ತಾದರೂ ಸರ್ಕಾರ ಒಳ ಮೀಸಲಾತಿ ಜಾರಿ ಮಾಡಲು ಹೊರಟಿರುವುದು ನಾಚಿಕೆಗೇಡಿನ ಸಂಗತಿ ಎಂದು ಹರಿಹೈದರು.

ಬಲಗೈ ಸಮುದಾಯಗಳ ಒಳ ಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಮಹೇಶ ಗೋರನಾಲಕರ್ ಹಾಗೂ ಸಮುದಾಯದ ಹೋರಾಟಗಾರ ಚಂದ್ರಕಾಂತ ನಾರಾಟೆ ಮಾತನಾಡಿ, 25ರಂದು ನಡೆಯಲಿರುವ ಈ ಬೃಹತ್ ಪ್ರತಿಭಟನೆಯಲ್ಲಿ ಇನ್ನು ಹೆಚ್ಚಿನ ಸಮಾಜ ಬಾಂಧವರು ಭಾಗವಹಿಸಿ ನಮ್ಮ ಶಕ್ತಿ ಪ್ರದರ್ಶನಕ್ಕೆ ಸಾಕ್ಷಿಯಾಗಬೇಕೆಂದು ಕರೆ ಕೊಟ್ಟರು.

ಬಲಗೈ ಸಮುದಾಯದ ಹೋರಾಟಗಾರ ರಾಜಕುಮಾರ ಮೂಲಭಾರತಿ, ಬಲಗೈ ಸಮುದಾಯಗಳ ಒಳ ಮೀಸಲಾತಿ ಹೋರಾಟ ಸಮಿತಿ ಸದಸ್ಯರಾದ ಪವನ ಮೀಠಾರೆ, ವಿನೋದ ಬಂದಗೆ, ಅರುಣ ಪಟೇಲ್, ಪ್ರಮುಖರಾದ ದೇವೇಂದ್ರ ಸೋನಿ, ದಿಲೀಪ ಭೋಸ್ಲೆ, ದಿಲೀಪ ವರ್ಮಾ, ಮುಖೇಶ ರಾಯ್, ಶ್ರೀಕಾಂತ ಭವಾನಿ, ಶಂಕರ ಫಿರಂಗೆ, ಶರಣಪ್ಪ ರಾಜಪುರೆ, ನೀರಜ್ ಜನವಾಡಕರ್, ಗೌತಮ ಬಗದಲಕರ್, ಪ್ರಕಾಶ ರಾವಣ, ಸುಬ್ಬಣ್ಣ ಕರಕನಳ್ಳಿ ಪತ್ರಿಕಾಗೋಷ್ಠಿಯಲ್ಲಿದ್ದರು.

# ಸಮಾಜಕ್ಕೆ ವೀರಶೆಟ್ಟಿ ಮಾನಕರ್ ಸೇವೆ ಅನನ್ಯ: ಯಲ್ಲಾಲಿಂಗ




• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಮನುಷ್ಯ ಕೇವಲ ಸುಖ ಸಂಪತ್ತಿಗಿಂತ ತಾನು ಉತ್ತಮವಾಗಿ ಬದುಕುವುದರ ಜತೆಗೆ ಸಮಾಜಕ್ಕೆ ಏನಾದರೂ ಕೊಡುಗೆ ನೀಡುವ ಗುಣ ಬೆಳೆಸಿಕೊಳ್ಳಬೇಕು. ಜೀವನ ಶಾಶ್ವತವಲ್ಲ, ಬದುಕಿದ್ದಾಗ ಮಾಡಿದ ಸೇವೆ ಸಾರ್ಥಕವಾದದು ಎಂದು ಸಾಹಿತ್ಯ ಪರಿಷತ್ತಿನ ಚಿಂಚೋಳಿ ತಾಲೂಕಿನ ಕಾರ್ಯದರ್ಶಿ ಯಲ್ಲಾಲಿಂಗ ದಂಡಿನ ಹೇಳಿದರು. ತಾಲೂಕಿನ ಮುದನ್ನಾಳ ಗ್ರಾಮದಲ್ಲಿ ಸಮಾಜ ಸೇವಾ ರತ್ನ ಪ್ರಶಸ್ತಿ ಪುರಸ್ಕೃತ ಸಮಾಜ ಸೇವಕ ವೀರಶೆಟ್ಟಿ ಮಾನಕರ ರವರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ವೀರಶೆಟ್ಟಿ ಮಾನಕರ್ ಅವರು ಮಾಡಿರುವ ನಿಸ್ವಾರ್ಥ ಸಮಾಜ ಮುಖಿ ಸೇವೆಯನ್ನು ಗುರುತಿಸಿ ಅವರಿಗೆ ಸಮಾಜ ಸೇವಾ ರತ್ನ ಪ್ರಶಸ್ತಿ ನೀಡಿದ್ದು ತುಂಬಾ ಸಂತೋಷವಾಗಿದೆ.

ಇನ್ನು ಮುಂದೆ ಅವರು ಸಮಾಜದಲ್ಲಿ ಬಡವರ, ನಿರ್ಗತಿ–ಕರ ಧ್ವನಿಯಾಗಿ ಸೇವೆ ಮಾಡಿ, ರಾಜ್ಯ ರಾಷ್ಟ್ರ ಮಟ್ಟದ ಪ್ರಶಸ್ತಿಗಳು ದೊರೆಯಲಿ ಎಂದರು. ನಾಗಶೆಟ್ಟಿ ಪಾಟೀಲ್ ಮಾತನಾಡಿ, ಸಮಾಜ ಸೇವಕನಾಗಿ ಕಾರ್ಯನಿರ್ವಹಿಸುತ್ತಿದ್ದ ವೀರಶೆಟ್ಟಿ ಮಾನಕರ್ ಅವರಿಗೆ ಸೇವಾ ರತ್ನ ಪ್ರಶಸ್ತಿ ನೀಡಿದ್ದು,

ಇಡೀ ನಮ್ಮ ಗ್ರಾಮಕ್ಕೆ ಹೆಮ್ಮೆವಾಗಿದೆ. ವೀರಶೆಟ್ಟಿ ಮಾನಕರ್ ಅವರು ಒಬ್ಬ ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದಾರೆ. ಅವರು ಸಮಾಜದಲ್ಲಿ ಬಡವರ ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮುಂದೆ ಇವರಿಗೆ ರಾಜಕೀಯದಲ್ಲಿ ಒಳ್ಳೆಯ ಸ್ಥಾನಮಾನಗಳು ದೊರೆಯಲ್ಲಿ ಎಂದು ಹೇಳಿದರು. ಈ ಸಂದರ್ಭದಲ್ಲಿ ರಾಜು ಪಾಟೀಲ್, ಕೃಷ್ಣ ಮಾನಕರ್, ಮಲ್ಲಿಕಾರ್ಜುನ ಪಾಟೀಲ್, ಅರ್ಜುನ್ ಕಾಲೇಬಾಗ್, ದತ್ತು ಕಾಲೇಬಾಗ್, ಮಸ್ತಾನಮಿಯಾ, ವಿಜಯಕುಮಾರ ಮಾನಕರ್,

ಶಂಭುಲಿಂಗ ಬದಗಿ, ಬಾಬುರಾವ್ ಭಂಗುರ್, ಜೀವನ ಲೋಡೋನೋರ್ ಸೇರಿದಂತೆ ಗ್ರಾಮಸ್ಥರು, ವೀರಶೆಟ್ಟಿ ಮಾನಕರ್

ಅಭಿಮಾನಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸುನೀಲಕುಮಾರ ಬಿರಾದಾರ್ ನಿರೂಪಿಸಿದರು. ರಾಮಶೆಟ್ಟಿ ಮಾಡಗುಳ ವಂದಿಸಿದರು.

# ಮಾ. 25 ರಂದು ಬೆಂಗಳೂರು ಚಲೋ

• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ

ನ್ಯಾಯಮೂರ್ತಿ ನಾಗಮೋಹನ್ ದಾಸ್ ವರೀದಿಯನ್ನು ಧಿಕ್ಕರಿಸಿ ಪ.ಜಾ ಬಲಗೈ ಸಮುದಾಯದ ಮುಖಂಡರು ಮಾರ್ಚ್ 25 ರಂದು ಬೆಂಗಳೂರಿನಲ್ಲಿ ಜ್ಞಾನ ಪ್ರಕಾಶ್ ಸ್ವಾಮೀಜಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಪ.ಜಾ ಬಲಗೈ ಸಮುದಾಯ ಒಕ್ಕೂಟದ ಮುಖಂಡರು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದ ಪ್ರತಿಭಟನಾ ಸಮಾವೇಶದ ಕರಪತ್ರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ರಾಜ್ಯ ಸರ್ಕಾರವು ಶೇಕಡ 17+7ರ ಮೀಸಲಾತಿ ಪ್ರಮಾಣಕ್ಕೆ ರಾಜ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು, ಸಾಮಾನ್ಯ ವರ್ಗದವರು ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಬೇಕೆಂದು ಹೋರಾಟ ರೂಪಿಸಿದ ಹಿನ್ನೆಲೆಯಲ್ಲಿ ಫೆ. 27 ರಂದು ಶೇಕಡ 15+3ರ ಪ್ರಮಾಣದಲ್ಲಿ ಒಳಮೀಸಲಾತಿ ರಹಿತ ನೇಮಕ ಮಾಡಲು ಆದೇಶ ಹೊರಡಿಸಿ ಗೆಜೆಟ್‌ನಲ್ಲಿ ಪಕಟಿಸಿರುತ್ತದೆ. ಆದರೆ, 101 ಜಾತಿಗಳಲ್ಲಿ ಒಂದು ಸಮುದಾಯವು ಶೇಕಡ 15+3 ಮೀಸಲಾತಿಯಲ್ಲಿ ಒಳಮೀಸಲಾತಿಯನ್ನು ಅಳವಡಿಸಬೇಕೆಂದು ಹೋರಾಟ ಮಾಡುತ್ತಿರುವ ಹಿನ್ನೆಲೆಯಲ್ಲಿ ಮಾ 27 ರಂದು ರಾಜ್ಯ ಸಚಿವ ಸಂಪುಟದ ವಿಶೇಷ ಸಭೆಯನ್ನು ಏರ್ಪಡಿಸಲಾಗಿದ್ದು, ಸದರಿ ಸಭೆಯಲ್ಲಿ ಶೇಕಡ 15+3ರ ಮೀಸಲಾತಿಯಲ್ಲಿ ಒಳಮೀಸಲಾತಿಯನ್ನು ಅಳವಡಿಸಬಾರದೆಂದು ತಪ್ಪಿದ್ದಲ್ಲಿ ಮುಂದೆ ಆಗುವ ಎಲ್ಲಾ ಅನಾಹುತಗಳಿಗೆ ರಾಜ್ಯ ಸರ್ಕಾರವೇ ಜವಾಬ್ದಾರಿಯಾಗಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ಪ.ಜಾ ಬಲಗೈ ಜಾತಿಗಳ ಒಕ್ಕೂಟವು ಸರ್ಕಾರಕ್ಕೆ ಎಚ್ಚರಿಸುತ್ತದೆ ಎಂದರು. ಭಾಲ್ಕಿಯಿಂದ ಸುಮಾರು 3000 ಜನರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ಹೊರಡಲಿದ್ದಾರೆ ಎಂದು ಮಾಹಿತಿ ನೀಡಿದರು

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ವಿಶ್ವನಾಥ ಮೋರೆ, ಲಕ್ಷ್ಮಣ ಗುಪ್ತ, ಪ್ರದೀಪ್ ಜಂಜಿರೆ, ಕೀರ್ತಿರತನ್ ಸೋನಾಳೆ, ರಾಜಕುಮಾರ್ ಮೋರೆ, ಪ್ರಶಾಂತ್ ಕೋಟಗಿರ, ವಿಲಾಸ್ ಮೋರೆ, ಮನೋಹರ್ ಸಂತಪುರೆ ಸೇರಿದಂತೆ ಹಲವರು ಇದ್ದರು.

## ಚಳಕಾಪುರ: ಶ್ರೀಸಿದ್ಧಾರೂಢರ 190ನೇ ಜಯಂತಿ ಮಹೋತ್ಸವ ಪ್ರವಚನಕ್ಕೆ ಚಾಲನೆ

# ಜೀವನದಲ್ಲಿ ಜ್ಞಾನ ವೈರಾಗ್ಯ ಎರಡೂ ಮುಖ್ಯ: ಶಿವಕುಮಾರ ಸ್ವಾಮೀಜಿ

• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ

ಜೀವನದಲ್ಲಿ ಆಧ್ಯಾತ್ಮಿಕವಾಗಿ ಮುಂದುವರೆಯಬೇಕಾದರೆ ನಮಗೆ ಜ್ಞಾನ ಮತ್ತು ವೈರಾಗ್ಯ ಎರಡೂ ಮುಖ್ಯವಾಗಿವೆ ಎಂದು ಬೀದರಿನ ಚಿದಂಬರಾಶ್ರಮ ಶ್ರೀ ಸಿದ್ಧಾರೂಢ ಮಠದ ಸದ್ಗುರು ಶ್ರೀ ಶಿವಕುಮಾರ ಮಹಾಸ್ವಾಮಿಗಳು ಪ್ರತಿಪಾದಿಸಿದರು.




ತಾಲೂಕಿನ ಸುಕ್ಷೇತ್ರ ಚಳಕಾಪುರ ಗ್ರಾಮದ ಬ್ರಹ್ಮವಿದ್ಯಾಶ್ರಮ ಶ್ರೀ ಸಿದ್ಧಾರೂಢರ ಮಠದಲ್ಲಿ, ಸದ್ಗುರು ಶ್ರೀ ಸಿದ್ಧಾರೂಢರ 190ನೇ ಜಯಂತಿ ಮಹೋತ್ಸವ ನಿಮಿತ್ಯ ಶನಿವಾರ ಆಯೋಜಿಸಿದ್ದ ಸತ್ಸಂಗ ಪ್ರವಚನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮನುಷ್ಯನಾದವನಿಗೆ ಎಲ್ಲವೂ ಮುಖ್ಯವಾಗಿದೆ. ಆದರೆ ಕೆಲವು ಹಿಡಿಯಬೇಕು ಇನ್ನು ಕೆಲವು ಬಿಡಬೇಕು. ಏನು ಹಿಡಿಯ ಬೇಕು, ಏನು ಬಿಡಬೇಕು ಎನ್ನುವುದು ಸದ್ಗುರು ಸಾನಿಧ್ಯದಿಂದ ಸಾಧ್ಯ. ಸದ್ಗುರುವಿನ ಕೃಪೆಯಾದರೆ ಜೀವನ ಸಾರ್ಥಕತೆಯ ಮಾರ್ಗ ಸಿಗುವುದು. ಸದ್ಗುರು ಶ್ರೀ ಸಿದ್ಧಾರೂಢರು ಅವತಾರ ಪುರುಷರಾಗಿದ್ದು, ಜಗತ್ತಿನ ಕಲ್ಮಶಗಳನ್ನು ತೊಡೆದುಹಾಕುವ ನಿಟ್ಟಿನಲ್ಲಿ ಜನ್ಮ ತಳೆದಿದ್ದಾರೆ. ಅಂತಹ ಪಾವನ ಪುರುಷರ ಜನ್ಮಸ್ಥಳವಾದ ಚಳಕಾಪುರದಲ್ಲಿ ಅವರ ಜಾತ್ರೆ ಮಾಡುತ್ತಿರುವ ನಾವೆಲ್ಲರೂ ಧನ್ಯರು ಎಂದು ಹೇಳಿದರು. ಚಿಕ್ಕಮಠ ಹಳ್ಳಿಖೇಡದ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು ಮಾತನಾಡಿ, ಗುರು ಕರುಣೆಯಿಂದ ಎಲ್ಲವನ್ನು ಪಡೆದುಕೊಳ್ಳಬಹುದು ಎಂದು ಹೇಳಿದರು. ಶ್ರೀ ಸಿದ್ಧಾರೂಢ ಮಠ ಆಳೂರ ಮತ್ತು ಚಳಕಾಪೂರದ ಶ್ರೀ ಶಂಕರಾನಂದ ಸ್ವಾಮಿಗಳು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗುರುದೇವಾಶ್ರಮ ಬೀದರಿನ ಮಾತೋಶ್ರೀ ಸಿದ್ದೇಶ್ವರಿತಾಯಿ, ಕಲಬುರುಗಿಯ ಮಾತೋಶ್ರೀ ಲಕ್ಷ್ಮಿ ದೇವಿತಾಯಿ, ಬೆಳ್ಳೂರಿನ ಮಾತೆ ಅಮೃತಾನಂದಮಯಿ, ಗುರುದೇವಾಶ್ರಮ ಬೀದರ ಹಾಗು ಬಬಚ್ಚಡಿಯ ಶ್ರೀ ಗಣೇಶಾನಂದ ಮಹಾರಾಜರು, ಮಾತೋಶ್ರೀ ಆನಂದಮಯಿತಾಯಿ, ಮಾತೋಶ್ರೀ ಸುಶಾಂತಾತಾಯಿ, ಮಾತೋಶ್ರೀ ಮನಿಷಾತಾಯಿಯವರು ಪ್ರಸ್ತುತ ಪ್ರವಚನದ ವಿಷಯ ತಿಳಿಯಲಹುದೊಳಿದು ಬಿಡಲಹುದು ಎನ್ನುವ ವಿಷಯದ ಮೇಲೆ ಪ್ರವಚನ ಮಾಡಿದರು.

ಕಾರ್ಯಕ್ರಮದಲ್ಲಿ ಶ್ರೀ ಸದ್ರೂಪಾನಂದ ಭಾರತಿ ಸ್ವಾಮಿಗಳು, ವಿನಾಯಕ ಸಾಧಕರು, ಸತ್ಯಾನಂದ ಸ್ವಾಮಿಗಳು, ನರೇಂದ್ರ ಪಾಟೀಲ, ರಮೇಶ ಮಜಕುರಿ, ಮಾತೋಶ್ರೀ ವಿದ್ಯಾವತಿತಾಯಿ, ರಾಜೇಶ್ವರಿತಾಯಿ, ಕಸ್ತೂರಬಾಯಿ ಬಿರಾದಾರ, ಮಾಧವನಂದ ಸ್ವಾಮಿಗಳು, ಗೀತಾ ಶಿವರಾಜ ಪಾಟೀಲ, ಶಿವಶರಣಪ್ಪ

ಸಾವಳಗಿ, ಕಾಶಿನಾಥ ಸುಭಾಷ ಪಾಟೀಲ, ಮಮತಾ ಸುರೇಶ ಪಾಟೀಲ ಉಪಸ್ಥಿತರಿದ್ದರು. ಬಸವರಾಜ ಹುಲೆಪ್ಪನೋರ, ಪ್ರಭು ಮಾಸುಲದಾರ, ಯಲ್ಲಾಲಿಂಗ ರೊಟ್ಟೆಯವರಿಂದ ಸಂಗೀತ ಸೇವೆ ನಡೆಯಿತು. ಮಹೇಶ ಚಂದಾಪುರೆ ಪರಿವಾರದಿಂದ ಪ್ರಸಾದ ಸೇವೆ ನಡೆಯಿತು.

ಹುಬ್ಬಳ್ಳಿಯ ಸಿದ್ದು ಸಾಧಕರು ಸ್ವಾಗತಿಸಿದರು. ನರೇಂದ್ರ ಪಾಟೀಲ ನಿರೂಪಿಸಿದರು. ರಮೇಶ ಮಜಕುರಿ ವಂದಿಸಿದರು.

# ಐಐಟಿ ಜಾಮ್‌ನಲ್ಲಿ 1497ನೇ ಶ್ರೇಣಿ ಪಡೆದ ಸೋಮನಾಥ



• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ

ತಾಲೂಕಿನ ತಳವಾಡ (ಕೆ ) ಗ್ರಾಮದ ಚನ್ನಬಸವೇಶ್ವರ ಗುರುಕುಲ ಪ್ರಥಮ ದರ್ಜೆ ಕಾಲೇಜಿನ ಬಿ ಎಸ್ ಸಿ ವಿದ್ಯಾರ್ಥಿ ಸೋಮನಾಥ ತಂದೆ ಗದುಗೆಪ್ಪ ಸ್ವಾಮಿ ಅವರು ಐಐಟಿ ಜಾಮ್ ನಲ್ಲಿ 2026 ಭೌತಶಾಸ್ತ್ರ ರಾಷ್ಟಮಟ್ಟದಲ್ಲಿ 1497 ಶ್ರೇಣಿ ಪಡೆದು, ಜನರಲ್, ಈ ಡಬ್ಲ್ಯೂ ಎಸ್ ವಿಭಾಗದ ಅಡಿಯಲ್ಲಿ ಅರ್ಹತೆ ಪಡೆದಿದ್ದಾರೆ.

ಕಷ್ಟಪಟ್ಟು ಓದುವ ಆತನ ಅತಿಯಾದ ಆತ್ಮವಿಶ್ವಾಸ, ಪರಿಶ್ರಮ, ಸಾಧಿಸುವ ಛಲ, ತಂದೆ ತಾಯಿಯ ತ್ಯಾಗ, ಗುರುಗಳ ಮಾರ್ಗದರ್ಶನ, ಸತತ ಪ್ರಯತ್ನದಿಂದಾಗಿ ಐಐಟಿ ಮತ್ತು ಜಾಮ್ ಪರೀಕ್ಷೆಯಲ್ಲಿ ಅರ್ಹತೆ ಪಡೆದಿದ್ದಾನೆ.

ವಿದ್ಯಾರ್ಥಿಯ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಆಡಳಿತಾಧಿಕಾರಿ ಮೋಹನ್ ರೆಡ್ಡಿ, ಪ್ರಾಚಾರ್ಯರಾದ ಡಾ.ಕಿರಣ ಸಜ್ಜನ್ ಶೆಟ್ಟಿ ಹಾಗೂ ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿದ್ದು, ಮುಂದಿನ ಏಳಿಗೆಗೆ ಶುಭ ಹಾರೈಸಿದ್ದಾರೆ.

# ಈಶ್ವರ ಖಂಡ್ರೆ ತಮ್ಮ ಗುಣದಿಂದಲೇ ಶ್ರೇಷ್ಠರಾಗಿದ್ದಾರೆ: ಶಿವಕುಮಾರ ಸ್ವಾಮೀಜಿ





• ಮಲ್ಲಮ್ಮ ನುಡಿ ವಾರ್ತೆ ಬೀದರ್

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಬೀದರ್‌ನ ಆಶಾಕಿರಣ ಈಶ್ವರ ಖಂಡ್ರೆ ಅವರ ಕೈಯನ್ನು ನಾವೆಲ್ಲರೂ ಬಲಪಡಿಸಬೇಕು ಎಂದು ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಮನವಿ ಮಾಡಿದ್ದಾರೆ.

ಬೀದರ್‌ನ ಕರ್ನಾಟಕ ಫಾರ್ಮಸಿ ಕಾಲೇಜು ಮೈದಾನದಲ್ಲಿಂದು ಆಯೋಜಿಸಲಾಗಿದ್ದ ಅಭಿನಂದನಾ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಈಶ್ವರ ಖಂಡ್ರೆ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ನಮ್ಮ ಜಿಲ್ಲೆಗೇ ಹೆಮ್ಮೆ ತಂದಿದೆ ಎಂದರು.

**ಈಶ್ವರ ಖಂಡ್ರೆ ಕೈ ಬಲಪಡಿಸಿ: ಜಾಬಶೆಟ್ಟಿ**

ಸಿದ್ದಾರೂಢಮಠದ ಶ್ರೀ ಶಿವಕುಮಾರ ಸ್ವಾಮೀಜಿ ಮಾತನಾಡಿ, ಈಶ್ವರ ಖಂಡ್ರೆ ಅವರಿಗೆ ಭೀಮಣ್ಣ ಖಂಡ್ರೆ ಅವರಿಂದ ದಿವ್ಯ ಶಕ್ತಿ ಲಭಿಸಿದೆ. ಸಮಾಜದ ಒಳಿತಿಗಾಗಿ ಸದಾ ಶ್ರಮಿಸುತ್ತಿರುವ ಈಶ್ವರ ಖಂಡ್ರೆ ಅವರಲ್ಲಿ ಸಂತರ ಕರುಣೆ, ಯೋಧನ ಶೌರ್ಯ, ದಾನಿಯ ದಯಾಗುಣವಿದೆ. ಅವರು ತಮ್ಮ ಗುಣದಿಂದಲೇ ಗೌರವ ಪಡೆದಿದ್ದಾರೆ. ಹೀಗಾಗಿಯೇ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳು ಆಗಮಿಸಿದ್ದಾರೆ ಎಂದರು.

## ಸುನ್ನಿ ಅಸೋಸಿಯೇಶನ್‌ಯಿಂದ ರಂಜಾನ್ ಹಬ್ಬ



ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

: ಪವಿತ್ರ ರಂಜಾನ್ ಹಬ್ಬದ ನಮಾಜ್ ಅಂಕೋಲಾ ಸುನ್ನಿ ಬಾಂಧವರಿಂದ ಪೂರೈಸಲಾಯಿತು. ತಮ್ಮ ಸುನ್ನಿ ಅಸೋಸಿಯೇಶನ್ನಿನ ವಿಶಾಲವಾದ ಪ್ರಾಂಗಣದಲ್ಲಿ ಎಲ್ಲ ಮುಸ್ಲಿಂ ಬಾಂಧವರು ಸೇರಿ ಬಣ್ಣಬಣ್ಣದ ಉಡುಪುಗಳನ್ನು ತೊಟ್ಟು ತಮ್ಮ ತಮ್ಮ ಕುಟುಂಬದ ಸದಸ್ಯರೊಂದಿಗೆ ನಮಾಜ್ ಕೈಗೊಳ್ಳಲು ಆಗಮಿಸಿದ್ದು ಕಂಡುಬಂತು. ಎಲ್ಲರೂ ಉತ್ಸಾಹಭರಿತದಿಂದ ಪವಿತ್ರ ರಂಜಾನ್ ಹಬ್ಬ ನಮಗೆ 30 ದಿನಗಳ ತನಕ ಉಪವಾಸ ಕೈಗೊಂಡು ಚಂದ್ರದರ್ಶನದ ಮೂಲಕ ಹಬ್ಬ ನಿಗದಿಗೊಳಿಸಿದಂತೆ ಹಮ್ಮಿಕೊಂಡು ಮೌಲ್ವಿ ಅಸದುಲ್ಲಾ ಇವರ ಮಾರ್ಗದರ್ಶನದಂತೆ ಎಲ್ಲರೂ ಜಮಾಯಿಸಿ ಪ್ರಾರ್ಥನೆಯನ್ನು ಕೈಗೊಳ್ಳಲಾಯಿತು. ನಮಾಜಿನ ನಂತರ ದುವಾ ಪೂರ್ವದಲ್ಲಿ ರಂಜಾನ್ ಹಬ್ಬದ ಆಚರಣೆ ಮಹತ್ವವನ್ನು ಮೌಲ್ವಿಗಳು ವಿವರಿಸಿದರು. ನಂತರ ಭಯಾನ್ ಕಾರ್ಯಕ್ರಮವೂ ಇತ್ತು.

ಈ ಸಂದರ್ಭದಲ್ಲಿ ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕರಾದ ಅಬ್ದುಲ್ ಖಯಾಂ ಮುಲ್ಲಾ ಶೇಖ್ ಅಲಿ ಮಹಮ್ಮದ್ ಸಾಲಿಯಾ ನಿವೃತ್ತ ಮುಖ್ಯಾಧ್ಯಾಪಕರು ಅಕ್ಬರ್ ಯಾನೆ ಅನ್ವರ್ ಮುಲ್ಲಾ, ಅಮಿರ್ ಖುರೇಶಿ, ಅಬ್ದುಲ್ ಮುತ್ತೆಲಿಕ್ ಶೇಖ್, ಶಿಕ್ಷಕರು ಜಮಾಲ್ ಖುರೇಶಿ, ಅಲ್ಲಿಬಾಬರ್, ಇಬ್ರಾಹಿಂ ಶೇಖ್, ಆಶ್ರಪ್ ಮೈದಿನ್ ಶೇಖ್, ಫೈರೋಜ್ ಇಸ್ಮಾಯಿಲ್ ಶೇಖ್, ಅಬ್ದುಲ್ ಕರೀಮ್ ಮಹಮ್ಮದ್ ಸಾಲಿಯಾ ಶೇಖ್, ಭಾಷಾ ಇತರರ ಮುಂದಾಳತ್ವದಲ್ಲಿ ಹಬ್ಬ ಆಚರಣೆ ಅತ್ಯಂತ ಉತ್ಸಾಹದಿಂದ ಆಚರಿಸಿದ್ದು, ವಿಶೇಷವಾಗಿತ್ತು. ಚಿಕ್ಕಮಕ್ಕಳು ಅತ್ಯಂತ ಹರ್ಷದಿಂದ ಒಬ್ಬರಿಗೊಬ್ಬರು ರಂಜಾನ್ ಹಬ್ಬದ ಶುಭಾಶಯಗಳನ್ನು ತಮ್ಮ ಹಿರಿಯರ ಜೊತೆಯಲ್ಲಿ ಹಂಚಿಕೊಂಡರು. ಉತ್ತರ ಕನ್ನಡ ಜಿಲ್ಲಾ ಪತ್ರಿಕಾ ವರದಿಗಾರರಾದ ಅಖ್ತರ ಸೈಯದ್ ಅವರು ನಮಾಜಿಗೆ ಆಗಮಿಸಿದ ಎಲ್ಲರಿಗೂ ರಂಜಾನ್ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ನಮಾಜ್‌ನ ನಂತರ ಸಿಹಿ ಪಾಯಸ, ಹಣ್ಣು ಹಂಪಲು, ಆಗಮಿಸಿದ ಎಲ್ಲ ಮುಸ್ಲಿಂ ಬಾಂಧವರಿಗೆ ಮತ್ತು ಇನ್ನಿತರರಿಗೆ ವ್ಯವಸ್ಥೆಗೊಳಿಸಲಾಗಿತ್ತು. ಸುನ್ನಿ ಅಸೋಸಿಯೇಶನ್‌ನ ಈ ಕಾರ್ಯ ಶ್ಲಾಘನೀಯ ಎಂದು ಎಲ್ಲರೂ ಹೇಳಿದ್ದು ಕಂಡುಬಂತು.

## ಮುಸ್ಲಿಂ ಬಾಂಧವರಿಂದ ಸಾಮೂಹಿಕ ಪ್ರಾರ್ಥನೆ ಸಂಭ್ರಮದ ಈದ್ ಉಲ್ ಫಿತ್ರ್ ಆಚರಣೆ

ಮಲ್ಲಮ್ಮ ನುಡಿ ವಾರ್ತೆ ಹುಣಸೂರು



ನಗರದ ಮುಸ್ಲಿಂ ಬಾಂಧವರು ಸಂಭ್ರಮದ ರಂಜಾನ್ ಹಬ್ಬದ ಆಚರಣೆಯನ್ನು ನಡೆಸಲಾಯಿತು ನಗರದ ಮಸ್ಜಿದೆ ಆಲ ಮಸೀದಿಯ ಗುರುಗಳಾದ ಖಾಯಮುದ್ದೀನ್ ಸಮಸ್ತ ನಾಡಿನ ಜನತೆಗೆ ಪವಿತ್ರ ರಂಜಾನ್ ಹಬ್ಬದ ಶುಭಾಶಯಗಳು ತಿಳಿಸಿದರು

ನಗರದ ಹೃದಯ ಭಾಗದಲ್ಲಿರುವ ಜಾಮಿಯಾ ಮಸೀದಿ ಮುಸ್ಲಿಂ ಬಾಂಧವರು ಹಾಗೂ ನಗರದ ಸ್ಥಳೀಯ ಮಸೀದಿಗಳಿಂದ ತಜಬಿ ಹೇಳುತ್ತಾ ಮೆರವಣಿಗೆ ಸಾಗಿ .ಈದ್ಗಾ ಮೈದಾನದಲ್ಲಿ ಸೇರಿ ಈದ್ ಉಲ್ ಫಿತರ್ ನಮಾಜ್ ಅನ್ನು ನೆರವೇರಿಸಿ ನಂತರ ಮಾತನಾಡಿ ವರ್ಷದಲ್ಲಿ ಕೇವಲ ಒಂದು ತಿಂಗಳು ಮಾತ್ರ ರಂಜಾನ್ ಆಚರಣೆ ಮಾಡದಲ್ಲ ರಂಜಾನ್ ಹಬ್ಬ ಆಯ್ತು ಆಚರಣೆ ಮುಗಿಯಿತು ಅಂತ ನಾವು ತಿಳಿದುಕೊಳ್ಳಬಾರದು ಮುಂದಿನ ದಿನಗಳಲ್ಲಿ ನಾವು ಅಲ್ಲಾಹನಲ್ಲಿ ಪ್ರಾರ್ಥನೆ ಮಾಡುವ ದಿನಗಳಲ್ಲಿ ಕೂಡ ನೆನಪಲ್ಲಿಟ್ಟುಕೊಂಡು ಪ್ರಾರ್ಥನೆ ಮಾಡಬೇಕು ಅಂತ ಅಭಿಪ್ರಾಯ ವ್ಯಕ್ತಪಡಿಸಿದರು

ಮುಸ್ಲಿಂ ಬಾಂಧವರು ಪ್ರತಿಯೊಬ್ಬರೂ ಕೂಡ ಮನೆಯಲ್ಲಿ ಮಕ್ಕಳಿಂದ ಹಿಡಿದು ಹಿರಿಯರಿಗೂ ಕೂಡ ಖುರಾನ್ ಪ್ರವಚನ ಹಾಗೂ ಪ್ರತಿದಿನ ಐದು ಸಲ ನಮಾಜನ್ನು ಕಡ್ಡಾಯವಾಗಿ ಬಹಳ ನಿಷ್ಠೆಯಿಂದ ಭಕ್ತಿ ಯಿಂದ ನಾವು ಮಸೀದಿಗೆ ಹೋಗಿ ನಮಾಜ್ ಅನ್ನು ಮಾಡಬೇಕು ಎಂದು ಸಲಹೆ ನೀಡಿದರು

ಈ ಸಂದರ್ಭದಲ ಈದ್ಗಾ ಮೈದಾನದಲ್ಲಿ ಭಾರಿ ತಾಪಮಾನ ಇರೋದ್ರಿಂದ ಕೆಲವು ಸಂಘ ಸಂಸ್ಥೆಗಳಿಂದ ಉಚಿತವಾಗಿ ನೀರಿನ ವ್ಯವಸ್ಥೆ ಮಾಡಲಾಗಿತ್ತು ಹಾಗೂ ಎಲ್ಲಾ ಮಸೀದಿಯ ಗುರುಗಳು ಹಾಗೂ ಮುಖಂಡರು ಹಾಜರಿದ್ದರು

## ಶ್ರದ್ಧೆ ಭಕ್ತಿ ರಂಜಾನ್ ಹಬ್ಬ ಆಚರಣೆ



ಹೆಚ್. ವೀರಾಪುರ ಗ್ರಾಮದ ಈದ್ಗಾದಲ್ಲಿ ರಂಜಾನ್ ಪ್ರಯುಕ್ತ ಮುಸ್ಲಿಂ ಬಾಂಧವರಿಂದ ಸಾಮೂಹಿಕ ಪ್ರಾರ್ಥನೆ

ಮಲ್ಲಮ್ಮ ನುಡಿ ವಾರ್ತೆ ಕುರುಗೋಡು :

ಕುರುಗೋಡು ತಾಲೂಕಿನ ಗೆಣಿಕಿಹಾಳ್, ಹೆಚ್. ವೀರಾಪುರ, ಕುರುಗೋಡು, ಗ್ರಾಮಗಳ ಮುಸ್ಲಿಂ ಸಮುದಾಯದವರು ಶನಿವಾರ ಈದ್ ಉಲ್ ಫಿತ್ರ್( ರಂಜಾನ್ ) ಅನ್ನು ಶ್ರದ್ಧೆ ಭಕ್ತಿ ರಂಜಾನ್ ಸಂಭ್ರಮದಿಂದ ಆಚರಿಸಿದರು.

ತ್ಯಾಗ, ಶಾಂತಿಯ ಸಂಕೇತದ ಹಬ್ಬವನ್ನು ತಿಂಗಳ ಉಪವಾಸ ವ್ರತ ಅಂತ್ಯಗೊಳಿಸುವ ಮೂಲಕ ಭಕ್ತಿಯಿಂದ ಆಚರಿಸಿದರು. ಬೆಳಗ್ಗೆ ಆಯಾ ಊರಿನ ಈದ್ಗಾ ಮೈದಾನಗಳಲ್ಲಿ ಸಮಾವೇಶಗೊಂಡು ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು. ಹೊಸ ಧಿರಿಸಿನೊಂದಿಗೆ ಹಬ್ಬ ಸ್ವಾಗತಿಸಿದ ಮಂದಿ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಹರ್ಷ ವ್ಯಕ್ತಪಡಿಸಿದರು.

ಹಳ್ಳಿಗಳು ಹಾಗೂ ಪಟ್ಟಣ ಸೇರಿದಂತೆ ಕೆಲವೆಡೆ ಸಾಮೂಹಿಕ ಪ್ರಾರ್ಥನೆ ನಂತರ ಸಮುದಾಯದ ಎಲ್ಲರೂ ಒಟ್ಟುಗೂಡಿ ಮೆರವಣಿಗೆ ನಡೆಸಿದರು. ಸ್ಥಿತಿ ವಂತರು ತಮ್ಮ ಧರ್ಮದ ಬಡ ಮಂದಿಗೆ ಕೈಲಾದಷ್ಟು ದಾನ ಮಾಡಿದರಲ್ಲದೇ ಹಿರಿಯರಿಂದ ಆಶೀರ್ವಾದ ಪಡೆದರು.

ತಾಲೂಕಿನ ಸಮೀಪ ಇರುವ ಹೆಚ್. ವೀರಾಪುರ ಗ್ರಾಮದ ಈದ್ಗಾದಲ್ಲಿ ಸಾಮೂಹಿಕ ಪ್ರಾರ್ಥನೆ ಶ್ರದ್ಧಾ, ಭಕ್ತಿಯಿಂದ ನೆರವೇರಿತು. ಹಿಂದಿನ ಎರಡು ದಿನಗಳ ಹಿಂದೆಯೇ ಈದ್ಗಾವನ್ನು ಶುಚಿಗೊಳಿಸುವ ಕಾರ್ಯ ನಡೆದಿತ್ತು. ಈದ್ಗಾಕ್ಕೆ ತೆರಳಲಾಗದವರು ಮಸೀದಿಯಲ್ಲೆ ಪ್ರಾರ್ಥನೆ ಸಲ್ಲಿಸುವ ಮೂಲಕ ಹಬ್ಬ ಆಚರಿಸಿದರು. ಪುಟ್ಟ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಹೊಸ ಬಟ್ಟೆ ತೊಟ್ಟು ಕಂಗೊಳಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಹೆಂಗಳೆಯರು ಹಬ್ಬದ ದಿನವೂ ತಮಗಿಷ್ಟವಾದ ವಸ್ತುಗಳ ವ್ಯಾಪಾರ, ವಹಿವಾಟಿನಲ್ಲಿ ತೊಡಗಿದ್ದರು. ಹಬ್ಬದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಪಟ್ಟಣ ಸೇರಿದಂತೆ ತಾಲೂಕಿನ ಎಲ್ಲೆಡೆ ಕುರುಗೋಡು ಪೊಲೀಸ್ ಠಾಣೆಯ ಸಿ. ಪಿ. ಐ ಬಾಳನಗೌಡ್ರು ಹಾಗೂ ಪಿ. ಎಸ್. ಐ ಸುಪ್ರೀತ್ ನೇತೃತ್ವದಲ್ಲಿ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ನಿಯೋಜಿಸಿತ್ತು.



ಹುಣಸೂರು ನಗರದ 18ನೇ ವಾರ್ಡಿನ ಮುಸ್ಲಿಂ ಬ್ಲಾಕ್ ನಗರದ ಡಿ ದೇವರಾಜ ಅರಸು ಕಾಲೇಜಿನ ಪ್ರಥಮ ದರ್ಜೆ ಕಾಲೇಜಿನ ಸಿಡಿಸಿ ಸಮಿತಿಯ ನಾಮ ನಿರ್ದೇಶಕರಾದ ಸಾಹೇಬ್ ಅಹ್ಮದ್ ನಿವಾಸಕ್ಕೆ ಮಾಜಿ ಶಾಸಕ ಹಾಗೂ ಸ್ನೇಹಜೀವಿ ಹೆಚ್ ಪಿ ಮಂಜುನಾಥ್ ಭೇಟಿ ನೀಡಿ ಮುಸ್ಲಿಂ ಬಾಂಧವರಿಗೆ ರಂಜಾನ್ ಶುಭಾಶಯಗಳು ನೀಡಿದರು ಹಾಗೂ ನಂತರ ಗ್ರಾಮಾಂತರ ಬ್ಲಾಕ್ ಯೂತ್ ಕಾಂಗ್ರೆಸ್ ಅಧ್ಯಕ್ಷರಾದ ಫೈಸಲ್ ಹಾಗೂ ಅವರ ಪುತ್ರರಿಯರು ಮಾಜಿ ಶಾಸಕ ಹಾಗೂ ಸ್ನೇಹಜೀವಿ ಎಚ್ ಪಿ ಮಂಜುನಾಥ್ ರವರಿಗೆ ಹಾರ ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಲಾಯಿತು

## ನಳಿನಾಕ್ಷಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ

ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ನಗರದ ಸೆಂಟ್ ಜೋಸೆಫ್ ಕಾನ್ವೆಂಟ್ ಹಾಗೂ ಟ್ಯಾಲೆಂಟ್ ಶಾಲೆಯಲ್ಲಿ ಎರಡು ಪರೀಕ್ಷಾ ಕೇಂದ್ರಗಳಲ್ಲಿ 2026 27ನೇ ಸಾಲಿನ ಆದರ್ಶ ವಿದ್ಯಾಲಯ 6ನೇ ತರಗತಿಯ ಪರೀಕ್ಷೆಯ ನೋಂದಣಿಯ 587 ವಿದ್ಯಾರ್ಥಿಗಳಲ್ಲಿ 547 ಪರೀಕ್ಷೆಯನ್ನು ಬರೆದಿದ್ದಾರೆ ಹಾಗೂ 47 ವಿದ್ಯಾರ್ಥಿಗಳು ಗೈರುರಾಜರಾಗಿದ್ದಾರೆ ಎಂದು ಶಿಕ್ಷಣ ಇಲಾಖೆಯ ಸ್ವಯಂ ಯೋಜಕರು ಅಧಿಕಾರಿ . ಹೆಚ್ ಎನ್ ನಂಜುಂಡಪ್ಪ ತಿಳಿಸಿದ್ದಾರೆ .

ನಂತರ ಸುದ್ದಿಗಾರೊಂದಗೆ ಮಾತನಾಡಿ ಪರೀಕ್ಷೆ ಬರೆಯುವ ಕೇಂದ್ರಗಳು ಸೆಂಟ್ ಜೋಸೆಫ್ ನಲ್ಲಿ 14 ಹಾಗೂ ಟ್ಯಾಲೆಂಟ್ ಶಾಲೆಯಲ್ಲಿ 11 ಒಟ್ಟು 25 ಪರೀಕ್ಷೆ ಬರೆಯುವ ಕೇಂದ್ರಗಳ ಕೊಠಡಿಯಲ್ಲಿ 547 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದಿದ್ದಾರೆ ಎಂದರು

ಪರೀಕ್ಷಾ ಕೇಂದ್ರಕ್ಕೆ 28 ಶಿಕ್ಷಕರ ಮಾಡಿದ್ದು ಹಾಗೂ ಎರಡು ಅಧೀಕ್ಷಕರ ಕೇಂದ್ರೀಯ ಶಿಕ್ಷಕರನ್ನು ನೇಮಕಾತಿ ಮಾಡಲಾಗಿತ್ತು

ಮೈಸೂರಿನ ಡಯಟ್ ವಸಂತ ಮಾಲ್ ಹಿರಿಯವ ಉಪನ್ಯಾಶಕರು ನಳಿನಾಕ್ಷಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿ ನಡೆಸಿದರು ಎಂದು ತಿಳಿಸಿದ್ದಾರೆ




## ಹಳ್ಳಿಗಳಲ್ಲಿ ಹೋಳಿ ಹಬ್ಬದ ಸಂಭ್ರಮ ಸಡಗರ ನೋಡುಗರ ಕಣ್ಮನ ಸೆಳೆತ

ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ



ಕಂಪ್ಲಿ ತಾಲೂಕಿನ ಪ್ರತಿ ಗ್ರಾಮದಲ್ಲಿ ಹೋಳಿಯ ರಂಗು ರಂಗಿನ ಬಣ್ಣದ ಸೌಂದರ್ಯ ನೋಡುಗರ ಕಣ್ಮನ ಸೆಳೆಯುವ ನೋಟ. ಹೋಳಿ ಹಬ್ಬವು ಒಳ್ಳೆಯದರ ಜಯ, ಪ್ರೀತಿ, ಏಕತೆ ಮತ್ತು ಹೊಸ ಆರಂಭವನ್ನು ಸಂಕೇತಿಸುವ ಬಣ್ಣಗಳ ಹಬ್ಬವಾಗಿದೆ. ಇದು ಸಾಮಾಜಿಕ ಅಂತರವನ್ನು ಮರೆತು, ಬಣ್ಣಗಳನ್ನು ಎರಚುವ ಮೂಲಕ ಬಾಂಧವ್ಯವನ್ನು ಬಲಪಡಿಸುತ್ತದೆ. ಹೋಳಿಕಾ ದಹನವು ಕೆಟ್ಟ ಆಲೋಚನೆಗಳನ್ನು ಸುಟ್ಟುಹಾಕಿ, ಜೀವನದಲ್ಲಿ ಸಕಾರಾತ್ಮಕತೆಯನ್ನು ತರುವ ಆಧ್ಯಾತ್ಮಿಕ ಮಹತ್ವವನ್ನು ಹೊಂದಿದೆ.

**ಹೋಳಿ ಹಬ್ಬದ ಮುಖ್ಯ ಮಹತ್ವಗಳು ಇಲ್ಲಿವೆ**

- **ಒಳ್ಳೆಯದರ ಜಯ (ವಿಜಯೋತ್ಸವ)**

ಪುರಾಣದ ಪ್ರಕಾರ, ಭಕ್ತ ಪ್ರಹ್ಲಾದನನ್ನು ಕೊಲ್ಲಲು ಯತ್ನಿಸಿದ ಹೋಳಿಕಾ (ಕೆಟ್ಟತನ) ಸುಟ್ಟುಹೋಗಿ, ಪ್ರಹ್ಲಾದ (ಒಳ್ಳೆಯತನ) ಬದುಕುಳಿದ ದಿನ. ಕೆಟ್ಟ ಆಲೋಚನೆಗಳು ಮತ್ತು ದುಷ್ಕೃತ್ಯಗಳ ನಾಶವನ್ನು ಇದು ಸಾರುತ್ತದೆ.

- **ಸಾಮಾಜಿಕ ಏಕತೆ ಮತ್ತು ಬಾಂಧವ್ಯ**

ಯಾವುದೇ ಮೇಲು–ಕೀಳು, ಜಾತಿ–ಬೇಧವಿಲ್ಲದೆ ಎಲ್ಲರೂ ಒಂದಾಗಿ ಬಣ್ಣದ ಓಕುಳಿ ಆಡುವುದರಿಂದ ಸಮಾಜದಲ್ಲಿ ಪ್ರೀತಿ ಮತ್ತು ಸಾಮರಸ್ಯ ಮೂಡುತ್ತದೆ.

ಹೊಸ ಆರಂಭ (ವಸಂತ ಕಾಲ)

ಚಳಿಗಾಲ ಮುಗಿದು ವಸಂತ ಋತುವಿನ ಆಗಮನದ ಸಂಕೇತವಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಪ್ರಕೃತಿಯಲ್ಲಿನ ಹೊಸತನದಂತೆ ಮನುಷ್ಯನ ಜೀವನದಲ್ಲೂ ಹೊಸ ಸಂತೋಷದ ಆರಂಭವಾಗಲಿ ಎಂಬ ಆಶಯ ಇದರಲ್ಲಿದೆ.

ಕಾಮನ ಹಬ್ಬ (ಕಾಮದಹನ)

ಕರ್ನಾಟಕದ ಹಲವೆಡೆ ಇದನ್ನು ಕಾಮನ ಹಬ್ಬ ಎಂದು ಕರೆಯುತ್ತಾರೆ. ಶಿವನ ಕಣ್ಣಿಗೆ ಸುಟ್ಟ ಕಾಮದೇವನನ್ನು ಸ್ಮರಿಸುತ್ತಾ, ಕಾಮ–ಕ್ರೋಧಗಳನ್ನು ತ್ಯಜಿಸಿ ಮನಸ್ಸಿನ ಶುದ್ಧೀಕರಣವನ್ನು ಈ ಆಚರಣೆ ಸಂಕೇತಿಸುತ್ತದೆ.

- **ವೈಜ್ಞಾನಿಕ ಮತ್ತು ಆರೋಗ್ಯ ಮಹತ್ವ**

ಹೋಳಿಕಾ ದಹನದ ಶಾಖವು ಸುತ್ತಮುತ್ತಲಿನ ಬ್ಯಾಕ್ಟೀರಿಯಾಗಳನ್ನು ನಾಶಪಡಿಸುತ್ತದೆ ಎಂಬ ನಂಬಿಕೆಯಿದೆ. ಬಣ್ಣಗಳ ಎರಚಾಟವು ಚರ್ಮದ ಆರೋಗ್ಯಕ್ಕೂ ಒಳ್ಳೆಯದು, ಆದರೆ ಪ್ರಸ್ತುತ ದಿನಗಳಲ್ಲಿ ನೈಸರ್ಗಿಕ ಬಣ್ಣಗಳನ್ನು ಬಳಸುವುದು ಮುಖ್ಯವಾಗಿದೆ. ಒಟ್ಟಾರೆಯಾಗಿ, ಹೋಳಿ ಹಬ್ಬವು ಬಣ್ಣಗಳ ಮೂಲಕ ಜೀವನದಲ್ಲಿ ಸಂತೋಷ, ಪ್ರೀತಿ ಮತ್ತು ಸಕಾರಾತ್ಮಕ ಶಕ್ತಿಯನ್ನು ತುಂಬುವ ಹಬ್ಬವಾಗಿದೆ.

## ವೃತ್ತಿ ಶಿಕ್ಷಣ: ಕರಿಯರ್ ಮೇಳ

ಬೀದರ: ವೃತ್ತಿಪರ ಕೋರ್ಸುಗಳ ಮಾಹಿತಿ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ನಂತರದ ಶಿಕ್ಷಣ ಅವಕಾಶಗಳು ಸೇರಿದಂತೆ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಮಾಹಿತಿ ನೀಡುವುದಕ್ಕಾಗಿ 2026ನೇ ಮಾರ್ಚ್.24 ರಂದು ಬೀದರ್ ನಗರದ ಶಾಹೀನ್ ಕಾಲೇಜು ಕ್ಯಾಂಪಸ್‌ನಲ್ಲಿ ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕರಿಯರ್ ಮೇಳ ನಡೆಯಲಿದೆ.ಕರ್ನಾಟಕ ಸರ್ಕಾರ , ಶಾಲಾ ಶಿಕ್ಷಣ ಇಲಾಖೆ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಬೆಂಗಳೂರು, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ ಬೀದರ್ , ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಸಂಯುಕ್ತವಾಗಿ ಆಯೋಜಿಸಿರುವ ಈ ಮಹತ್ವದ ಮತ್ತು ಉಪಯುಕ್ತವಾಗಿರುವ ಕಾರ್ಯಕ್ರಮದ ಉದ್ಘಾಟನೆ ಮಂಗಳವಾರ ಮಾರ್ಚ್.24 ರಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ.ದಿನವಿಡೀ ನಡೆಯುವ ಈ ಕರಿಯರ್ ಮೇಳದಲ್ಲಿ ಸಂಪನ್ಮೂಲ ವ್ಯಕ್ತಿಗಳು ಹಾಗೂ ವಿವಿಧ ಸಂಸ್ಥೆಗಳ ಮುಖ್ಯಸ್ಥರು, ವೃತ್ತಿಪರ ಕೋರ್ಸು, 10 ನೇ ಮತ್ತು ಪಿಯುಸಿ ನಂತರದ ಶಿಕ್ಷಣದ ಅವಕಾಶಗಳು, ಸಿಇಟಿ, ನೀಟ್, ಜೆಎಎ, ಕ್ಲಾಟ್ ಮತ್ತು ಇತರ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಗಳು, ಎಂಜಿನಿಯರಿಂಗ್, ಮೇಡಿಕಲ್, ಪ್ಯಾರಾಮೇಡಿಕಲ್ ಮತ್ತು ಪದವಿ ಕೋರ್ಸುಗಳ ಬಗ್ಗೆ ಮಾಹಿತಿ ನೀಡುವರು.ಐಟಿಐ, ಡಿಪ್ಲೋಮಾ, ಕೌಶಲ ತರಬೇತಿ ಕಾರ್ಯಕ್ರಮ, ವಿದ್ಯಾರ್ಥಿ ವೇತನ, ಸರಕಾರಿ ಯೋಜನೆಗಳು, ವಿವಿಧ ಕಾಲೇಜು ಮತ್ತು ಸಂಸ್ಥೆಗಳು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಎಂಜಿಯರಿಂಗ್, ಮೇಡಿಕಲ್ ಮತ್ತು ಪ್ಯಾರಾ ಮೇಡಿಕಲ್ ಸಂಸ್ಥೆಗಳು, ಕೃಷಿ ವಿವಿಯಲ್ಲಿರುವ ಕೋರ್ಸುಗಳು, ಕೃಷಿ ವಿಭಾಗದ ಅಧ್ಯಯನ ಕೋರ್ಸುಗಳು, ವಿದ್ಯಾರ್ಥಿಗಳಿಗಾಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇರುವ ಯೋಜನೆಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಇತರ ಸರಕಾರಿ ಉದ್ಯೋಗಗಳ ಮಾಹಿತಿ, ಎನ್‌ಜಿಒ ಮುಂತಾದವುಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ.

# ಸಮಾಜ ಅಭಿವೃದ್ಧಿಗೆ ಶ್ರಮವಹಿಸಿ : ಗಣೇಶ್



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಸಮಾಜಕ್ಕೆ, ಸಮಾಜದ ಸುಧಾರಣೆಗೆ ಮಹತ್ವ ನೀಡಿ ಸಮಾಜಕ್ಕೆ ಶ್ರಮಹಿಸಬೇಕು ಎಂದು ಮಾದಿಗ ದಂಡೊರ ಹೋರಾಟ ಸಮಿತಿ ಒಖಕಖ ರಾಜ್ಯ ಉಪಾಧ್ಯಕ್ಷ ಗಣೇಶ್ ದುಪ್ಪಲ್ಲಿ ಕರೆ ನೀಡಿದರು. ಒಖಕಖ ಜಿಲ್ಲಾ ಸಮಿತಿಯ ವತಿಯಿಂದ ಶನಿವಾರ ನಗರದಲ್ಲಿನ ಹಳೆ ಪ್ರವಾಸಿ ಮಂದಿರದಲ್ಲಿ ತಾಲೂಕಿನ ಹೊರುಂಚಾ ಗ್ರಾಮ ಘಟಕದ ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರ ನೀಡಿ ಮಾತನಾಡಿ,

ಪ್ರತಿಯೊಂದು ಸಂದರ್ಭದಲ್ಲಿ ಸಮಾಜದ ಏಳಿಗೆಗಾಗಿ ಪ್ರತಿಯೊಬ್ಬರೂ ದುಡಿಯುವ ಮೂಲಕ ಸಮಾಜಕ್ಕೆ ನೇರವಾಗಬೇಕು ಹಾಗೆಯೇ ಸಮಾಜದ ಕಾರ್ಯ ವೈಕರಿಯನ್ನು ಮುಂದಿನ ದಿನಗಳಲ್ಲಿ ಬಡ ಬಗ್ಗರಿಗೆ ನೇರವಾಗಬೇಕು ಎಂದು ಸಲಹೆ ನೀಡಿದರು, ಜಿಲ್ಲಾಧ್ಯಕ್ಷ ಕಾಶಪ್ಪ ಮಾದಿಗ ಹೆಗ್ಗಣಗೇರಾ ಮಾತನಾಡಿ, ಈ ಒಂದು ಆದೇಶ ರಾಜ್ಯಾಧ್ಯಕ್ಷ ನರಸಪ್ಪ ದಂಡೊರ ಇವರ ನೇತೃತ್ವದಲ್ಲಿ ನೀಡಲಾಗಿದ್ದು,

ಮಾದಿಗ ಸಮಾಜದ ಜಿಲ್ಲೆಯಲ್ಲಿನ ಕಟ್ಟಕಡೆಯ ಬಡ ವ್ಯಕ್ತಿಯ ನ್ಯಾಯಕ್ಕೆ ಹೋರಾಟದ ಮುಖಾಂತರ ನೇರವಾಗುವ ಒಖಕಖ ಸಮಿತಿ ನಮ್ಮದಾಗಿದ್ದು,

ನೂತನ ಪದಾಧಿಕಾರಿಗಳು ತಮ್ಮ ಸಮಾಜ ನಿಷ್ಠೆ, ಹಾಗೂ ಅನ್ಯಾಯದ ವಿರುದ್ಧ ಹೋರಾಟಕ್ಕೆ ಬದ್ದರಾಗಿರಬೇಕು ಎಂದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಮುಂಡರಗಿ ಉಪಸ್ಥಿತರಿದ್ದರು.

ನೂತನ ಪದಾಧಿಕಾರಿಗಳು.

ಗ್ರಾಮ ಘಟಕ ಗೌರವ ಅಧ್ಯಕ್ಷ ಶಶಿಕುಮಾರ್ ತೊದಲೋರು ಅಧ್ಯಕ್ಷರಾಗಿ ಸಲ್ಮಾನ್ ಡೋಳೇನೂರ್, ಉಪಾಧ್ಯಕ್ಷ ತಿಪ್ಪಣ್ಣ ತೊದಲೂರ್, ವಿಜಯಕುಮಾರ್ ಡೋಳ್ಳೆನೂರ್, ಪ್ರಧಾನ ಕಾರ್ಯದರ್ಶಿ ಆನಂದ್ ಡೊಳ್ಳನೂರ್, ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ್ ಶೆಟ್ಟಿಗೇರಾ, ಸಹ ಕಾರ್ಯದರ್ಶಿಯಾಗಿ ಸುನಿಲ್ ಬಡಿಗೇರ್,ಖಜಂಚಿ ಶಿವಶರಣ ಬಡಿಗೇರ್, ಕಾರ್ಯಕಾರಣಿ ಸದಸ್ಯರಾಗಿ ಸಿಮೆನ್ ಹೊಸಳ್ಳಿ, ಮರಲಿಂಗಪ್ಪ, ಭೀಮರಾಯ, ಡೊಳ್ಳುನೂರು,

ಈ ಸಂದರ್ಭದಲ್ಲಿ ದುರ್ಗಪ್ಪ, ಮರಲಿಂಗ, ಶಾಮ್ ಮುಂಡರಿಗಿ ಇದ್ದರು.

# ಬೆಳೆ ಹಾನಿ, ರೈತರಿಗೆ ಪರಿಹಾರ ಒದಗಿಸಿ: ಶ್ರೀಧರ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಕೆಲ ದಿನಗಳ ಹಿಂದೆ ಯಾದಗಿರಿ ಮತಕ್ಷೇತ್ರದ ವಡಗೇರಾ ಭಾಗದಲ್ಲಿ ಸುರಿದ ಅಕಾಲಿಕ ಆಲೆಕಲ್ಲು ಮಳೆಯಿಂದ ಚನ್ನೂರ.ಜೆ, ಗೊಂದೆನೂರ, ಕೊಂಕಲ್, ಕುರಿಹಾಳ ಇನ್ನಿತರ ಗ್ರಾಮಗಳಲ್ಲಿ ರೈತರ ಅಪಾರ ಭತ್ತ, ಜೋಳ, ಸಜ್ಜೆ, ಹತ್ತಿ ಬೆಳೆಗಳು ನಾಶವಾಗಿದ್ದು, ರಾಜ್ಯ ಸರ್ಕಾರ ಕೂಡಲೇ ಪರಿಹಾರ ನೀಡಬೇಕೆಂದು ಬಿಜೆಪಿ ಜಿಲ್ಲಾ ಯುವ ಘಟಕದ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಮತಕ್ಷೇತ್ರದಲ್ಲಿ ಪ್ರಮುಖವಾಗಿ ಭೀಮಾ–ಕೃಷ್ಣಾ ನದಿಗಳು ಹರಿಯುತ್ತವೆ, ನದಿ ತೀರದ ರೈತರು ವಿವಿಧ ಬ್ಯಾಂಕ್‌ಗಳಿಂದ ಲಕ್ಷಾಂತರ ರೂ. ಸಾಲ ತೆಗೆದು–ಕೊಂಡು ತಮ್ಮ ಜಮೀನನ್ನು ನೀರಾವರಿ ಕ್ಷೇತ್ರವನ್ನಾಗಿ ಮಾಡಿಕೊಂಡು ಬದುಕು ಸಾಗಿಸುತ್ತಿದ್ದಾರೆ, ಆದರೆ ಮಳೆಗಾಲದಲ್ಲಿ ಪ್ರತಿ ವರ್ಷ ಮಹಾರಾಷ್ಟ್ರ ಹಾಗೂ ಈ ಭಾಗದಲ್ಲಿ ಸುರಿಯುವ ಭಾರಿ ಮಳೆಗೆ ಎರಡು ನದಿಗಳ ಪ್ರವಾಹ ಹೆಚ್ಚಾಗಿ ರೈತರ ಬೆಳೆಗಳು ನಾಶವಾಗಿ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ, ಸರ್ಕಾರ ಮಾತ್ರ ಈ ವರ್ಷ ಸ್ವಲ್ಪ ಹಣ ನೀಡಿ ಕೈ ತೊಳೆದುಕೊಂಡಿದೆ,

ಆಲೆಕಲ್ಲು ಮಳೆಯಿಂದ ರೈತರಿಗೆ ಮತ್ತೊಂದು ಹೊಡೆತ ಬಿದ್ದಂತಾಗಿದೆ, ಅವರು ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ, ಸರ್ಕಾರ ಕೂಡಲೇ ಬೆಳೆ ನಷ್ಟವಾದ ರೈತರಿಗೆ ಸೂಕ್ತ ಪರಿಹಾರ ನೀಡಬೇಕು, ಅಂದಾಗ ಮಾತ್ರ ರೈತರು ಕೃಷಿ ಕ್ಷೇತ್ರದಲ್ಲಿ ಜೀವನ ಸಾಗಿಸಲು ಸಾಧ್ಯ, ಈ ನಿಟ್ಟಿನಲ್ಲಿ ಅವರ ನೆರವಿಗೆ ಬರಬೇಕೆಂದು ಆಗ್ರಹಿಸಿದ್ದಾರೆ.

# ರಂಜಾನ್ ಸಂಭ್ರಮ ಸಾಮೂಹಿಕ ನಮಾಜ್ ಸಲ್ಲಿಕೆ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಪವಿತ್ರ ರಂಜಾನ್ ಮಾಸದ ಅಂಗವಾಗಿ ಶನಿವಾರ ನಾಯ್ಕಲ್ ಗ್ರಾಮದ ಹೊರವಲಯದಲ್ಲಿರುವ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಡಗರ–ಸಂಭ್ರಮದಿಂದ ಸಾಮೂಹಿಕ ನಮಾಜ್ ಸಲ್ಲಿಸಿದರು. ಬೆಳಿಗ್ಗೆಯೇ ಹೊಸ ಬಟ್ಟೆ ಧರಿಸಿ ಈದ್ಗಾ ಮೈದಾನಕ್ಕೆ ಆಗಮಿಸಿದ ನೂರಾರು ಮುಸ್ಲಿಂ ಬಾಂಧವರು, ಶಿಸ್ತುಬದ್ಧವಾಗಿ ಸಾಲಿನಲ್ಲಿ ನಿಂತು ಪ್ರಾರ್ಥನೆ ಮಾಡಿದರು.

ಈ ಸಂದರ್ಭದಲ್ಲಿ ಮೌಲಾನಾ ಮಹಮ್ಮದ್ ಹಫೀಜ್ ಸಾಬ್ ಅವರು ಪ್ರಾರ್ಥನೆ ನೆರವೇರಿಸಿಕೊಟ್ಟರು. ನಂತರ ಸಿರಾಜ್ ಸಾಬ್ ಮೌಲಾನ್ ಅವರು ಉಪದೇಶ (ಖುತ್ಬಾ) ನೀಡಿ, ರಂಜಾನ್ ಹಬ್ಬದ ಮಹತ್ವ ಹಾಗೂ ಸಮಾಜದಲ್ಲಿ ಶಾಂತಿ, ಸಹಬಾಳ್ವೆಯ ಅಗತ್ಯದ ಬಗ್ಗೆ ಬೋಧನೆ ಮಾಡಿದರು. ಪ್ರಾರ್ಥನೆಯ ನಂತರ ಪರಸ್ಪರ ಆಲಿಂಗಿಸಿಕೊಳ್ಳುವ ಮೂಲಕ ಈದ್ ಮುಬಾರಕ್ ಎಂದು ಶುಭಾಶಯ ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ವಡಗೇರಾ ತಾಲೂಕು ಗ್ಯಾರಂಟಿ ಅಧ್ಯಕ್ಷರಾದ ಖಾನಾ ಮೈನೋದ್ದಿನ್ ಮಿರ್ಜಿ, ಬಾಸುಮೀಯಾ ಹೊಸಳ್ಳಿ, ಚಾಂದ ಸಾಬ್ ಅಬಕಾರಿ,ಇಸ್ಮಾಯಿಲ್ ಸಾಬ್ ಕುರಕುಂದಾ, ಖಾಜಾಮೈನೊದಿನ್,ಇಸ್ಕಾನ್ ಅದೋನಿ, ರಜಾಬ ಚಟ್ನಳ್ಳಿ, ಅಲ್ಲಿಸಾಬ್ ಮುಜಾವರ್, ಚಾಂದಸಾಬ್ ಬಬಲಾದ, ಸಲಿಂಸಾಬ್ ಗೊಡಿಕಾರ್, ಮೈಹಿಬೂಬಸಾಬ ಹೊನ್ನಳ್ಳಿ, ಸೇರಿದಂತೆ ಸಮುದಾಯದ ನೂರಾರು ಮುಖಂಡರು ಹಾಗೂ ಯುವಕರು ಪಾಲ್ಗೊಂಡಿದ್ದರು. ಮೈದಾನದ ಸುತ್ತಮುತ್ತ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

# ಶ್ರದ್ಧಾಭಕ್ತಿ, ಸಹನೆ ಭಾವೈಕ್ಯತೆಯ ಸಂಕೇತ: ರಂಜಾನ್ ಸಂಭ್ರಮ




• **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ**

ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮೀಣ ವಲಯದಲ್ಲಿ ಶನಿವಾರ ಇಸ್ಲಾಂ ಧರ್ಮದ ಪವಿತ್ರ ಹಬ್ಬವಾದ 'ಈದ್–ಉಲ್–ಫಿತರ್' ಅನ್ನು ಅತ್ಯಂತ ಸಡಗರ, ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಿಸಲಾಯಿತು.

ಕಳೆದ ಒಂದು ತಿಂಗಳಿನಿಂದ ಕಠಿಣ ಉಪವಾಸ ವ್ರತಾಚರಣೆಯಲ್ಲಿ ನಿರತರಾಗಿದ್ದ ಮುಸ್ಲಿಂ ಬಾಂಧವರು, ವ್ರತದ ಕೊನೆಯ ದಿನವಾದ ಶನಿವಾರ ಮುಂಜಾನೆಯೇ ಉತ್ಸಾಹದಿಂದ ಹಬ್ಬದ ಆಚರಣೆಯಲ್ಲಿ ತೆ–ೂಡಗಿದ್ದರು. ಮಕ್ಕಳು, ಯುವಕರು ಹಾಗೂ ಹಿರಿಯರು ಹೊಸ ಬಟ್ಟೆಗಳನ್ನು ಧರಿಸಿ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಮೆರವಣಿಗೆಯಲ್ಲಿ ಸಾಗಿ ಈದ್ಗಾ ಮೈದಾನ ತಲುಪಿದರು.

ಅಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಬಾಂಧವರು ಶಿಸ್ತುಬದ್ಧವಾಗಿ ಸಾಮೂಹಿಕ ನಮಾಜ್ ಸಲ್ಲಿಸಿದರು. ನಂತರ ಒಬ್ಬರಿಗೊಬ್ಬರು ಆಲಿಂಗಿಸಿಕೊಳ್ಳುವ ಮೂಲಕ 'ಈದ್ ಮುಬಾರಕ್' ಎಂದು ಶುಭಾಶಯ ವಿನಿಮಯ ಮಾಡಿಕೊಂಡರು.

ಮಾನವೀಯತೆಯ ಸಂದೇಶ:

ಹಬ್ಬದ ಮಹತ್ವದ ಕುರಿತು ಮಾತನಾಡಿದ ಖಾಜಿ ಮಹ್ಮದ ಆದಮ್ ಫಾರೂಕಿ "ರಂಜಾನ್ ಹಬ್ಬವು ಕೇವಲ ಆಚರಣೆಗೆ ಸೀಮಿತವಾಗದೆ, ಮನುಷ್ಯನಲ್ಲಿ ಶ್ರದ್ಧೆ, ಭಕ್ತಿ ಮತ್ತು ಸಹನೆಯನ್ನು ಮೈಗೂಡಿಸುತ್ತದೆ. ಅತಿಯಾದ ಸಂಪತ್ತಿನ ಸಂಗ್ರಹವನ್ನು

ತ್ಯಜಿಸಿ, ಬಡವ–ಬಲ್ಲಿದ ಎಂಬ ಭೇದವಿಲ್ಲದೆ ದಾನ (ಝಕಾತ್) ಮಾಡಲು ಇದು ಪ್ರೇರೇಪಿಸುತ್ತದೆ. ಬಡತನದ ನೋವು ಮತ್ತು ಹಸಿವಿನ ಅರಿವು ಪ್ರತಿಯೊಬ್ಬರಿಗೂ ಉಂಟಾಗಲಿ ಎಂಬುದು ಈ ವ್ರತದ ಮೂಲ ಉದ್ದೇಶ. ಈ ಹಬ್ಬವು ಸಮಾಜದಲ್ಲಿ ಪರಸ್ಪರ ಭರವಸೆ, ಸಾಮರಸ್ಯ ಹಾಗೂ ಭಾವೈಕ್ಯತೆಯ ಮನೋಭಾವವನ್ನು ಇನ್ನಷ್ಟು ಗಟ್ಟಿಗೊಳಿಸಲಿ," ಎಂದು ಶುಭ ಹಾರೈಸಿದರು.

# ಮಹಿಳೆ ಸ್ವಾವಲಂಬನೆಗೆ ಶಿಕ್ಷಣ ಅಗತ್ಯ: ಬೂದುರು



• **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ**

ಮಹಿಳೆಯರು ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಹಕ್ಕುಗಳನ್ನು ಪಡೆಯುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ಬರಲು ಶಿಕ್ಷಣ ಅಗತ್ಯ ಎಂದು ಸಾಹಿತಿ ಪಾರ್ವತಿ ಎಸ್ ಬೂದುರು ಹೇಳಿದರು.

ಇತ್ತೀಚೆಗೆ ಪಟ್ಟಣದ ಶ್ರೀಮತಿ ಗಂಗಾಬಾಯಿ ಶಾಂತಗೌಡ ಪೊಲೀಸ್ ಪಾಟೀಲ್ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಐ ಕ್ಯೂ ಎ ಸಿ ಸಮಾಜಶಾಸ್ತ್ರ ಮತ್ತು ಎನ್ ಎಸ್ ಎಸ್ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು

ಮಹಿಳೆಯರಿಗೆ ಆತ್ಮವಿಶ್ವಾಸ ತುಂಬುವ ನಿಟ್ಟಿನಲ್ಲಿ ಸರ್ಕಾರಗಳು ಅನೇಕ ಯೋಜನೆಗಳನ್ನು ರೂಪಿಸಿ ಜಾರಿಗೆ ತಂದಿದ್ದರು ಸ್ವಾವಲಂಬನೆ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂದುವರು, ಎಲ್ಲಾ ಕ್ಷೇತ್ರಗಳಲ್ಲಿ ಪಾದಾರ್ಪಣೆ ಮಾಡಿದರು ಪುರುಷ ಪ್ರಧಾನ ಸಮಾಜ ಮಹಿಳೆಯನ್ನು ನೋಡುವ ದೃಷ್ಟಿಕೋನ ಬದಲಾಗಬೇಕು ಎಂದು ಹೇಳಿದರು.

ಪ್ರಾಸ್ತಾವಿಕ ಮಾತನಾಡಿದ ಸಂಯೋಜನಾಧಿಕಾರಿ ನಸ್ರೀನ್ ತಾಜ್ ಮಹಿಳೆಯನ್ನು ಪೂಜಿಸಿದರೆ ಸಾಲದು ಅವಳನ್ನು ಗೌರವಿಸುವ ಪರಂಪರೆ ನಮ್ಮದಾಗಬೇಕು ಎಂದರು.

ಡಾ ಸಿದ್ದಲಿಂಗ ರಾಠೋಡ ಮತ್ತು ಮಲ್ಲಿಕಾರ್ಜುನ ಮರಡ್ಡಿ ಮಾತನಾಡಿದರು, ಪ್ರಾಂಶುಪಾಲ ಪ್ರೊ ನಾಗಪ್ಪ ಚಾವಲ್ಕರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಿಡಿಸಿ ಸದಸ್ಯರಾದ ಡಾ ಯಂಕನಗೌಡ ಪಾಟೀಲ್, ಮಲ್ಲಣ್ಣ ಬಿಳೆಭಾವಿ, ಉಪನ್ಯಾಸಕ ಶಶಿಕುಮಾರ್ ಎತ್ತಿನಮನಿ, ಮಹಿಳಾ ಉಪನ್ಯಾಸಕಿಯರಾದ ಶ್ರೀದೇವಿ, ಪೂಜಾ, ಶೀವಲೀಲಾ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಅತಿಥಿ ಉಪನ್ಯಾಸಕರು ಸೇರಿದಂತೆ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಇಫ್ತಾರ್ ಕೂಟ: ಮಾನೇಗಾರ ಭಾಗಿ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ತಾಲೂಕಿನ ಸೈದಾಪುರ ಪಟ್ಟಣದ ಜಾಮೀಯ ಮಸೀದಿಯಲ್ಲಿ ಪವಿತ್ರ ರಂಜಾನ್ ಹಬ್ಬದ ನಿಮಿತ್ತವಾಗಿ ಮುಸ್ಲಿಂ ಬಾಂಧವರು ಹಮ್ಮಿಕೊಂಡಿದ್ದ ಇಫ್ತಾರ್ ಕೂಟದಲ್ಲಿ ಕೆಪಿಸಿಸಿ ಸದಸ್ಯ ಹಾಗೂ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಶರಣಪ್ಪ ಮಾನೇಗಾರ ಅವರು ಭಾಗವಹಿಸಿದರು.

ನಂತರ ಮಾತನಾಡಿದ ಅವರು ಮುಸಲ್ಮಾನ್ ಬಾಂಧವರಿಗೆ ರಂಜಾನ್ ತಿಂಗಳು ಅತ್ಯಂತ ಪವಿತ್ರವಾಗಿದೆ. ಈ ವೇಳೆ ಸತತ ಒಂದು ತಿಂಗಳಗಳ ಕಾಲ ಅತ್ಯಂತ ಶ್ರದ್ಧಾಭಕ್ತಿಯಿಂದ ಉಪವಾಸ ವ್ರತವನ್ನು ಆಚರಣೆ ಮಾಡಲಾಗುತ್ತದೆ. ಪ್ರತಿ ದಿನ ಸಾಯಂಕಾಲ ಉಪವಾಸ ವ್ರತ ಮಾಡುವವರಿಗಾಗಿ ಹಮ್ಮಿಕೊಳ್ಳುವ ಭೋಜನ ಕೂಟವನ್ನು ಇಫ್ತಾರ ಕೂಟ ಎಂದು ಕರೆಯಲಾಗುತ್ತದೆ. ಇಂತಹ ಒಂದು ಪವಿತ್ರ ಸಂದರ್ಭದಲ್ಲಿ ನಾನು ಸೈದಾಪುರ ಸುತ್ತಲಿನ ಗ್ರಾಮಗಳ ಜನರ ಜೊತೆಗೆ ಭಾಗವಹಿಸಿದ್ದು ಅತ್ಯಂತ ಖುಷಿ ತಂದಿದೆ. ಯಾವುದೇ ಜಾತಿ ಧರ್ಮ ಇರಲಿ ತನ್ನದೇ ಆದ ಆಚಾರ–ವಿಚಾರಗಳನ್ನು ಒಳಗೊಂಡಿರುತ್ತದೆ ಅದಕ್ಕೆ ಪೂರಕವಾಗಿ ನಾವೆಲ್ಲರೂ ಪಾಲನೆ ಮಾಡಬೇಕಾಗಿದೆ. ಪರಸ್ಪರ ಸೌಹಾರ್ದತೆ ಮತ್ತು ಸಹಕಾರ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ಇದೆವೇಳೆ ಮಾರುಕಟ್ಟೆಯಲ್ಲಿ ಸಿಗುವ ನಾನಾ ರೀತಿಯ ಹಣ್ಣುಗಳ ಜೊತೆಗೆ ಭೋಜನ ಸವಿಯಲಾಯಿತು. ಇದೇ ವೇಳೆ ಎಲ್ಲ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಶಯ ತಿಳಿಸಿದ ಅವರು ಭಾವೈಕ್ಯತೆಯ ಸಂದೇಶ ನೀಡಿದರು.

ಈ ವೇಳೆ ಕೆಪಿಸಿಸಿ ಸದಸ್ಯರಾದ ಚಂದ್ರಶೇಖರ ವಾರದ್ ಸೈದಾಪುರ, ಅಧ್ಯಕ್ಷರಾದ ಮೌಲಾನ್ ಸಾಬ್, ಉಪಾಧ್ಯಕ್ಷರಾದ ಅಲ್ಲಾಭಾಷಾ ಇಚಗೇರಿ, ಕಾರ್ಯದರ್ಶಿ ಅಬ್ದುಲ್ ಆಫೀಸ್ ವಲಿಯುದ್ದೀನ್, ನಿಜಾಮುದ್ದೀನ್, ಸುದರ್ಶನ ಪಾಟೀಲ ಜೈ, ಆಂಜನೇಯ ಕಟ್ಟಿಮನಿ,

ಸಾಹೇಬಹುಸೇನ್ ನೀಲಹಳ್ಳಿ ಹಣಮಂತ ದೊಡ್ಡಮನಿ, ಪುಂಡಲೀಕ ವಿಜಯ್ ಕಂದಳ್ಳಿ ಮುಂತಾದವರು ಹಾಜರಿದ್ದರು.

# ಸತ್ಸಂಗದಿಂದ ಮಾತ್ರ ಜೀವನ ಪಾವನ: ಶಿವಾನಂದ ಶಿವಾಚಾರ್ಯ



• **ಪರಮೇಶ ರಾಂಪುರೆಮಲ್ಲಮ್ಮ ನುಡಿ ವಾರ್ತೆ ಕಮಲನಗರ**

ಮನುಷ್ಯನ ನೆಮ್ಮದಿಯ ಬದುಕಿಗೆ ಕೇವಲ ಹಣವಿದ್ದರೆ ಸಾಲದು, ಬದಲಾಗಿ ಸನ್ಮಾರ್ಗದ ಚಿಂತನೆ ಹಾಗೂ ಸತ್ಸಂಗದ ಅವಶ್ಯಕತೆ ಇದೆ ಎಂದು ಶ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು ತಮಲೂರ ಅಭಿಮತ ವ್ಯಕ್ತಪಡಿಸಿದರು.

ತಾಲೂಕಿನ ಮುಧೋಳ (ಬಿ) ಗ್ರಾಮದ ಮಹಾದೇವ ಮಂದಿರದಲ್ಲಿ ನಡೆಯುತ್ತಿರುವ ಮಹಾದೇವ ಜಾತ್ರಾ ಮಹೋತ್ಸವ' ನಿಮಿತ್ಯ ನಡೆಯುತ್ತಿರುವ 'ಅಖಂಡ ಹರಿನಾಮ ಸಪ್ತಾಹ' ಪ್ರವಚನ ನೀಡಿದರು.

ಹಣದಿಂದ ನೆಮ್ಮದಿ ಅಸಾಧ್ಯ ಇಂದಿನ ದಿನಗಳಲ್ಲಿ ಮನುಷ್ಯ ಹಣದ ಹಿಂದೆ ಬಿದ್ದು ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾನೆ. ಆದರೆ ನೆಮ್ಮದಿಯ ಬದುಕಿಗೆ ಹಣವೇ ಮೂಲವಲ್ಲ. ಸಾವಿನ ಭಯ ಎಲ್ಲರನ್ನೂ ಕಾಡುತ್ತದೆ, ಆದರೆ ಮೃತ್ಯುವಿನ ಭಯವನ್ನು ಮೆಟ್ಟಿ ನಿಲ್ಲುವ ಶಕ್ತಿ ಕೇವಲ ಆಧ್ಯಾತ್ಮಿಕ ಚಿಂತನೆಗೆ ಮಾತ್ರ ಇದೆ" ಎಂದು ಅವರು ತಿಳಿಸಿದರು.

ಆದ್ಯತೆಗಳ ಬಗ್ಗೆ ಶ್ರೀಗಳ ಕಿವಿಮಾತುಜೀವನದಲ್ಲಿ ಧರ್ಮ ಮತ್ತು ಸೇವೆಗೆ ನೀಡಬೇಕಾದ ಆದ್ಯತೆಯನ್ನು ಶ್ರೀಗಳು ಅತ್ಯಂತ ಸರಳವಾಗಿ ಈ ಕೆಳಗಿನಂತೆ ವಿವರಿಸಿದರು:ನೂರು ಕೆಲಸ ಬಿಟ್ಟು ಊಟ ಮಾಡಿ: ಆರೋಗ್ಯವೇ ಭಾಗ್ಯ, ಎಷ್ಟೇ ಕೆಲಸವಿದ್ದರೂ ಮೊದಲು ಶರೀರಕ್ಕೆ ಪೌಷ್ಟಿಕ ಆಹಾರ ನೀಡುವುದನ್ನು ಮರೆಯಬೇಡಿ.ಸಾವಿರ ಕೆಲಸ ಬಿಟ್ಟು ಅನ್ನದಾನ ಮಾಡಿ: ಹಸಿದವರಿಗೆ ಅನ್ನ ನೀಡುವುದು ಶ್ರೇಷ್ಠ ಧರ್ಮ. ಸಾವಿರ ಕೆಲಸಗಳಿದ್ದರೂ ಅವುಗಳನ್ನು ಬದಿಗೊತ್ತಿ ಅನ್ನದಾನದಂತಹ ಪುಣ್ಯ ಕಾರ್ಯದಲ್ಲಿ ತೊಡಗಿಸಿಕೊಳ್ಳಿ.

ಕೋಟಿ ಕೆಲಸ ಬಿಟ್ಟು ಸತ್ಸಂಗದಲ್ಲಿ ಪಾಲ್ಗೊಳ್ಳಿ: ಜೀವನದ ಪರಮ ಗುರಿಯನ್ನು ತಲುಪಲು ಸತ್ಸಂಗವೇ ದಾರಿ. ಕೋಟಿ ಕೆಲಸಗಳ ಒತ್ತಡವಿದ್ದರೂ ಸತ್ಸಂಗಕ್ಕಾಗಿ ಸಮಯ ಮೀಸಲಿಡುವುದು ನಿಮ್ಮ ಆತ್ಮಕ್ಕೆ ನೀಡುವ ದೊಡ್ಡ ಉಡುಗೊರೆ.ಕಾರ್ಯಕ್ರಮದಲ್ಲಿ ನೂರಾರು ಭಕ್ತಾದಿಗಳು ಪಾಲ್ಗೊಂಡು ಶ್ರೀಗಳ ಅಮೃತವಾಣಿಯನ್ನು ಆಲಿಸಿದರು. ಸತ್ಸಂಗದ ಮೂಲಕ ಮನಸ್ಸಿನ ಶಾಂತಿ ಕಂಡುಕೊಳ್ಳುವಂತೆ ಶ್ರೀಗಳು ಇದೇ ಸಂದರ್ಭದಲ್ಲಿ ಕರೆ ನೀಡಿದರು.ಈ ಸಂದರ್ಭದಲ್ಲಿ ಮಹಾದೇವ ಭಜನೆ ಮಂಡಳಿ ಸದಸ್ಯರು,ಗ್ರಾಮದ ಹಿರಿಯರು, ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳ ನೂರಾರು ಭಕ್ತಾಧಿಗಳು ಉಪಸ್ಥಿತರಿದ್ದರು. ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.ಮಾರ್ಚ್ 23 ರಂದು ಸೋಮವಾರ ಸಂಜೆ ಶ್ರೀ ಶಂಕರಲಿಂಗ ಶಿವಾಚಾರ್ಯರು ಹಿರೆಮಠ ಸಂಸ್ಥಾನ ಹಣೆಗಾಂವ, ಅವರಿಂದ ವಿಶೇಷ ಪ್ರವಚನ ಜರುಗಲಿದೆ ಈ ಕಾರ್ಯಕ್ರಮದ ಲಾಭ ಪಡೆದು ಕೊಳ್ಳವೇಕೆಂದು ಎಂದು ಸಂಘಟಕರು ತಿಳಿಸಿದ್ದಾರೆ.

# ಕ್ಷೇತ್ರದ ಗ್ರಾಮ ತಾಂಡಾಗಳಲ್ಲಿ ಸಮುದಾಯ ಭವನ ನಿರ್ಮಾಣ: ಪ್ರಭು ಚವ್ಹಾಣ

• **ಮಲ್ಲಮ್ಮ ನುಡಿ ವಾರ್ತೆ ಔರಾದಬಿ**

ವಿಧಾನಸಭಾ ಕ್ಷೇತ್ರದ ಎಲ್ಲ ಗ್ರಾಮದ ಪರಿಶಿಷ್ಟ ಜಾತಿಯ ಓಣಿಗಳು ಮತ್ತು ತಾಂಡಾಗಳಲ್ಲಿ ಸಮುದಾಯ ಭವನಗಳನ್ನು ನಿರ್ಮಿಸಲಾಗುವುದೆಂದು ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಿಳಿಸಿದ್ದಾರೆ.

ಔರಾದ(ಬಿ)ತಾಲ್ಲೂಕಿನಫಮಸುಬಾಯಿ ತಾಂಡಾ ಬೋಂತಿಯಲ್ಲಿ ಮಾ.21ರಂದು ನಡೆದ ಸಮಾಜದ ಚಿಂತನ–ಮಂಥನ ಹಾಗೂ ಜಾಗೃತಿ ಕಾರ್ಯಕ್ರಮದಲ್ಲಿ ಶಾಸಕರು ಮಾತನಾಡಿದರು. ಪರಿಶಿಷ್ಟ ಸಮುದಾಯ ವಾಸಿಸುವ ಎಲ್ಲ ಗ್ರಾಮಗಳಲ್ಲಿ ಸಮುದಾಯ ಭವನಗಳನ್ನು ನಿರ್ಮಿಸಬೇಕೆಂಬುದು ನನ್ನ ಬಹುದಿನಗಳ ಕನಸಾಗಿತ್ತು. ಗ್ರಾಮ ಸಂಚಾರದ ಸಂದರ್ಭದಲ್ಲಿಯೂ ಪ್ರತಿ ಊರಿನಿಂದ ಈ ಕುರಿತ ಬೇಡಿಕೆಗಳು ಬಂದಿವೆ. ಹಾಗಾಗಿ ಶಾಸಕನಾಗಿ ಆಯ್ಕೆಯಾದಾಗಿನಿಂದ ನಿರಂತರವಾಗಿ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸುತ್ತಾ ಬರುತ್ತಿದ್ದೇನೆ. ಅದಕ್ಕೆ ಸ್ಪಂದನೆ ಸಿಕ್ಕಿದ್ದು, ಎಲ್ಲ ಗ್ರಾಮಗಳ ಎಸ್ಸಿ ಓಣಿಯಲ್ಲಿ ಸುಂದರ ಸಮುದಾಯ ಭವನಗಳು ನಿರ್ಮಿಸುವ ಸಂಕಲ್ಪ ಸಾಕಾರವಾಗುವ ದಿನಗಳು ಹತ್ತಿರ ಬಂದಿವೆ ಎಂದರು.

ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾತನಾಡಿ, ಶೀಘ್ರ ನಿವೇಶನ ಗುರುತಿಸಿಕೊಡುವಂತೆ ಸೂಚಿಸಿದ್ದೇನೆ. ಇದಕ್ಕೆ ಸಮಾಜ ಬಾಂಧವರು ಸಹಕರಿಸಬೇಕು. ಅಂಬೇಡ್ಕರರ ವಿಚಾರಧಾರೆಗಳು ಮತ್ತಷ್ಟು ಪ್ರಚಾರವಾಗಬೇಕು. ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು, ಮದುವೆ ಹಾಗೂ ಮತ್ತಿತರೆ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲ ಆಗಬೇಕೆಂಬ ಉದ್ದೇಶದೊಂದಿಗೆ ಕಟ್ಟಡಗಳ ವಿನ್ಯಾಸ ರೂಪಿಸುವಂತೆ ತಿಳಿಸಲಾಗಿದೆ. ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಕಾಮಗಾರಿಗಳಿಗೆ ಪೂಜೆ ನೆರವೇರಿಸಲಾಗುತ್ತದೆ. ಕಾಮಗಾರಿಯ ಮೇಲೆ ನಿಗಾ ವಹಿಸಬೇಕು. ತಾವುಗಳು ಮುಂದೆ ನಿಂತು ಕೆಲಸ ಸರಿಯಾಗಿ ಮಾಡಿಕೊಳ್ಳಬೇಕು ಎಂದು ಸಮಾಜ ಬಾಂಧವರಿಗೆ ತಿಳಿಸಿದರು.

ನಾನು ಕೂಡ ದಲಿತನಾಗಿದ್ದು, ದಲಿತ ಸಮಾಜಗಳ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತಿದ್ದೇನೆ. ಹಿಂದೆ ಎಸ್ಸಿ ಓಣಿಗಳಲ್ಲಿ ಯಾವುದೇ ಸೌಕರ್ಯಗಳಿರಲಿಲ್ಲ.



ನಾನು ಶಾಸಕನಾದ ನಂತರ ಸುವರ್ಣ ಗ್ರಾಮ, ಗ್ರಾಮ ವಿಕಾಸ ಯೋಜನೆ, ಎಎಸ್ಸಿಪಿ, ಟಿಎಸ್‌ಪಿ ಹಾಗೂ ಮತ್ತಿತರೆ ಯೋಜನೆಗಳಡಿ ರಸ್ತೆ, ಚರಂಡಿ, ಹೈಮಾಸ್ಟ್ ವಿದ್ಯುತ್ ದೀಪಗಳು ಒಳಗೊಂಡು ಎಲ್ಲ ಸೌಕರ್ಯಗಳನ್ನು ಕಲ್ಪಿಸುತ್ತಿದ್ದೇನೆ. ಎಲ್ಲ ಗ್ರಾಮಗಳಲ್ಲಿ ಅಂಗನವಾಡಿ ಕೇಂದ್ರಗಳಾಗಿವೆ. ಅವಶ್ಯಕತೆಯಿರುವ ಕಡೆ ಇನ್ನು ಹೊಸ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಕ್ರಮ ವಹಿಸಲಾಗುವುದೆಂದು ಹೇಳಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ ಕೃಪೆಯಿಂದಾಗಿ ನಾನು ಶಾಸಕನಾಗಲು ಸಾಧ್ಯವಾಗಿದೆ. ಅವರ ಅನುಯಾಯಿಯಾಗಿದ್ದು, ಅವರ ತತ್ವಾದರ್ಶಗಳನ್ನು ಪಾಲಿಸುತ್ತಾ ಬಂದಿದ್ದೇನೆ. ಅವರು ಶಿಕ್ಷಣ, ಸಂಘಟನೆ, ಹೋರಾಟದ ಸಂದೇಶ ನೀಡಿದ್ದರು. ಅವರ ಆಶಯದಂತೆ ಕ್ಷೇತ್ರದಲ್ಲಿ ಶಿಕ್ಷಣದ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಟ್ಟಿದ್ದು, ಎಲ್ಲ ಕಡೆಗಳಲ್ಲಿ ಶಾಲಾ ಕಾಲೇಜುಗಳನ್ನು ತೆರೆದು ಎಲ್ಲರಿಗೂ ಶಿಕ್ಷಣ ಕಲ್ಪಿಸಲು ಪ್ರಯತ್ನಿಸುತ್ತಿದ್ದೇನೆ. ಬಡವರಿಗೆ ಉಚಿತ ಮತ್ತು ಗುಣಮಟ್ಟದ ಶಿಕ್ಷಣ ಕಲ್ಪಿಸಲು ಬಲ್ಲೂರ(ಜೆ), ಹೊರಂಡಿ, ಚಿಂತಾಕಿ, ಚಿಮ್ಮೇಗಾಂವ, ವನಮಾರಪಳ್ಳಿ ಸೇರಿದಂತೆ ಪ್ರತಿ ಹೋಬಳಿ ಕೇಂದ್ರದಲ್ಲಿ ವಸತಿಯುತ ಶಾಲೆಗಳನ್ನು ತಂದಿದ್ದೇನೆ ಎಂದರು.

ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಪ್ರತಿ ಗ್ರಾಮದ ಎಸ್ಸಿ ಓಣಿಗಳಿಂದ ಐಎಎಸ್, ಐಪಿಎಸ್, ಕೆಎಎಸ್, ವೈದ್ಯರು, ಇಂಜಿನೀಯರ್‌ಗಳು ಹೊರಬರಬೇಕು ಎಂಬುದು ನನ್ನ ಕನಸಾಗಿದೆ. ಈ ದಿಶೆಯಲ್ಲಿ ಸರ್ಕಾರದಿಂದ ಅಗತ್ಯ ನೆರವು ಒದಗಿಸಲು ನಾನು ಸಿದ್ದನಿದ್ದೇನೆ. ತಾವೆಲ್ಲರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ವಿದ್ಯಾರ್ಥಿಗಳು ಕೂಡ ಸರಿಯಾಗಿ ಓದಬೇಕು. ಉನ್ನತ ಕನಸ್ಸುಗಳನ್ನು ಇಟ್ಟುಕೊಂಡು ಅಭ್ಯಾಸ ಮುಂದುವರೆಸಬೇಕು ಎಂದು ಹೇಳಿದರು.

ನಿಮ್ಮೆಲ್ಲರ ಆಶೀರ್ವಾದದಿಂದಾಗಿ ನಾಲ್ಕು ಬಾರಿ ಶಾಸಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಅಭಿವೃದ್ಧಿ ಕೆಲಸಗಳನ್ನು ನಿರಂತರವಾಗಿ ಮುಂದುವರೆಸುತ್ತಿದ್ದೇನೆ. ಪರಿಶಿಷ್ಟ ಜಾತಿಗಳ ಅಭಿವೃದ್ಧಿಗೆ ಸದಾ ಶ್ರಮಿಸುತ್ತಿದ್ದೇನೆ. ಆದರೆ ಕೆಲವರು ನಿರಂತರವಾಗಿ ನನ್ನ ಬಗ್ಗೆ ಅಪ ಪ್ರಚಾರ ಮಾಡುತ್ತಿದ್ದಾರೆ. ಅಭಿವೃದ್ಧಿ ಕೆಲಸಗಳಿಗೆ ಅಡ್ಡಿಪಡಿಸಿ ಜನತೆಗೆ ತೆ–ೂಂದರೆ ಕೊಡಲು ಯತ್ನಿಸುತ್ತಿದ್ದಾರೆ. ಆರ್‌ಟಿಐ ದುರ್ಬಳಕೆ, ಲೋಕಾಯುಕ್ತ–ಕ್ಕೆ ದೂರು ಸಲ್ಲಿಸಿ ಅಧಿಕಾರಿಗಳನ್ನು ಹೆದರಿಸುವುದು, ಬೆದರಿಸುವುದನ್ನು ಮಾಡುತ್ತಿದ್ದಾರೆ. ಇಂಥವರಿಂದ ಎಚ್ಚರಿಕೆ ವಹಿಸಬೇಕು. ಯಾವುದೇ ರೀತಿಯ ಅಪ ಪ್ರಚಾರಗಳಿಗೆ ಕಿವಿಗೊಡಬಾರದು ಎಂದು ಹೇಳಿದರು.ಔರಾದ ಅಂಬೇಡ್ಕರ್ ಭವನಕ್ಕೆ ಮೆಚ್ಚುಗೆ: ಮುಖಂಡರಾದ ಅರಹಂತ ಸಾವಳೆ ಹಾಗೂ ಸೂರ್ಯಕಾಂತ ಸಿಂಗೆ ಮಾತನಾಡಿ, ಶಾಸಕರಿಂದಾಗಿ ಔರಾದ(ಬಿ) ಪಟ್ಟಣದಲ್ಲಿ 3 ಕೋಟಿ ವೆಚ್ಚದಲ್ಲಿ ಸುಂದರ ಡಾ.ಬಿ.ಆರ್ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಗೊಳ್ಳುತ್ತಿದೆ. ಈ ಮೂಲಕ ಶಾಸಕರ ಮತ್ತು ಸಮಾಜದ ಬಹಳಷ್ಟು ದಿನಗಳ ಕನಸು ನನಸಾಗುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಶಾಸಕರು ಪರಿಶಿಷ್ಟ ಜಾತಿಯವರ ಶ್ರೇಯಸ್ಸಿಗಾಗಿ ನಿರಂತರ ಶ್ರಮಿಸುತ್ತಿದ್ದಾರೆ. ಎಲ್ಲರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಾರೆ. ಸಂಕಷ್ಟದಲ್ಲಿದ್ದವರಿಗೆ ನೆರವಾಗುತ್ತಾರೆ. ಸಮಾಜದ ಅಭಿವೃದ್ಧಿಗಾಗಿ ಅವರ ಕೈ ಬಲಪಡಿಸಬೇಕು ಎಂದು ಹೇಳಿದರು. ಮುಖಂಡರಾದ ರಾಮಶೆಟ್ಟಿ ಪನ್ನಾಳೆ ಮಾತನಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಬಾಲಾಜಿ ಕಾಳೆಕರ್, ನಾರಾಯಣ ವಾಗಮಾರೆ, ಪ್ರಕಾಶ ಭಂಗಾರೆ, ಸಂಜುಕುಮಾರ ಡೊಂಗ್ರೆ, ಸಂತೋಷ ಜೊನ್ನಿಕೇರಿ, ಸಿದ್ದಾರ್ಥ ರಾಜುರೆ, ಸಂತೋಷ ಕಾಂಬಳೆ, ಶಿವರಾಜ ಝುಲಾಂಡೆ,

ಸೋಪಾನರಾವ ಡೊಂಗ್ರೆ, ರಮೇಶ ಶಳ್ಕೆ, ತುಳಸಿರಾಮ ಬೇಂದ್ರೆ, ಸುಧಾಮ ಭಾಸ್ಕರ್, ದಿಲೀಪ ಸೋಮವಂಶಿ, ಕಿರಣ ಮಾರ್ತಾಂಡ್, ಹರಿ ಮದನೂರ ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ ದಲಿತ ಮುಖಂಡರು, ಪ್ರಮುಖರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಡಾ.ರೋಹಿದಾಸ ಮೇತ್ರೆ ನಿರೂಪಿಸಿ ವಂದಿಸಿದರು.

# ಎಲ್ಲಾ ಕ್ರಸ್ಟ್ ಗೇಟ್ ಅಳವಡಿಕೆ ಮೇ ಅಂತ್ಯದೊಳಗೆ ಪೂರ್ಣ: ಭೋಸರಾಜು



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ರೈತರ ಜೀವನಾಡಿ ತುಂಗಭದ್ರಾ ಜಲಾಶಯದ ಎಲ್ಲಾ 33 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯವನ್ನು ಮೇ ಅಂತ್ಯದೊಳಗೆ ಪೂರ್ಣಗೊಳಿಸಿ, ರೈತರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ವಿಧಾನ ಪರಿಷತ್ ಸಭಾ ನಾಯಕರಾದ ಎನ್.ಎಸ್. ಭೋಸರಾಜು ಹೇಳಿದರು.

ಅವರು ಶುಕ್ರವಾರ ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನ ತುಂಗಭದ್ರಾ ಜಲಾಶಯದ ಆಣೆಕಟ್ಟಿನ ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾಮಗಾರಿಯ ಪರಿವೀಕ್ಷಣೆ ಮಾಡಿ, ಮಾಧ್ಯಮದವರೊಂದಿಗೆ ಮಾಹಿತಿ ನೀಡಿ ಮಾತನಾಡಿದರು.

ಈಗಾಗಲೇ ತುಂಗಭದ್ರಾ ಜಲಾಶಯದ 18 ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು, 5 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. ಮಾರ್ಚ್ ಅಂತ್ಯದ ವೇಳೆಗೆ ಒಟ್ಟು 23 ಗೇಟ್‌ಗಳ ಕೆಲಸ ಮುಗಿಯುವ ನಿರೀಕ್ಷೆಯಿದೆ. ನುರಿತ ತಜ್ಞರ ತಂಡ ಮತ್ತು ಚೀಫ್ ಎಂಜಿನಿಯರ್‌ಗಳ ಪ್ರಕಾರ, ಗೇಟ್ ಬದಲಾವಣೆಯ ಸಮಯದಲ್ಲಿ ಹಳೆಯ ಅಣೆಕಟ್ಟಿನ ರಚನೆಗೆ ಯಾವುದೇ ತೊಂದರೆಯಾಗಿಲ್ಲ. ಏಪ್ರಿಲ್ ತಿಂಗಳಿನಲ್ಲಿ ಉಳಿದ 10 ಗೇಟ್‌ಗಳನ್ನು ಅಳವಡಿಸಿ, ಮೇ ಅಂತ್ಯದೊಳಗೆ ಎಲ್ಲಾ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾಮಗಾರಿ ಪೂರ್ಣಗೊಳ್ಳುವ ಭರವಸೆ ಇದೆ. ಕಾಮಗಾರಿಯು ನಿರೀಕ್ಷಿತ ಸಮಯಕ್ಕಿಂತ ವೇಗವಾಗಿ ಸಾಗುತ್ತಿದ್ದು, ಜೂನ್‌ನಲ್ಲಿ ಆರಂಭವಾಗುವ ಮುಂಗಾರು ಮಳೆಗಾಲದ ವೇಳೆಗೆ ಜಲಾಶಯವು ಸಂಪೂರ್ಣ ಸಿದ್ಧವಾಗಲಿದೆ ಎಂಬ ವಿಶ್ವಾಸವಿದೆ ಎಂದರು.

ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನ ಸಮಸ್ಯೆಗೆ ಪರಿಹಾರವಾಗಿ 'ನವಲಿ' ಯೋಜನೆಯ ಪ್ರಸ್ತಾವನೆಯನ್ನು ಮಂಡಳಿ ಮತ್ತು ಸಂಬಂಧಿತ ರಾಜ್ಯ ಸರ್ಕಾರಗಳಿಗೆ ಕಳುಹಿಸಲಾಗಿದೆ.

ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೂ ಸಹ ಪತ್ರ ವ್ಯವಹಾರ ನಡೆಸಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆಯುತ್ತಿದೆ. ತೆಲಂಗಾಣ ಸರ್ಕಾರದೊಂದಿಗೂ ಸಮನ್ವಯ ಸಾಧಿಸಲು ಪ್ರಯತ್ನಿಸಲಾಗುತ್ತಿದ್ದು, ವಿವಿಧ

ತಾಂತ್ರಿಕ ಕಾರಣಗಳಿಂದ ವಿಳಂಬವಾಗುತ್ತಿದೆ. ಈ ತಾಂತ್ರಿಕ ಸಮಸ್ಯೆಗಳು ಬಗೆಹರಿದ ನಂತರ ಪೂರ್ಣ ಸಹಕಾರ ಸಿಗುವ ನಿರೀಕ್ಷೆಯಿದೆ. ಈ ಬಗ್ಗೆ ನಮ್ಮ ರಾಜ್ಯದ ವಿವಿಧ ಚುನಾಯಿತ ಪ್ರತಿನಿಧಿಗಳ ನಿಯೋಗವು ನವದೆಹಲಿಯಲ್ಲಿ ಜಲಶಕ್ತಿ ಸಚಿವಾಲಯದ ಅಧಿಕಾರಿಗಳು ಮತ್ತು ವಿವಿಧ ರಾಜ್ಯಗಳ ಸಂಸದರೊಂದಿಗೆ ಮಹತ್ವದ ಚರ್ಚೆ ನಡೆಸಲಾಗಿದೆ. ಕೇಂದ್ರ ಸಚಿವರು ಮತ್ತು ಅಧಿಕಾರಿಗಳು ಕರ್ನಾಟಕದ ನೀರಾವರಿ ಯೋಜನೆಗಳ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಚುನಾವಣಾ ನೀತಿ ಸಂಹಿತೆಯ ಪ್ರಕ್ರಿಯೆಗಳ ನಂತರ ಮತ್ತೊಂದು ಸುತ್ತಿನ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರು ಹಾಗೂ ಮಸ್ಕಿ ಶಾಸಕರಾದ ಬಸವನಗೌಡ ತುರುವಿಹಾಳ, ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತ್ ಕುಮಾರ್, ಟಿಬಿ ಬೋರ್ಡ್ ಹಾಗೂ ಕೆ.ಎನ್.ಎನ್.ಎಲ್.

ಅಧಿಕಾರಿಗಳಾದ ಮುಖ್ಯ ಇಂಜಿನಿಯರ್ ಶ್ರೀನಿವಾಸ ಮಲ್ಲಿಗಿವಾಡ, ಎಇಇ ಧರ್ಮರಾಜ್ ಹಾಗೂ ಜ್ಞಾನೇಶ್ವರ, ಸೆಕ್ಷನ್ ಅಧಿಕಾರಿಗಳಾದ ಜಿ. ಕಿರಣ, ಪಂಪಾಪತಿ ಡಿ.ಕೆ. ಮತ್ತು ಹುಲಿರಾಜ್ ಸೇರಿದಂತೆ ಇತರೆ ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಸಾಮೂಹಿಕ ಪ್ರಾರ್ಥನೆ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪವಿತ್ರ ರಂಜಾನ್ ಮಾಸದ ಸಮಾಪ್ತಿಯ ಸಂಕೇತವಾದ ಈದ್–ಉಲ್–ಫಿತರ್ ಹಬ್ಬವನ್ನು ಶನಿವಾರ ಕಮಲನಗರದಲ್ಲಿ ಅತ್ಯಂತ ಸಡಗರ ಮತ್ತು ಭಕ್ತಿಪೂರ್ವಕವಾಗಿ ಆಚರಿಸಲಾಯಿತು.

ಪಟ್ಟಣದ ಈದ್ಗಾ ಮೈದಾನದಲ್ಲಿ ಏರ್ಪಡಿಸಲಾಗಿದ್ದ ಈದ್ ವಿಶೇಷ ಪ್ರಾರ್ಥನೆಯಲ್ಲಿ ನೂರಾರು ಮುಸ್ಲಿಂ ಬಾಂಧವರು ಪಾಲ್ಗೊಂಡಿದ್ದರು. ಮೌಲಾನಾ ಸಲ್ಮಾನ್ ಇಶಾತಿ ಅವರು ಸಾಮೂಹಿಕ ನಮಾಜ್ ನೆರವೇರಿಸಿ, ನಾಡಿನ ಶಾಂತಿ, ಸೌಹಾರ್ದತೆ ಮತ್ತು ಸಮೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು. ನಮಾಜ್ ನಂತರ ಪರಸ್ಪರ ಆಲಿಂಗನ ಮಾಡಿಕೊಳ್ಳುವ ಮೂಲಕ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ನಾಜಿಮ್ ಬಗವಾನ್, ಶೇರು ಬಗವಾನ್, ಅಬೆದ್ ಅಲ್ಲಾಹಬಕ್ಸ್, ಮೌಲಾನಾ ನಜೀರ್, ಅಜರ್ ಬಗವಾನ್, ಸಯ್ಯದ್ ಶಮಶುದ್ದೀನ್, ಜೈದ್ ತಂಬೋಳಿ, ಇಸ್ಮಾಯಿಲ್ ಪಠಾಣ್, ಇಲಾಹಿ ಬಗವಾನ್, ಮೊಹ್ಸಿನ್ ಬಗಮಾರು, ಅಯೂಬ್ ಖುರೇಶಿ, ಬಾಬಾ ಬಗವಾನ್, ಮೊಹ್ಸಿನ್ ಶೇಖ್, ಕಮರುದ್ದೀನ್ ಬಗವಾನ್, ಸೋಹೇಲ್ ಬಗಮಾರು, ಇಲಿಯಾಸ್ ಮುಲ್ಲಾ, ಅರ್ಬಾಜ್ ರಿಯಾಜುದ್ದೀನ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಂಭ್ರಮದ ಈದುಲ್ ಫಿತ್ರ್ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು

ತಾಲೂಕಿನ ದೇವರಭೂಪೂರ ಗ್ರಾಮದಲ್ಲಿ ಜಾಮೀಯಾ ಮಜೀದ್ ಮುಸ್ಲಿಂ ಸಮುದಾಯ ಪವಿತ್ರ ಈದುಲ್ ಫಿತ್ (ರಂಜಾನ್) ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿದರು. ರಂಜಾನ್ ಹಬ್ಬದ ಪ್ರಯುಕ್ತ ಒಂದು ತಿಂಗಳ ಪರ್ಯಂತ ಬೆಳಗ್ಗೆಯಿಂದ ಸೂರ್ಯಾಸ್ತದವರೆಗೆ ಉಪವಾಸ ವೃತಾಚರಣೆ ಕೈಗೊಳ್ಳುತ್ತಾರೆ. ರಂಜಾನ್

ಕೊನೆಯ ದಿನವಾದ ಶನಿವಾರ ಬೆಳಗ್ಗೆ ಮುಸ್ಲಿಮರು ಹೊಸ ಬಟ್ಟೆ ಧರಿಸಿ ಈದ್ಗಾ ಮೈದಾನಕ್ಕೆ ತೆರಳಿ ದೇಶದಲ್ಲಿ ಶಾಂತಿ, ಸುಭೀಕ್ಷೆ ನೆಲೆಸಲಿ, ಸಮಾಜದಲ್ಲಿ ಪರಸ್ಪರ ಸೌಹಾರ್ದತೆ ಮನೆ ಮಾಡಲಿ, ಸಕಲ ಜೀವರಾಶಿಗಳಿಗೆ ಅಲ್ಲಾ ಒಳಿತನ್ನುಂಟು ಮಾಡಲಿ ಎಂದು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಮನೆಗೆ ತೆರಳಿ ಮೃಷ್ಟಾನ ಭೋಜನ ಸವಿದರು.

ಈ ಸಂದರ್ಭದಲ್ಲಿ ಹುಸೇನ್ ಸಾಬ್, ಮೌಲಾಸಾಬ ಪ್ರಥಮ ದರ್ಜೆ ಗುತ್ತಿಗೆದಾರರು, ಅಬ್ದುಲ್ ಕರೀಂ ಸಾಬ್, ಆಲಂ ಪಾಷಾ, ನಿಜಾಮುದ್ದೀನ್, ರಾಜ ಮೊಹಮ್ಮದ್, ಮಹ್ಮದ್ ಇಬ್ರಾಹಿಂ, ಯುವಕರು ಅಬ್ದುಲ್ ಗಫೂರ್, ಮಹ್ಮದ್ ಮುಸ್ತಫ್, ಅಬ್ದುಲ್ ರಹಿಮಾನ್, ಮಹ್ಮದ್ ಯೂನೂಸ್, ಮೈಮುದ್ ಹುಸೇನ್, ತನ್ನವೀರ್, ಯೂಸುಫ್, ಇಸ್ಮಾಯಿಲ್ ಅಶ್ರಫ್ , ಉಸ್ಮಾನ್ ಸೇರಿದಂತೆ ಇತರರು ಇದ್ದರು.

# ಒಳ ಮೀಸಲಾತಿ: ಬೃಹತ್ ಸಮಾವೇಶ




• ಮಲ್ಲಮ್ಮ ನುಡಿ ವಾರ್ತೆ , ಸಿಂಧನೂರು

ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಬಲಗೈ ಸಮುದಾಯದಿಂದ ಮಾರ್ಚ 25 ರಂದು ಬೆಂಗಳೂರು ಫ್ರೀಡಮ್ ಪಾರ್ಕಿನಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಛಲವಾದಿ ಮಹಾಸಭಾದ ತಾಲೂಕು ಅಧ್ಯಕ್ಷರಾದ ಡಾ.ರಾಮಣ್ಣ ಗೋನವಾರ ತಿಳಿಸಿದರು.

ನಗರದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಕರ್ನಾಟಕ ರಾಜ್ಯ ಬಲಗೈ ಸಮುದಾಯದ ಡಾ. ಜ್ಞಾನ ಪ್ರಕಾಶ ಸ್ವಾಮೀಜಿ ಅವರು ನೇತೃತ್ವದಲ್ಲಿ ಬಲಗೈ ಸಮುದಾಯಗಳ ಬಹು ಸಂಖ್ಯೆಯಲ್ಲಿ

ಮಾ. 25ರಂದ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು


ಕಳೆದ 30 ವರ್ಷಗಳಿಂದ ಛಲವಾದಿ ಬಲಗೈ ಸಮುದಾಯದ ಒಳ ಮೀಸಲಾತಿಗಾಗಿ ಹೋರಾಟ ಕೆಲವು ಸೀಮಿತವಾಗಿ ಹೋರಾಟ ಮಾಡುತ್ತಿಲ್ಲ. 101 ಜಾತಿಗಳನ್ನು ಒಳಗೊಂಡ ಸಮಾನತೆಗಾಗಿ ಹೋರಾಟ ಮಾಡುತ್ತಾ ಬಂದಿರುವುದು ಸಮಾಜ ಎಂದರೆ ಅದು ಛಲವಾದಿ ಸಮುದಾಯದ ಎಂದರೆ ತಪ್ಪಾಗಲಾರದು ಆದರೆ ನ್ಯಾ.ನಾಗ ಮೋಹನ ದಾಸ್ ಒಳ ಮೀಸಲಾತಿ ವರದಿ ಒಂದೇ ಸಮುದಾಯ ದೃಷ್ಟಿ ಇಟ್ಟುಕೊಂಡು ಇನ್ನೂ 101 ಕೆಲ ಸಮುದಾಯಗಳಿಗೆ ಈ ವರದಿಯಿಂದ ಅನ್ಯಾಯವಾಗಿದ್ದು. ಜಾತಿಗಳ ಜನಸಂಖ್ಯೆ ಆಧಾರದ ಮೇಲೆ ಸರಿಯಾಗಿ ಕ್ರೋಢೀಕರಣ ಮಾಡದೇ ಈ ವರದಿಯಲ್ಲಿ ಕೆಲವು ನ್ಯೂನ್ಯತೆಗಳನ್ನು ಸರಿ ಪಡಿಸಬೇಕು ಯಾಗದೆ. ಹಾಗಾಗಿ ನ್ಯಾ. ನಾಗ ಮೋಹನ ದಾಸ್ ವರದಿ ಅವೈಜ್ಞಾನಿಕ ದಿಂದ ಕೊಡಿದೇ ಎಂದು ಛಲವಾದಿ ಮಹಾಸಭಾದ ಅಧ್ಯಕ್ಷ ಡಾ. ರಾಮಣ್ಣ ಆರೋಪಿಸಿದರು.

ನಾಗಮೋಹನ ದಾಸ್ ಅವರ ವರದಿ ಕೆಳಸಮುದಾಯಕ್ಕೆ ಮರಣಶಾಸನವಾಗಿದೆ. ಬಲಗೈಗೆ ಸಂಬಂಧಿಸಿದ ಜಾತಿಗಳಲ್ಲಿ 51 ಜಾತಿಗಳು ಬರುತ್ತಿದ್ದು, ಒಳ ಮೀಸಲಾತಿ ಜಾರಿಯಿಂದ ಶೋಷಿತರಿಗೆ ಅನ್ಯಾಯವಾಗಿದೆ. ಆಡಳಿತಾತ್ಮಕ ತೊಂದರೆ ಉಂಟುಯಾಗಿದ್ದು. ಎಂದು ಆಪಾದಿಸಿದರು

ಅವರು, ಒಳ ಮೀಸಲಾತಿ ಕುರಿತು ಉಂಟಾಗಿರುವ ಗೊಂದಲಗಳು, ಸಮಸ್ಯೆಗಳು ಹಾಗೂ ನ್ಯಾಯಾಲಯದ ಅಡೆತಡೆಗಳು ನಿವಾರಣೆಯಾಗುವವರೆಗೆ ಒಳ ಮೀಸಲಾತಿ ರಹಿತ ಹಳೆಯ ಮೀಸಲಾತಿ ಪದ್ಧತಿಯನ್ನು ಮರುಜಾರಿಗೆ ತಂದು ನೇಮಕಾತಿ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಸೂಕ್ತ ಆದೇಶ ಹೊರಡಿಸಬೇಕು ಎಂದು ಮಾರ್ಚ್ 25 ರಂದು ಬೆಂಗಳೂರು ಫ್ರೀಡಮ್ ಪಾರ್ಕಿನಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಆದ್ದರಿಂದ ಜಿಲ್ಲಾ ಹಾಗೂ ತಾಲೂಕು ಛಲವಾದಿ ಸಮುದಾಯದ ಮುಖಂಡರು ಹಾಗೂ ಯುವಕರು ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಬೃಹತ್ ಸಮಾವೇಶ ಯಶಸ್ವಿಗೊಳಿಸಬೇಕೆಂದು ಹನುಮಂತ ವಕೀಲರು ಬೂದಿವಾಳ ಕರೆನೀಡಿದರು.

ಈ ಸಂದರ್ಭದಲ್ಲಿ. ಛಲವಾದಿ ಮಹಾಸಭಾದ ಜಿಲ್ಲಾ ಉಪಾಧ್ಯಕ್ಷ ಹನುಮಂತಪ್ಪ ಗೋಮರ್ಶಿ ನರಸಪ್ಪ ಕಟ್ಟಿ ಮನೆ. ವೀರೇಶ್ ಹಂಚಿನಾಳ. ನಿರುಪಾದಿ ಸಾಸಲಮರಿ ಹೊನ್ನೂರು ಕಟ್ಟಿಮನಿ. ಹುಸೇನಪ್ಪ ಗೊರೇಬಾಳ. ಹುಸೇನಪ್ಪ ಉಪ್ಪಳ. ದುರುಗಪ್ಪ ಮಲ್ಲಾಪೂರ. ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿದರು .

# ನೂತನ ಎಪಿಎಂಸಿ ಅಧ್ಯಕ್ಷರಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ , ಮುದಗಲ್

ಮಸ್ಕಿ ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾಗಿ ನೇಮಕವಾದ ಸಿದ್ದನಗೌಡ ಮಾಟೂರು ರವರು ಶನಿವಾರ ಪಟ್ಟಣ ಸಮೀಪದ ಛತ್ತರ ಗ್ರಾಮದ ಶ್ರೀ ಮಾರುತೇಶ್ವರ ದರ್ಶನ ಪಡೆದು–ಕೊಂಡರು. ಮುದಗಲ್ ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮೇಶ ನಾಯಕ ಛತ್ತರ, ಶೇಖರಪ್ಪ ತಿಮ್ಮಾಪುರು ನೂತನ ಎಪಿಎಂಸಿ ಅಧ್ಯಕ್ಷರಿಗೆ ಸನ್ಮಾನ ಮಾಡಿ ಅಭಿನಂದಿಸಿದರು.

# ಎಂಎಲ್‌ಎ ಸಿವಿಸಿ: ಬ್ಯಾನರ್ ಅಳವಡಿಕೆ




• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

2028ರ ವಿಧಾನಸಭೆ ಚುನಾವಣೆಗೆ ಇನ್ನೂ ಎರಡು ವರ್ಷಗಳು ಬಾಕಿ ಇರುವಾಗಲೇ ಕೊಪ್ಪಳದಲ್ಲಿ ರಾಜಕೀಯ ಚಟುವಟಿಕೆಗಳು ಗರಿಗದರಿದ್ದು ಇದ–ಕ್ಕೆ ಸಾಕ್ಷಿ ಎಂಬಂತೆ ನಗರದಲ್ಲಿ ಅಳವಡಿಸಿರುವ ಬ್ಯಾನರ್ ನಲ್ಲಿ 2028ರ ಶಾಸಕ ಸಿ.ವಿ ಚಂದ್ರಶೇಖರ್ ಎಂದು ಬರೆಯಲಾಗಿದ್ದು ಸದ್ಯ ಸಾರ್ವಜನಿಕರಲ್ಲಿ ಚರ್ಚೆಯ ವಿಷಯವಾಗಿದೆ.

ನಗರದಲ್ಲಿರುವ ನಗರಸಭೆ ಕಾರ್ಯಾಲಯದ ಹತ್ತಿರ ಜಾತ್ಯತೀತ ಜನತಾದಳದ ಜಿಲ್ಲಾ ಮತ್ತು ನಗರ ಅಲ್ಪಸಂಖ್ಯಾತರ ಘಟಕದವರು ಪವಿತ್ರ ರಂಜಾನ್ ಹಬ್ಬದ ಶುಭಾಶಯ ಕೋರುವ ಬ್ಯಾನರ್ ನಲ್ಲಿ ಸಿ.ವಿ ಚಂದ್ರಶೇಖರ್ ಅವರ ದೊಡ್ಡ ಫೋಟೋ ಹಾಕಿದ್ದು ಅದರ ಕೆಳಗಡೆ 2028ರ ಕೊಪ್ಪಳ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು ಎಂದು ಹಾಕಿರುವುದು ಎಲ್ಲರ ಗಮನ ಸೆಳೆಯುತ್ತಿದ್ದು ರಾಜಕೀಯವಾಗಿಯೂ ಚರ್ಚೆಗೆ ಗ್ರಾಸವಾಗಿದೆ.

ಕೊಪ್ಪಳ ವಿಧಾನಸಭಾ ಕ್ಷೇತ್ರದಾದ್ಯಂತ ಶೇಕಡಾ 16ರಷ್ಟು ಅಂದರೆ 46000 ಮುಸ್ಲಿಂ ಮತಗಳಿದ್ದು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಮ ಪ್ರಮಾಣದಲ್ಲಿ ಇದ್ದಾರೆ ಆದ್ದ–ರಿಂದ ರಂಜಾನ್ ಹಬ್ಬದ ಪ್ರಯುಕ್ತ ಅಲ್ಪಸಂಖ್ಯಾತರ ಘಟಕದಿಂದ ಹಾಕಿರುವ ಬ್ಯಾನರನ್ನು ಅಲ್ಲ ಬೆಳೆಯುವಂತಿಲ್ಲ ಎಂದು ರಾಜಕೀಯ ತಜ್ಞರು ಮಾತನಾಡಿಕೊಳ್ಳುತ್ತಿದ್ದಾರೆ.

ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ರಾಜಕೀಯ ಚಟುವಟಿಕೆ ತೀವ್ರಗೊಳಿಸಿದ್ದು ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಸಿವಿಚಂದ್ರಶೇಖರ್ ಅವರು ಈ ಸಲವಾದರೂ ಮಾತನಾಡಿ ಶಾಸಕರೇ ಎಂದು ಪತ್ರಿಕಾ ಪ್ರಕಟಣೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದ್ದು ಇದರ ಜೊತೆಗೆ ಪಕ್ಷದ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸಹ ನಗರಕ್ಕೆ ಆಗಮಿಸಿ ಬೃಹತ್ ಯಾರ್ಲಿ ಮತ್ತು ಬಹಿರಂಗ ಸಭೆ ನಡೆಸಿ ಈ ಬಾರಿಯ ಬಜೆಟ್ ನಲ್ಲಿ ಕೊಪ್ಪಳಕ್ಕೆ ಅನ್ಯಾಯವಾಗಿದ್ದು ಕ್ಷೇತ್ರಕ್ಕೆ ಚೊಂಬು ಕೊಟ್ಟಿದ್ದಾರೆ ಇದಕ್ಕೆ ಶಾಸಕರು ಸಹ ನಿರ್ಲಕ್ಷ ತೋರಿದ್ದಾರೆ ಎಂದು ಹೇಳಿಕೆ ಬಿಡುಗಡೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಏನೇ ಚರ್ಚೆಗಳು ನಡೆದರು ಸಹ ವಾಸ್ತವಕ್ಕಾಗಿ 2028ರ ಚುನಾವಣೆಯ ಫಲಿತಾಂಶದವರೆಗೆ ಕಾಯಬೇಕಾಗಿದೆ.

# ಗುರುಗಳ ತತ್ವಗಳು ಜೀವನಕ್ಕೆ ದಾರಿದೀಪ



• ಮಲ್ಲಮ್ಮ ನುಡಿ ವಾರ್ತೆ , ಮುದಗಲ್

ಸಮೀಪದ ಅಂಕನಾಳ–ಉಪನಾಳ ಗ್ರಾಮದಲ್ಲಿ ಕಾಗಿನೆಲೆ ಮಹಾ ಸಂಸ್ಥಾನದ ತಿಂಥಣಿ ಬ್ರಿಜ್ ಕನಕಗುರು ಪೀಠದ ಬ್ರಹ್ಮಲೀನ ಶ್ರೀ ಸಿದ್ದರಾಮನಂದ ಮಹಾಸ್ವಾಮಿಗಳ ಹೆಸರಿನ ವೃತ್ತ ನಾಮಫಲಕವನ್ನು ಭಕ್ತಿಭಾವದಿಂದ ಅನಾವರಣಗೊಳಿಸಲಾಯಿತು. ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಕಾಗಿನೆಲೆ ತಿಂಥಣಿ ಶಾಖಾ ಮಠದ ಬಾದಿಮನಾಳದ ಶ್ರೀ ಶಿವಸಿದ್ದೇಶ್ವರ ಸ್ವಾಮಿಜಿಗಳು, ನಿಸ್ವಾರ್ಥ ಸೇವೆ ಹಾಗೂ ಪರೋಪಕಾರದ ಮೂಲಕ ಭಕ್ತರ ಶ ತಿಳಿಸಿದ್ದಾರೆ.

# ಧರ್ಮಸ್ಥಳ ಕ್ಷೇತ್ರದಿಂದ ಸವುಳು ಹಳ್ಳದ ಕೆರೆಗೆ ಕಾಯಕಲ್ಪ : ಮಂಜುನಾಥ ರಾಟಿ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲೆಯ ಶಹಪುರ ಗ್ರಾಮದ ಸವುಳು ಹಳ್ಳದ ಕೆರೆಗೆ ಕಾಯಕಲ್ಪ ನೀಡಲು ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಸ್ವಾಮಿಯ ಹೆಸರಿನ ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಮುಂದಾಗಿದೆ ಎಂದು ಗ್ರಾಮದ ಯುವ ಧುರೀಣರು, ಸಮಾಜ ಸೇವಕರಾದ ಮಂಜುನಾಥ ರಾಟಿ ಅವರು ತಿಳಿಸಿದ್ದಾರೆ.

ಕಳೆದ ನೂರಾರು ವರ್ಷಗಳಿಂದ ಜನ–ಜಾನುವಾರುಗಳ ಜೀವನಾಡಿಯಾಗಿರುವ ಸವುಳು ಹಳ್ಳದ ಕೆರೆ ನಿರ್ಮಾಣಕ್ಕೆ ಗ್ರಾಮಸ್ಥರು ಚರ್ಚಿಸಿದ್ದೆವು. ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಹ ಸದಸ್ಯರಾಗಿರುವ ತಾವು ಅಧಿಕಾರಿಗಳೊಂದಿಗೆ ಮಾತನಾಡಿದ್ದು ಸೂಕ್ತ ಸ್ಪಂದನೆ ಲಭಿಸಿದೆ. ರಾಷ್ಟ್ರೀಯ ಹೆದ್ದಾರಿ–50 ರ ಬದಿಯಲ್ಲಿರುವ ಈ ಕೆರೆ ಅಭಿವೃದ್ಧಿಪಡಿಸಿದರೆ ಜನ–ಜಾನುವಾರುಗಳಿಗೆ ಅನುಕೂಲವಾಗುತ್ತದೆ. 10 ಎಕರೆಗೂ ಅಧಿಕ ವಿಸ್ತೀರ್ಣ ಹೊಂದಿರುವ ಗೋಮಾಳ ಸ್ಥಳವು ಸಂಪೂರ್ಣ ಸರ್ಕಾರದ್ದಾಗಿದೆ. ಕೆರೆಯ ದಡದಲ್ಲಿ ಗ್ರಾಮದ ಕುರಿಗಾಹಿಗಳು ಮತ್ತು ದನಗಾಹಿಗಳು ಕಳೆದ ಹಲವಾರು ದಶಕಗಳಿಂದ ಇಲ್ಲಿ ಬೀಡು ಬಿಟ್ಟಿದ್ದಾರೆ. ಕೆರೆ ಅಭಿವೃದ್ಧಿ ಆದರೆ ವರ್ಷಪೂರ್ತಿ ನೀರು ಲಭಿಸುತ್ತದೆ. ಬೇಸಿಗೆ ಕಾಲದಲ್ಲಿ ನೀರಿನ ಬವಣೆಯಿಂದ ಮುಕ್ತಿ ಸಿಗುತ್ತದೆ ಎಂದು ತಿಳಿಸಿದ್ದಾರೆ.

ಈ ಕುರಿತು ಶ್ರೀ ತಿರುಗಲ್ ತಿಮ್ಮಪ್ಪ ಶ್ರೀ ಲಕ್ಷ್ಮೀದೇವಿ ಮತ್ತು ಶ್ರೀ ತೇರಿನ ಹನುಮಂತರಾಯ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ವೀರಣ್ಣ ಕೋಮಲಾಪುರ ಅವರೊಡಗೂಡಿ ಕೆರೆ ಸ್ಥಳ ಪರಿಶೀಲನೆ ನಡೆಸಿದ ಅವರು, ಈಗಾಗಲೇ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧಿಕಾರಿಗಳೊಂದಿಗೆ ಕೆರೆ ಅಭಿವೃದ್ಧಿ ಕುರಿತು ಚರ್ಚಿಸಲಾಗಿದೆ. ಕೆರೆ–ಯ ಅಭಿವೃದ್ಧಿಗೆ ಧರ್ಮಸ್ಥಳ ಕ್ಷೇತ್ರವು ಬದ್ಧವಾಗಿದೆ ಎಂದು ತಿಳಿಸಿದ್ದಾರೆ. ಶೀಘ್ರವೇ ಕೆರೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತದೆ. ಈ ಕೆರೆ ಅಭಿವೃದ್ಧಿಪಡಿಸುವುದರಿಂದ ನೀರು ಸಂಗ್ರಹಗೊಂಡು ಅಡವಿ ಜೀವಿಗಳಿಗೆ ಆಸರೆ ಆಗುತ್ತದೆ. ಕುರಿ, ದನಗಳಿಗೆ ವರ್ಷಪೂರ್ತಿ ನೀರು ಲಭಿಸುತ್ತದೆ. ಸುತ್ತಲೂ ಕೃಷಿ ಚಟುವಟಿಕೆಗಳು ನಡೆಯುತ್ತಿರುವುದರಿಂದ ಜಲ ಮರುಪೂರಣವಾಗುತ್ತದೆ. ಮೇಲಾಗಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿಯೇ ಇರುವುದರಿಂದ ದಾರಿ ಹೋಕರಿಗೂ ನೀರಿನ ಅವಶ್ಯಕತೆ ಪೂರೈಸಲು ಸಾಧ್ಯವಾಗುತ್ತದೆ ಎಂದು ಮಂಜುನಾಥ ರಾಟಿ ಅವರು ತಿಳಿಸಿದ್ದಾರೆ.

ದಿನಂಪ್ರತಿ ಈ ಭಾಗದಿಂದ ನೂರಾರು ಕೃಷಿ ಕೂಲಿ ಕಾರ್ಮಿಕರು ತಮ್ಮ ದೈನಂದಿನ ಹೊಲ–ಗದ್ದೆಗಳ ಚಟುವಟಿಕೆಗಳಿಗೆ ತೆರಳುತ್ತಿದ್ದಾರೆ. ಬಂಡಿ, ಎತ್ತುಗಳೊಂದಿಗೆ ರೈತರು ಕೃಷಿ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಪ್ರಾಣಿ, ಪಕ್ಷಿಗಳು ಈ ಭಾಗದಲ್ಲಿ ಹೇರಳವಾಗಿದ್ದು ಕೆರೆ ಅಭಿವೃದ್ಧಿಯಾದಲ್ಲಿ ಗ್ರಾಮದ ಸಮಗ್ರ ಅಭಿವೃದ್ಧಿಗೆ ನೆರವಾಗುತ್ತದೆ. ಗ್ರಾಮದ ಬಹುತೇಕ ರೈತರ, ಕುರಿಗಾಹಿ ಮತ್ತು ದನಗಾಹಿಗಳ ಏಕೈಕ ಜೀವನಾಡಿಯಾಗಿರುವುದರಿಂದ ಕೆರೆ ಅಭಿವೃದ್ಧಿ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಸವುಳು ಹಳ್ಳದ ಕೆರೆ ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳಾದ ಈರನಗೌಡ(ಸುರೇಶ್) ಪಾಟೀಲ್, ಮಲ್ಲಿಕಾರ್ಜುನ ಕುರಿ, ಗಿರೀಶ್ ಹಿರೇಮಠ, ನಿಂಗಪ್ಪ ನಾಗಲಾಪುರ, ನಿಂಗಜ್ಜ ಚೌಧರಿ, ಅಮರೇಶ್ ಕಟ್ಟಿ, ಹುಲ್ಲೇಶ್ ಸಿಂದೋಗಿ, ಗ್ರಾಮ ಪಂಚಾಯಿತಿ ಸದಸ್ಯರಾದ ಹಾಲಪ್ಪ ತೋಟದ, ಹನುಮಂತ ಗೊಲ್ಲರ, ನಾಗರಾಜ ದೊಡ್ಡಮನಿ, ಗಂಗಮ್ಮ ಪೂಜಾರ ಸೇರಿದಂತೆ ಗ್ರಾಮದ ಸಮಸ್ತರು ಕೆರೆ ಅಭಿವೃದ್ಧಿಯ ಮಹತ್ವದ ಕುರಿತು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

# ಸಾಮಾಜಿಕ ನ್ಯಾಯ ಮೀಸಲಾತಿಗೆ ನಂಜುಂಡಿ ಆಗ್ರಹ




• ಮಲ್ಲಮ್ಮ ನುಡಿ ವಾರ್ತೆ, ಬೀದರ್

ನಮ್ಮ ಸಮಾಜಕ್ಕೆ ಸಾಮಾಜಿಕ ನ್ಯಾಯ ಹಾಗೂ ಮೀಸಲಾತಿ ನೀಡುವಂತೆ ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ವಿಶ್ವಕರ್ಮ ಮಹಾಸಭಾದ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಕೆ.ಪಿ ನಂಜುಂಡಿ ಆಗ್ರಹಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ರವಿವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಕಳೆದ 25 ವರ್ಷಗಳಿಂದ ಈ ರಾಜ್ಯದ ಮೂಲೆ ಮೂಲೆಗಳಿಗೆ ತೆರಳಿ ನಮ್ಮ ಸಮಾಜ ಬಾಂಧವರಿಗೆ ಎಚ್ಚರಿಸುವ ಕಾರ್ಯ ಮಾಡುತ್ತಲಿದ್ದೇವೆ. ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ನಮ್ಮ ಸಮಾಜವನ್ನು ಈ ರಾಜ್ಯ ಆಳಿದ ಎಲ್ಲ ಸರ್ಕಾರಗಳು ನಮ್ಮನ್ನು ಕಡೆಗಣಿಸಿವೆ. ಈ ಹಿಂದೆ ತಾನು ಎಮ್.ಎಲ್.ಸಿ ಇದ್ದಾಗ ಮೇಲ್ಮನೆಯಲ್ಲಿ ನಡೆಸಿದ ಹೋರಾಟದ ಪ್ರತಿಫಲವಾಗಿ ವಿಶ್ವಕರ್ಮ ಸಮಾಜ ಅಭಿವೃದ್ಧಿ ನಿಗಮ, ಜಕಣಾಚಾರಿ ಜಯಂತಿ ಹಾಗೂ ವಿಶ್ವಕರ್ಮ ಜಯಂತಿಗಳನ್ನು ಆಚರಿಸಲು ಸರ್ಕಾರ ಮುಂದೆ ಬಂತು. ದುರಂತವೆಂದರೆ ಇತ್ತೀಚೇಗೆ ತಿಂಥಣಿಯಲ್ಲಿ ಜರುಗಿದ ಮೌನೇಶ್ವರ ಜಾತ್ರೆಯಲ್ಲಿ ಮೂಲಭೂತ ಸೌಕರ್ಯದ ಕೊರತೆ ಎದ್ದು ಕಾಣುತ್ತಿತ್ತು. ಅಲ್ಲಿ ಮಹಿಳೆಯರು ಸ್ನಾನ ಮಾಡಿ ಬಟ್ಟೆ ಬದಲಿಸಲೂ ಸಹ ವ್ಯವಸ್ಥೆ ಇರದೆ ಇರುವುದು ವಿಪರ್ಯಾಸ. ಪ್ರತಿ ವರ್ಷ ಜರುಗುವ ಹಂಪಿ ಉತ್ಸವದಲ್ಲಿ ನಮ್ಮ ಸಮಾಜದ ಯಾವೊಬ್ಬ ಸ್ವಾಮಿಜಿಗಳಿಗೆ ವೇದಿಕೆಗೆ ಅವ್ಹಾನಿಸುವುದಿಲ್ಲ. ಹಂಪಿಯಲ್ಲಿನ ಕಲ್ಲಿನ ರಥದ ಆದಿಯಾಗಿ ಅಲ್ಲಿನ ಶಿಲಾ ಶಾಸನಗಳು, ಮಂದಿರಗಳನ್ನು ನಾವು ಬೇವರು ಹಾಗೂ ರಸ್ತ ಹರಿಸಿ ಕಟ್ಟಿದ್ದೇವೆ. ಆದರೂ ನಮಗೆ ಅಲ್ಲಿ ಜಾಗವಿಲ್ಲ. ಈ ದೇಶದಲ್ಲಿ ಬಡಿಗತನ, ಕಮ್ಮಾರಿಕೆ, ಸೇರಿದಂತೆ ನಮ್ಮ ಐದು ಕಸಬುಗಳು ಜೀವಂತವಾಗಿರಬೇಕೆಂದರೆ ನಮಗೆ ನ್ಯಾಯ ದೊರಕಬೇಕೆಂದು ಕರೆ ಕೊಟ್ಟರು.

ಚಾಮರಾಜನಗರ ಹಾಗೂ ಮಂಗಳೂರಿನಲ್ಲಿ ನಮ್ಮ ಸಮಾಜವನ್ನು ಎಸ್.ಟಿಗೆ ಸೇರಿಸಲಾಗಿದೆ. ಉಳಿದ ಕಡೆ 2ಎ ಪಟ್ಟಿಯಲ್ಲಿದೆ. ಹಿಂದೆ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದಾಗ ಹಾವನೂರ ವರದಿ ಜಾರಿ ಮಾಡಿ ನಮ್ಮ ಸಮಾಜವನ್ನು ಎಸ್.ಟಿ ಜಾತಿ ಪಟ್ಟಿಗೆ ಸೇರಿಸದೆ ಒಬಿಸಿ ಪಟ್ಟಿಯಲ್ಲಿಯೆ ಉಳಿಸಿದರು. ಆವಾಗಿಂದ ಇಲ್ಲಿಯ ವರೆಗೆ ನಮ್ಮ ಸಮಾಜದ ಒಬ್ಬರು ಸಹ ಐಎಎಸ್, ಐಪಿಎಸ್ ಅಧಿಕಾರಿ ಆಗಲಿಲ್ಲ. ಶಿಕ್ಷಣಕ್ಕೆ ಮಹತ್ವ ನೀಡದೇ ನಮ್ಮ ಸಮಾಜ ಇಂದು ಬಹಳಷ್ಟು ಹಿಂದುಳಿಯಲು ಕಾರಣವಾಗಿದೆ. ನಾಗಮೋಹನದಾಸ ವರದಿಯಲ್ಲಿ ಸಹ ನಮ್ಮ ಜನಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ. ಒಟ್ಟಾರೆ ಎಲ್ಲ ಕಡೆಯಿಂದ ನಮಗೆ ಮೋಸವಾಗುತ್ತಲ್ಲೆ ಬರುತ್ತಿದ್ದು, ಸಿದ್ಧರಾಮಯ್ಯ ಸರ್ಕಾರ ನಮ್ಮ ಸಮಾಜದ ಬೇಡಿಕೆಗಳನ್ನು ಮನ್ನಿಸಿ ನಮಗೆ ಮೀಸಲಾತಿ ಜೊತೆಗೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡುವಂತೆ ನಂಜುಂಡಿ ಒತ್ತಾಯಿಸಿದರು.

ಬೀದರ್ ಹಾಗೂ ಸುಲೇಪೇಟ್ ಏಕದಂಡಗಿ ಮಠದ ಪೂಜ್ಯ ದೊಡ್ಡೆಂದ್ರ ಸ್ವಾಮಿಜಿ, ವಿಶ್ವಕರ್ಮ ಮಹಾಸಭಾದ ಗೌರವಧ್ಯಕ್ಷ ಜೈ ಪ್ರಕಾಶ ಪೊದ್ದಾರ, ಜಿಲ್ಲಾಧ್ಯಕ್ಷ ದತ್ತಾತ್ರೇಯ ವಿಶ್ವಕರ್ಮ ಹಿಪ್ಪಳಗಾಂವ, ಯುವ ಅಧ್ಯಕ್ಷ ಪ್ರಶಾಂತ ವಿಶ್ವಕರ್ಮಾ, ಮಹಿಳಾ ಗೌರವಧ್ಯಕ್ಷೆ ಅಂಬುಜಾ ಕೆ ಎಂ ವಿಶ್ವಕರ್ಮ, ಮಹಿಳಾ ಜಿಲ್ಲಾಧ್ಯಕ್ಷೆ ಸುಲೋಚನಾ ಜಿ ವಿಶ್ವಕರ್ಮ, ಜಕಣಾಚಾರಿ ಪತ್ತಿನ ಸಹಾಕಾರ ಸಂಘದ ಅಧ್ಯಕ್ಷ ಸಂಜಿವಕುಮಾರ ಸೊನಾರ, ವಿಶ್ವಕರ್ಮ ಧರ್ಮ ವರ್ಧಿನಿ ಸಂಘದ ಶ್ರೀನಿವಾರ ವಿಶ್ವಕರ್ಮ

# ನೂತನ ವರ್ಷದ ಪಂಚಾಂಗ ಶ್ರವಣ: ಗುರುಪ್ರಸಾದ್ ಅವರಿಂದ ಪ್ರವಚನ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಾವು ವೈಜ್ಞಾನಿಕವಾಗಿ ಎಷ್ಟೇ ಮುಂದುವರಿದರೂ,ಉಪಗ್ರಹಗಳನ್ನು ಉಡಾವಣೆ ಮಾಡಲೂ ಸಮಯ, ಕಾಲಕ್ಕೆ ಜೋತಿಷ್ಯ ಮತ್ತು ದೇವರ ಮೊರೆ ಹೋಗುತ್ತಾರೆ. ಯುಗಾದಿ ಬಂತೆಂದರೆ ರೈತರು ಈ ವರ್ಷದಲ್ಲಿ ಯಾವ ಬೆಳೆಗೆ ಬಲಾ ಬಲದ ಬಗ್ಗೆ ಜೋತಿಷ್ಯ ಕೇಳಿದರೆ, ಇನ್ನು ರಾಜಕಾರಣಿಗಳಿಂದ ಹಿಡಿದು ಅಧಿಕಾರ ವರ್ಗದವರು ಜೋತಿಷ್ಯ ಕೇಳುವುದರಿಂದ ಹೊರತಾಗಿಲ್ಲ.

ಪ್ರತಿ ವರ್ಷವು ಜೋತಿಷ್ಯರತ್ನ, ವಾಸ್ತುಬ್ರಹ್ಮ, ಪಂಡಿತ್ ಮಠಂ ಗುರುಪ್ರಸಾದ್ ಅವರು ಪ್ರತಿವರ್ಷವು ಶ್ರೀ ಉಮಾಮಹೇಶ್ವರ ಪಂಚಾಂಗ ರಚನೆ ಮಾಡಿ ಪಠಣೆ ಮಾಡುತ್ತಾರೆ. ಈ ವರ್ಷದ ಶ್ರೀ ಮನ್ನೃಪ ಶಾಲಿವಾಹನ ಶಕೆ 1947ನೇ ಶ್ರೀ ಪರಾಭವ ನಾಮ ಸಂವ ತ್ಸರ(2026–27) ದ ಮಳೆ, ಬೆಳೆ, ಬೆಲೆ, ವಾತಾವರಣ, ರಾಜಕೀಯ ಪರಿಸ್ಥಿತಿ, ದ್ವಾದಶ ರಾಶಿ ಗೋಚರ ಫಲಗಳು, ಗ್ರಹಣ, ಮೂಢಗಳು, ಮುಹೂರ್ತಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಸಂಖ್ಯಾ ಶಾಸ್ತ್ರವನ್ನು ಅಳವಡಿಸಿದ ಪ್ರಥಮ ಪಂಚಾಗ ಇದಾಗಿದೆ.

ಯುಗಾದಿ ದಿನದಂದು ಪಂಚಾಂಗ ಶ್ರವಣ:

ಪ್ರತಿವರ್ಷ ಯುಗಾದಿಯಂದು ಬಹುತೇಕ ಕಡೆಗಳಲ್ಲಿ ಪಂಚಾಂಗ ಶ್ರವಣ ಮಾಡುವ ವಾಡಿಕೆ ಈಗಲೂ ನಡೆದುಕೊಂಡು ಬರುತ್ತಿದೆ. ಅಂತೆಯೇ ಪಂಡಿತ್ ಮಠಂ ಗುರುಪ್ರಸಾದ್ ಅವರು ಪಂಚಾಂಗ ಪಠಣೆ ಮಾಡಿಕೊಂಡು ಬರುತ್ತಿದ್ದಾರೆ. ಪ್ರತಿವರ್ಷ ಚೈತ್ರಮಾಸ ಶುಕ್ಲ ಪಕ್ಷ ಪಾಡ್ಯಮಿ ದಿನ ಮಂಗಳ ಸ್ನಾನ ಮಾಡಿ, ಗಣಪತಿ, ಕುಲದೈವ, ಇಷ್ಟದೇವರು, ನವಗ್ರಹ ಆರಾಧನೆ ಮಾಡಿ, ಮಾತೃದೇವ ಹಾಗೂ ಗುರು ದೇವರ ಆಶೀರ್ವಾದ ಪಡೆದು ಪಂಚಾಂಗಕ್ಕೆ ನಮಸ್ಕರಿಸಿ ಬೇವಿನ ಹೂವು, ಮಾವಿನ ಕಾಯಿ ಚೂರುಗಳು, ನಲ್ಲಿಕಾಯಿರಸ, ಹೊಸ ಹುಣಸೇ ಹಣ್ಣು, ಆಕಳ ತುಪ್ಪದಿಂದ ಚಡಿಯನ್ನು ದೇವರಿಗೆ ನೈವೇದ್ಯವನ್ನು ಮಾಡಿ, ಬಂಧು ಮಿತ್ರರೊಂದಿಗೆ ಸೇವಿಸಿ ಪಂಚಾಂಗ ಶ್ರವಣವನ್ನು ಮಾಡುವುದು ಪದ್ಧತಿಯಾಗಿದೆ.

ಪಂಚಾಂಗದ ಸಾರ:

ತಿಥಿ, ವಾರ, ನಕ್ಷತ್ರ, ಯೋಗ, ಕರಣ ಐದನ್ನು ಪಂಚಾಂಗ ತಿಳಿಸುತ್ತದೆ. ತಿಂಗಳು, ದಿನಗಳು, ಇತರ ಖಗೋಳ ಶಾಸ್ತ್ರಗಳನ್ನು ತಿಳಿಸುವುದು ತಿಥಿ–ಯಾದರೆ, ಶ್ರೇಯಸ್ಸಿಗೆ ವಾರಗಳು, ಆಯುಷ್ಯವೃದ್ಧಿಗೆ ನಕ್ಷತ್ರಗಳು, ಪಾಪ ಪರಿಹಾರಕ್ಕೆ ಯೋಗಗಳು, ರೋಗ ನಿವಾರಣೆಗೆ ಕರಣಗಳು ಹೀಗೆ ಇವೆಲ್ಲವುಗಳು ಕಾರ್ಯಸಿದ್ಧಿಗೆ ಸಹಾಯ ಮಾಡುತ್ತವೆ. ಇವುಗಳನ್ನು ಒಳಗೊಂಡ ಪಂಚಾಂಗ ಕೇಳಿದರೆ ಶತ್ರುಬಾಧೆ, ಕೇಡು ಇತ್ಯಾದಿ ಅಶುಭ ಫಲಗಳು ತೊಲಗಿಸುತ್ತದೆ.

ಪರಾಭವ ನಾಮ ಸಂವತ್ಸರದ ನವನಾಯಕರು:

ಚೈತ್ರಮಾಸಶುಕ್ಲಪಕ್ಷಪ್ರತಿಪದಾದಿ ದಿನ ಯಾವ ವಾರ ಉಂಟಾಗುತ್ತದೆಯೋ ಆ ವಾರಾಧಿಪತಿಯೇ ಆ ಸಂವತ್ಸರದ ರಾಜನಾಗುತ್ತಾನೆ, ಯಾವ ವಾರ ಸಂಕ್ರಮಣ ಉಂಟಾಗುತ್ತದೆಯೋ ಆ ವಾರದ ಅಧಿಪತಿ ಆ ಸಂವತ್ಸರದ ಮಂತ್ರಿಯಾಗುವನು, ಯಾವ ವಾರ ಕರ್ಕ ಸಂಕ್ರಾಂತಿ ಉಂಟಾಗುತ್ತದೆ–ಯೋ ಆ ವಾರಾಧಿಪತಿ ಸಸ್ಯಾಧಿಪತಿ ಆಗುತ್ತಾನೆ, ಯಾವ ವಾರ ತುಲಾ ಸಂಕ್ರಮಣ ಉಂಟಾಗುತ್ತದೆಯೋ ಆ ವಾರಾಧಿಪತಿ ಆ ಸಂವತ್ಸರದ ರಸಾಧಿಪತಿ ಆಗುವನು, ಯಾವ ವಾರ ಮಕರ ಸಂಕ್ರಮಣ ಉಂಟಾಗುತ್ತದೆಯೋ ಆ ವಾರಧಿಪತಿ ಆ ಸಂವತ್ಸರದ ನೀರಸಾಧಿಪತಿ ಆಗುತ್ತಾನೆ.

ಜನರು ಸುಭೀಕ್ಷೆಯಿಂದ ಇರ್ತಾರೆ:

ರಾಜ ಗುರುವಾಗಿದ್ದರೆ, ಮಂತ್ರಿ ಕುಜನಾಗಿದ್ದಾನೆ, ಸೇನಾಧಿಪತಿ ಚಂದ್ರನಾಗಿದ್ದಾನೆ, ಸಸ್ಯಾಧಿಪತಿ ಶುಕ್ರನಾಗಿದ್ದರೆ, ಧಾನ್ಯಾಧಿಪತಿ ಬುಧನಾಗಿದ್ದರೆ, ಅರ್ಘಾಧಿಪತಿ, ಮೇಘಾಧಿಪತಿ ಚಂದ್ರನಾಗಿದ್ದಾನೆ, ರಸಾಧಿಪತಿ ಸೂರ್ಯನಾಗಿದ್ದರೆ, ನೀರಸಾಧಿಪತಿ ಶುಕ್ರನಾಗಿದ್ದಾನೆ. ಗುರು ರಾಜನಾಗಿರುವುದರಿಂದ ಈ ಸಂವತ್ಸರದಲ್ಲಿ ಜನರು ಸುಭಿಕ್ಷೆಯಿಂದ ಆರೋಗ್ಯದಿಂದ ಸುಖ ಜೀವನ ನಡೆಸುತ್ತಾರೆ, ಅವನೀತಿ, ಅನ್ಯಾಯಗಳು ಕಡಿಮೆ ಆಗುತ್ತದೆ, ಅನುಕೂಲಕರ ಮಳೆಯಿಂದ ಬೆಳೆಗಳು ಚೆನ್ನಾಗಿ ಬೆಳೆದು ರೈತರು ಸಂತೃಪ್ತಿಯಿಂದಿರುತ್ತಾರೆ, ಬಂಗಾರದ ಬೆಲೆ ಹೆಚ್ಚಾಗುತ್ತದೆ, ಆಧುನಿಕ ವಿಜ್ಞಾನವನ್ನು ದುರುಪಯೋಗ ಮಾಡಿಕೊಳ್ಳುವವರು ಹೆಚ್ಚುತ್ತಾರೆ, ಗುರುವು ಉಚ್ಚಸ್ಥಾನಗಳಲ್ಲಿ ಸಂಚಾರ ಮಾಡುವುದರಿಂದ ದೇವಾಲಯಗಳು, ಆಧ್ಯಾತ್ಮಿಕ ಕೇಂದ್ರಗಳು ಅಭಿವೃದ್ಧಿಯಾಗುತ್ತದೆ.

ಯದ್ಧ ಭಯ ಹೆಚ್ಚಾಗಲಿದೆ:

ಈ ವರ್ಷದಲ್ಲಿ ಕುಜನು ಮಂತ್ರಿಯಾಗಿರುವುದರಿಂದ ಕಲಹಗಳು, ಯುದ್ಧಗಳು, ಅಗ್ನಿಗಳು ಭಯಗಳು ಹೆಚ್ಚು, ದೇಶದಲ್ಲಿ ಯುದ್ಧಭಯ ಹೆಚ್ಚಾಗುತ್ತದೆ, ಊಹಿಸಲಾಗದ ಬದಲಾವಣೆಗಳು ಜನರಲ್ಲಿ ಭಯ ಹುಟ್ಟಿಸಿದರೂ, ಜನರ ಪರಿಸ್ಥಿತಿ ಸ್ಥಿರವಾಗಿರುತ್ತದೆ. ತೊಗರಿ, ಮೆಣಸಿನಕಾಯಿ ಮತ್ತು ಮೆಣಸಿಗೆ ಬೆಲೆ ಹೆಚ್ಚಾಗುತ್ತದೆ. ಚಂದ್ರನು ಸೇನಾಧಿಪತಿಯಾಗಿರುವುದರಿಂದ ರಾಜ್ಯಗಳ ವಿಬೇಧಗಳು ಜನಸಾಮಾನ್ಯರಲ್ಲಿ ಭಯ ಉಂಟಾಗುತ್ತದೆ, ಸರಕಾರದ ಹಣ ದುರುಪಯೋಗ ಆಗುತ್ತದೆ, ಸಮುದ್ರದಲ್ಲಿ ಅನೇಕ ಬದಲಾವಣೆಗಾಗಿ, ಹಡಗುಗಳ ಪ್ರಮಾದಗಳಿಂದ ಪ್ರಾಣಹಾನಿ ಸಂಭವಿಸುತ್ತದೆ. ಮಾನಸೀಕ ಬಲಹೀನತೆ ಎಲ್ಲಾ ರಂಗಗಳಲ್ಲಿ ಕಂಡು ಬರುತ್ತದೆ.

ಶುಕ್ರನು ಸಸ್ಯಾಧಿಪತಿಯಾಗಿರುವುದರಿಂದ ನೀರಾವರಿ ಮತ್ತು ಬಯಲು ಭೂಮಿಗಳಲ್ಲಿ ಉತ್ತಮ ಬೆಳೆ ಬರುತ್ತವೆ, ದೇಶವು ಸುಭೀಕ್ಷೆಯಿಂದ ಕೂಡಿರುತ್ತದೆ. ಬಿಳಿ ಧಾನ್ಯಗಳು ಚೆನ್ನಾಗಿ ಬೆಳೆಯುತ್ತವೆ. ಬುಧನು ಧಾನ್ಯಾಧಿಪತಿಯಾಗಿರುವುದರಿಂದ ಅಕ್ಕಿ, ಗೋಧಿ, ತೊಗರಿ ಸೇರಿದಂತೆ ಬೆಲೆ ಹೆಚ್ಚಾಗುತ್ತದೆ, ಶೇಂಗಾ, ಈರುಳ್ಳಿ, ಆಲೂಗಡ್ಡೆ ಚೆನ್ನಾಗಿ ಬೆಳೆಯುತ್ತವೆ. ಧಾನ್ಯಾದಿಪತಿಯಾದ ಬುಧ ಆಗಿರುವುದರಿಂದ ಅಕ್ಕಿ, ಗೋಧಿ, ತೊಗರಿ ಎಲ್ಲಾ ಧಾನ್ಯಗಳ ಬೆಲೆ ಹೆಚ್ಚಾಗುತ್ತವೆ.

ರಾಜಕೀಯ ಕಲುಷಿತ, ರಾಜಕೀಯ ವ್ಯಾಪಾರ:

ಅರ್ಘಾಧಿಪತಿ ಚಂದ್ರನಾಗಿರುವುದರಿಂದ ರಾಜಕೀಯ ಕಲುಷಿತವಾಗಿ, ರಾಜಕೀಯ ವ್ಯಾಪಾರ ವಾಗುತ್ತದೆ, ಕುಲ, ಮತ ಮತ್ತು ವರ್ಗಗಳ ಬೇದಗಳು ಹೆಚ್ಚುತ್ತವೆ, ಅಶಾಂತಿ, ವಿಷಾದಗಳು, ಅನೈತಿಕೆ ಎದ್ದು ಕಾಣುತ್ತದೆ. ಮೇಘಾಧಿಪತಿ ಚಂದ್ರ ಆಗಿರುವುದರಿಂದ ಅತಿಯಾದ ಮಳೆ ಜನರಲ್ಲಿ ಭೀತಿ ಹುಟ್ಟಿಸುತ್ತದೆ, ಆಲಿಕಲ್ಲು ಮಳೆಯಿಂದ ಬೆಳೆ ನಾಶ ಹೊಂದಲಿದೆ. ರಸಾಧಿಪತಿ ಸೂರ್ಯನಾಗಿರುವುದರಿಂದ ವಿಸ್ಫೋಟ ಸಂಬಂಧ ಘಟನೆಗಳು ಪ್ರಪಂಚಾದ್ಯಂತ ವ್ಯಾಪಕವಾಗಿ ನಡೆಯುತ್ತವೆ. ಹಿಂಸಾತ್ಮಕ ಘಟನೆಗಳು, ಉಗ್ರವಾದಿಗಳ ಕೃತ್ಯಗಳು ಮಹಾನಗರಗಳಲ್ಲಿ ಹೆಚ್ಚಾಗಲಿದೆ. ರಸಾಧಿಪತಿ ಶುಕ್ರನಾಗಿರುವುದರಿಂದ ಕರ್ಪೂರ, ಶ್ರೀಗಂಧ, ಬಂಗಾರ, ಮುತ್ತು ವಸ್ತುಗಳ ಬೆಲೆಗಳು ಅಧಿಕವಾಗುತ್ತದೆ.

ಪ್ರಕೃತಿ ವೈಪರಿತ್ಯಗಳು ಹೆಚ್ಚುತ್ತವೆ, ಜಲ, ಅಗ್ನಿ ಪ್ರಳಯ, ಭೂಕಂಪಗಳು ಹೆಚ್ಚಾಗುತ್ತವೆ, ಪ್ರಕೃತಿ ವೈಪರಿತ್ಯಗಳು ಹೆಚ್ಚಾಗುತ್ತವೆ, ಅಮೆರಿಕದಲ್ಲಿ ಪ್ರಕೃತಿ, ವೈಪರಿತ್ಯಗಳು, ಜಪಾನಿನಲ್ಲಿ ಭೂಕಂಪನಗಳು, ನಗರಗಳಲ್ಲಿ ಜಲಪ್ರವಾಹಗಳು, ಬಿರುಗಾಳಿಯಿಂದ ಪ್ರಕೃತಿ ವೈಪರಿತ್ಯಗಳು, ಬೇಸಿಗೆಯ ಬಿಸಿಲು ಅಧಿಕವಾಗಿರುತ್ತದೆ. ಅಂಡಮಾನ್ ನಿಕೋಬರ್, ತಮಿಳುನಾಡಿನಲ್ಲಿ ಭೂಕಂಪನವಾಗಲಿದೆ.

ಈ ವರ್ಷದ ಪ್ರಮುಖ ಘಟನೆಗಳು:

ಪಾಕಿಸ್ತಾನ, ಚೈನಾ ಮತ್ತು ಭಾರತದ ಸರಹದ್ದಿನಲ್ಲಿ ವಿವಾದಗಳು ಹೆಚ್ಚುತ್ತವೆ, ಇದರಿಂದಾಗಿ ಉದ್ರಿಕ್ತ ಪರಿಸ್ಥಿತಿ ಉಂಟಾಗುತ್ತದೆ, ಅಮೇರಿಕಾಕ್ಕೆ ವಿರುದ್ಧವಾಗಿ ಪ್ರಪಂಚದ ಅನೇಕ ದೇಶಗಳು ತಲೆಯತ್ತುತ್ತವೆ. ಬಾಂಗ್ಲಾದೇಶಗಳ ಸರಿಹದ್ದು ಸಮಸ್ಯೆಗಳು ಹೆಚ್ಚುತ್ತವೆ, ಪ್ರವಾಸಿ ಭಾರತೀಯರಿಗೆ ಕಷ್ಟಕರ ಕಾಲ ಎದುರಾಗಿಲಿದೆ, ಭಾರತದಲ್ಲಿ ಸಿಕ್ಕಿಂ, ಅಸ್ಸಾಂ, ಮೇಘಾಲಯ, ಮಣಿಪುರಗಳ ಸರಕಾರಕ್ಕೆ ಹೋರಾಟಗಳಿಂದ ಅಶಾಂತಿ ಜಗಳ ಹೆಚ್ಚಾಗುತ್ತವೆ. ವಾಣಿಜ್ಯ ರಂಗದಲ್ಲಿ ಭಾರತವು ಉನ್ನತ ಸ್ಥಾನವನ್ನು ಪಡೆಯುತ್ತದೆ, ಆಶ್ಚರ್ಯ ಪಡುವಂತಹ ಹಗರಣಗಳು ಬೆಳಕಿಗೆ ಬರುತ್ತವೆ, ಇಸ್ರೋ ಹೊಸ ಪ್ರಯೋಗಗಳಿಂದ ಉನ್ನತಿ ಹೊಂದುತ್ತದೆ. ಒಂದು ಜಾತಿಯ ಪಕ್ಷ ದೇಶದಿಂದ ಕಾಣೆ–ಯಾಗುತ್ತದೆ ಎಂಬಿತ್ಯಾದಿ ಪ್ರಮುಖ ಅಂಶಗಳು ಶ್ರೀ ಉಮಾಮಹೇಶ್ವರ ಪಂಚಾಂಗದಲ್ಲಿ ಪಂಡಿತ್ ಮಠಂ ಗುರುಪ್ರಸಾದ್ ಅವರು ಪ್ರಸ್ತಾಪ ಮಾಡಿದ್ದಾರೆ.

# ಉಪ ಚುನಾವಣೆ ಟಿಕೆಟ್ ಗೊಂದಲವಿಲ್ಲ: ತುಕರಾಂ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,

ದಾವಣಗೆರೆ ಮತ್ತು ಬಾಗಲಕೋಟೆ ಟಿಕೆಟ್ ಹಂಚಿಕೆ ವಿಚಾರ ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ನಮ್ಮ ಪಕ್ಷ ಬಲಿಷ್ಠವಾಗಿದೆ. ಅಂತಿಮವಾಗಿ ಎಲ್ಲರ ಒಮ್ಮತದ ಮೇರೆಗೆ ಅಭ್ಯರ್ಥಿ ಘೋಷಣೆಯಾಗ್ತದೆ ಎಂದು ಸಂಸದ ತುಕಾರಾಂ ಹೇಳಿದ್ದಾರೆ.

ಅವರು ಇಂದು ನಗರದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾಥನೆ ಸಲ್ಲಿಸಿದ ನಂತರ ಮಾಧ್ಯಮಗಳ ಜೊತೆ ಮಾತನಾಡಿ. ಸಂಡೂರು ಉಪ ಚುನಾವಣೆ ವೇಳೆ ಟಿಕೆಟ್ ಗೊಂದಲವಿದೆ ಎಂದ್ರು. ನಂತರ ಎಲ್ಲವೂ ಸರಿ ಹೋಯಿತು ಎಂದಿದ್ದಾರೆ.

ರಾಜ್ಯ ರಾಜಕೀಯ ಬದಲಾವಣೆ ಬಗ್ಗೆ ಮಾತನಾಡುತ್ತ. ನವೆಂಬರ್ ಕ್ರಾಂತಿ, ಡಿಸೆಂಬರ್ ಕ್ರಾಂತಿ, ಜನವರಿ ಕ್ರಾಂತಿ ಎಲ್ಲವೂ ಮುಗಿತು. ಈಗ ಯುಗಾದಿ ಬಂತು ಯಾವುದೇ ಬದಲಾವಣೆ ಇಲ್ಲ. ಪರೋಕ್ಷವಾಗಿ ಸಿಎಂ ಬದಲಾವಣೆ ಇಲ್ಲ ಎಂದರು ತುಕಾರಾಂ ಅವರು.

# ಯುವ ಶಾಸಕರಿಗೆ ಸಚಿವ ಸ್ಥಾನಕ್ಕೆ ಮನವಿ: ಭರತ್ ರೆಡ್ಡಿ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,

ಬೆಂಗಳೂರಿನಲ್ಲಿ 48 ಶಾಸಕರು ಸಭೆ ಮಾಡಿರೋ ವಿಚಾರ ನಿಜ. ಅಲ್ಲಿ ಎಲ್ಲರೂ ಪಕ್ಷದ ಪರವಾಗಿಯೇ ಸಭೆ ಮಾಡಿದ್ದೇವೆ. ಮೊದಲ ಬಾರಿ ಗೆದ್ದವರು ಎರಡನೇ ಬಾರಿ ಗೆದ್ದವರು ಸೇರಿ ಸಭೆ ಮಾಡಿದ್ದೇವೆ. ಯುವಕರಿಗೆ ಸಚಿವ ಸ್ಥಾನ ನೀಡುವಂತೆ ಮನವಿ ಮಾಡಿದ್ದೇವೆ ಎಂದು ನಗರದ

ಶಾಸಕ ಭರತ್ ರೆಡ್ಡಿ ಹೇಳಿದ್ದಾರೆ.

ಅವರು ಇಂದು ನಗರದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ, ಯುವಕರನ್ನು ಸಚಿವರನ್ನಾಗಿ ಮಾಡಿದ್ರೇ ಮುಂದೆ ಪಕ್ಷಕ್ಕೆ ಒಳ್ಳೆಯದಾಗಲಿದೆ. ಯಾರಿಗಾದರೂ ಸೂಕ್ತ ಅಭ್ಯರ್ಥಿಗೆ ಅವಕಾಶ ನೀಡಲು ಮನವಿ. ಅಧಿವೇಶನ ಮುಗಿಯುವದರೊಳಗಾಗಿ ಭೇಟಿಗೆ ಸಮಯ ನಿಡ್ತೇವೆ ಎಂದಿದ್ದಾರೆ. ದೆಹಲಿಯ ಹೈಕಮೆಂಡ್ ನಾಯಕರನ್ನು ಭೇಟಿ ಮಾಡಲಿದ್ದೇವೆ.

ದೆಹಲಿಯ ಹೈಕಮೆಂಡ್ ನಮ್ಮ ಕುಟುಂಬ ಇದ್ದಂತೆ. ಕುಟುಂಬದ ಮುಂದೆ ಬೇಡಿಕೆ ಇಡಲಿದ್ದೇವೆ. ಕ್ಯಾಬಿನೆಟ್ ವಿಸ್ತಾರಣೆಯಾದ್ರೇ ನಮಗೆ ಅವಕಾಶ ಕೊಡಿ ಎಂದು ಕೇಳಿದ್ದೇವೆ ಎಂದರು.

# ಈದ್ಗಾದಲ್ಲಿ ರಂಜಾನ್ ಪ್ರಾರ್ಥನೆ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ ಕಳೆದ ಒಂದು ತಿಂಗಳ ಕಾಲ ಹಗಲು ವೇಳೆಯಲ್ಲಿ ಉಪವಾಸ ವೃತ ಆಚರಿಸಿದ್ದ ಮುಸ್ಲೀಂ ಸಮುದಾಯದ ಜನತೆ ಇಂದು ರಂಜಾನ್ ಹಬ್ಬದ ಅಂಗವಾಗಿ ನಗರದ ಹೊರ ವಲಯದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಹಿಂದುಗಳು ಯುಗಾದಿ ಹಬ್ಬಕ್ಕೆ ಹೊಸ ಬಟ್ಟೆ ಧರಿಸುವಂತೆ ಮುಸ್ಲಿರು ರಂಜಾನ್ ಹಬ್ಬಕ್ಕೆ ಹೊಸ ಬಟ್ಟೆಗಳನ್ನು ಧರಿಸಿ ಪ್ರಾರ್ಥನೆಗೆ ಇದ್ಗಾ ಮೈದಾನಕ್ಕೆ ಆಗಮಿಸಿದ್ದರು. ಧರ್ಮ ಗುರು ಪ್ರಾರ್ಥನೆಯನ್ನು ಭೋದಿಸಿ. ಧರ್ಮದ ಸಾರವನ್ನು ತಿಳಿಸಿದರು. ಪ್ರಾರ್ಥನೆಯಲ್ಲಿ ಸಂಸದ ಈ ತುಕರಾಂ, ಶಾಸಕ ಭರತ್ ರೆಡ್ಡಿ, ಡಿಸಿಸಿ ಅಧ್ಯಕ್ಷ ಅಲ್ಲಂ ಪ್ರಶಾಂತ್ ಸೇರಿದಂತೆ ಹಲವು ಜನಪ್ರತಿನಿಧಿಗಳು ಪಾಲ್ಗೊಂಡು ಮುಸ್ಲಿಂ ಸಮುದಾಯದ ಜನತೆಗೆ ಪರಸ್ಪರ ಶುಭಾಶಯ ಕೋರಿದರು.

# ಡಿಜಿಟಲ್ ಗ್ರಂಥಾಲಯ ಉದ್ಘಾಟನೆ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,

(ಸಂಡೂರು): ತಾಲೂಕಿನ ಬಂಡ್ರಿ ಗ್ರಾಮದ ಶ್ರೀ ಬಸವ ವಿದ್ಯಾ ಮಂದಿರ ಶಾಲೆಯಲ್ಲಿ ನಿರ್ಮಾಣಗೊಂಡಿರುವ ಡಿಜಿಟಲ್ ಗ್ರಂಥಾಲಯವನ್ನು ಇಂದು ಬಳ್ಳಾರಿ ಜಿಲ್ಲೆಯ ಸಂಸದ ಇ. ತುಕಾರಾಂ ಅವರು ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಿಜಿಟಲ್ ಗ್ರಂಥಾಲಯಗಳು ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಅತ್ಯಂತ ಪ್ರಮುಖವಾಗಿದ್ದು, ವಿದ್ಯಾರ್ಥಿಗಳಿಗೆ ನವೀನ ಜ್ಞಾನ ಹಾಗೂ ಮಾಹಿತಿಯನ್ನು ಸುಲಭವಾಗಿ ಪಡೆಯಲು ಸಹಕಾರಿ ಆಗುತ್ತವೆ ಎಂದರು. ಈ ರೀತಿಯ ಸೌಲಭ್ಯಗಳು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೂ ಸಮಾನ ಅವಕಾಶಗಳನ್ನು ಒದಗಿಸಿ, ಅವರ ವಿದ್ಯಾಭ್ಯಾಸದಲ್ಲಿ ಉತ್ತೇಜನ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಶ್ರೀ ಬಸವ ವಿದ್ಯಾ ಮಂದಿರ ಶಾಲೆಯಲ್ಲಿ ಸ್ಥಾಪನೆಯಾದ ಈ ಡಿಜಿಟಲ್ ಗ್ರಂಥಾಲಯವು ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನ ಆಧಾರಿತ ಅಧ್ಯಯನ ವ್ಯವಸ್ಥೆಯನ್ನು ಪರಿಚಯಿಸಿ, ಅವರ ಶೈಕ್ಷಣಿಕ ಪ್ರಗತಿಗೆ ನೆರವಾಗಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಶಾಲೆಯ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ತೆಕ್ಕಲಕೋಟೆಯಲ್ಲಿ ಬಯಲಾಟ ಮಹೋತ್ಸವ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ತೆಕ್ಕಲಕೋಟೆ ಪಟ್ಟಣದಲ್ಲಿ ನಡೆದ ಜಾತ್ರೆ ಮಹೋತ್ಸವದ ಅಂಗವಾಗಿ ಆಯೋಜಿಸಲಾದ ಬಯಲಾಟ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಬಿ. ಶ್ರೀರಾಮುಲು ಹಾಗೂ ಬಿಜೆಪಿ ಯುವ ಮೋರ್ಚಾ ಬಳ್ಳಾರಿ ಜಿಲ್ಲಾ ಅಧ್ಯಕ್ಷ ಎಂ.ಎಸ್. ಸಿದ್ದಪ್ಪ ಅವರು ಪಾಲ್ಗೊಂಡು ಕಲಾವಿದರನ್ನು ಪ್ರೋತ್ಸಾಹಿಸಿದರು. ಕಾರ್ಯಕ್ರಮದ ಮೊದಲು ಅವರು ಶ್ರೀ ಗುರು ಕಾಡ ಸಿದ್ದೇಶ್ವರ ಸ್ವಾಮಿಯ ದರ್ಶನ ಪಡೆದು, ಬಳಿಕ ರಾತ್ರಿ ನಡೆದ "ರತಿ ಕಲ್ಯಾಣ ಅರ್ಥಾರ್ಥ ಕಂಸನ ವಧೆ" ಬಯಲು ನಾಟಕವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಬಿ. ಶ್ರೀರಾಮುಲು, ನಮ್ಮ ನಾಡಿನ ಪಾರಂಪರಿಕ ಕಲೆಗಳಾದ ಬಯಲಾಟಗಳು ಗ್ರಾಮೀಣ ಸಂಸ್ಕೃತಿಯ ಜೀವಾಳವಾಗಿದ್ದು, ಇಂತಹ ಕಾರ್ಯಕ್ರಮಗಳು ಯುವಪೀಳಿಗೆಗೆ ಸಂಸ್ಕೃತಿ ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ಬಿಜೆಪಿ ಯುವ ಮೋರ್ಚಾ ಜಿಲ್ಲಾ ಅಧ್ಯಕ್ಷ ಎಂ.ಎಸ್. ಸಿದ್ದಪ್ಪ ಅವರು ಮಾತನಾಡಿ, ಬಯಲಾಟ, ಸಂಗೀತ ಮತ್ತು ನಾಟಕಗಳು ನಮ್ಮ ಸಂಸ್ಕೃತಿಯ ಅಡಿಪಾಯವಾಗಿದ್ದು, ಕಲಾವಿದರ ಪರಿಶ್ರಮದಿಂದಲೇ ಇಂತಹ ಪರಂಪರೆಗಳು ಜೀವಂತವಾಗಿವೆ. ಇವುಗಳನ್ನು ಉಳಿಸಿ ಬೆಳೆಸಲು ಸಮಾಜದ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಹೇಳಿದರು. ಜೊತೆಗೆ, ಯುವಕರಲ್ಲಿ ಕಲೆಯ ಮೇಲಿನ ಆಸಕ್ತಿ ಹೆಚ್ಚಿಸಲು ಇಂತಹ ಕಾರ್ಯಕ್ರಮಗಳು ಅವಶ್ಯಕವೆಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಮಾಜಿ ಪಟ್ಟಣ ಪಂಚಾಯತಿ ಅಧ್ಯಕ್ಷ ಕೆ. ಮಾರುತಿ, ಸದಸ್ಯರಾದ ಮಂಜುನಾಥ ಹಾಗೂ ಕೃಷ್ಣ, ಮುಖಂಡರಾದ ಉಮೇಶ, ಅನಿಲ್, ದೇವೇಂದ್ರ, ನರಸಪ್ಪ, ರಂಜಿತ್, ಗಾದಿಲಿಂಗ, ಮಲ್ಲಪ್ಪ ಸೇರಿದಂತೆ ಅನೇಕ ಕಲಾಭಿಮಾನಿಗಳು, ಯುವಕರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಯುಗಾದಿ ಜಾತ್ರೆ : ಹೋಳಿ ಹಬ್ಬ ಸಂಭ್ರಮ



ಮಲ್ಲಮ್ಮ ನುಡಿ ವಾರ್ತೆ ತೆಕ್ಕಲಕೋಟೆ:

ಯುಗಾದಿ ಹಬ್ಬದ ಜಾತೆ–ಯ ಪ್ರಯುಕ್ತ ಪಟ್ಟಣದಲ್ಲಿ ಭಾನುವಾರ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಬಣ್ಣಗಳ ಹಬ್ಬವಾದ ಹೋಳಿಯ ಸಂಭ್ರಮದಲ್ಲಿ ಯುವಕರು, ಮಹಿಳೆಯರು ಹಾಗೂ ಮಕ್ಕಳು ಪಾಲ್ಗೊಂಡು ಪರಸ್ಪರ ಬಣ್ಣಗಳನ್ನು ಎರಚಿಕೊಂಡು ಹಬ್ಬದ ಸಂಭ್ರಮ ಹೆಚ್ಚಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಸೋಮಲಿಂಗಪ್ಪನವರ ಪುತ್ರ ಹಾಗೂ ಬಿಜೆಪಿ ಯುವ ಮೋರ್ಚಾ ಬಳ್ಳಾರಿ ಜಿಲ್ಲಾ ಅಧ್ಯಕ್ಷರಾದ ಎಂ.ಎಸ್. ಸಿದ್ದಪ್ಪ ಅವರು ತಮ್ಮ ಕುಟುಂಬದೊಂದಿಗೆ ಹಬ್ಬದಲ್ಲಿ ಭಾಗವಹಿಸಿದರು. ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರೊಂದಿಗೆ ಸೇರಿ ಹೋಳಿ ಹಬ್ಬವನ್ನು ಆಚರಿಸಿದ ಅವರು, ಎಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳನ್ನು ತಿಳಿಸಿದರು.

ಹಬ್ಬದ ಅಂಗವಾಗಿ ಪಟ್ಟಣದಲ್ಲಿ ವಿಶೇಷ ಜಾತ್ರಾ ವಾತಾವರಣ ನಿರ್ಮಾಣವಾಗಿದ್ದು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಮನರಂಜನಾ ಚಟುವಟಿಕೆಗಳು ಜನರನ್ನು ಆಕರ್ಷಿಸಿತು. ಎಲ್ಲೆಡೆ ಬಣ್ಣಗಳ ಕಳೆ ತುಂಬಿ, ಹಬ್ಬದ ಉತ್ಸಾಹ ಸ್ಪಷ್ಟವಾಗಿ ಕಂಡುಬಂತು.

ಈ ವೇಳೆ ಮಾತನಾಡಿದ ಸಿದ್ದಪ್ಪ ಅವರು, "ಯುಗಾದಿ ಹಬ್ಬವು ಹೊಸ ವರ್ಷದ ಆರಂಭವನ್ನು ಸೂಚಿಸುವುದು ಮಾತ್ರವಲ್ಲದೆ, ಎಲ್ಲರ ಜೀವನದಲ್ಲಿ ಹೊಸ ಆಶೆಗಳು ಹಾಗೂ ಸಂತೋಷವನ್ನು ತರಲಿ" ಎಂದು ಹಾರೈಸಿದರು. ಕಾರ್ಯಕ್ರಮದಲ್ಲಿ ಬಿಜೆಪಿ ಕಾರ್ಯಕರ್ತರು, ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಪಂಚಾಂಗ ವಾಚನ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕಲ್ಚರಲ್ ಆಕ್ಟಿವಿಟೀಸ್ ಅಸೋಸಿಯೇಷನ್ ವತಿಯಿಂದ ಗೌರವಾಧ್ಯಕ್ಷ ರಾದ ಶೀಲಾ ಬ್ರಹ್ಮಯ್ಯನವರು ವೇದಿಕೆ ಗಣ್ಯರಿಗೆಲ್ಲರಿಗೂ ಸನ್ಮಾನಿಸಿದರು.

ನಂತರ ಉಮಾಮಹೇಶ್ವರ ಪಂಚಾಂಗದ ಕರ್ತೃ ಪಂಡಿತ್ ಮಠಂ ಗುರುಪ್ರಸಾದ್ ಶ್ರೀಪರಾಭವ ನಾಮ ಸಂವತ್ಸರದ ಮಳೆ,ಬೆಳೆ,ಗೋಚಾರಾದಿ ಫಲಗಳನ್ನು ವಾಚನ ಮಾಡಿದರು.ನೃತ್ಯ ಕಲಾವಿದ ಅಭಿಷೇಕ್ ಪ್ರಾರ್ಥನೆ ಮಾಡಿದರು. ಇವರ ತಂಡದ ಮಕ್ಕಳು ನೃತ್ಯ ಮಾಡಿದರು.ನೃತ್ಯ ಮಾಡಿದ ಎಲ್ಲ ಮಕ್ಕಳಿಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.ದಿವ್ಯ ಸಾನಿಧ್ಯ ವಹಿಸಿದ್ದ ಕೊಕ್ಕರಚೇಡಿನ ಶ್ರೀಗುರು ಚರಣಾನಂದ ಗುರು ಸೇವಾಶ್ರಮದ ಪೂಜ್ಯಮಾತಾಜಿ ಶರಣಮ್ಮ ತಾಯಿಯವರು ಮನಶುದ್ದಿ,ಸನ್ನಡತೆಗಳಿಂದ ಮುಂಬರುವ ಹೊಸ ವರ್ಷ ಎಲ್ಲರ ಬಾಳಿನಲ್ಲಿ ಸಂತಸ ಸಮೃದ್ದಿ ಲಭಿಸಲೆಂದು ಶುಭ ಹಾರೈಸಿದರು.ವೇದಿಕೆಯಲ್ಲಿ ಬಳ್ಳಾರಿ ಮಹಾನಗರ ಪಾಲಿಕೆ ಮಹಾ ಪೌರರಾದ ಪಿ.ಗಾದೆಪ್ಪ, ಕಾರ್ಯನಿರ್ವಾಹಕ ಅಧಿಕಾರಿಗಳಾದ ಸೆಲ್ವಮಣಿ, ಉಪಾಧ್ಯಕ್ಷ ರಾದ ಎನ್.ಪ್ರಕಾಶ್,ಛೇಂಬರ್ ಆಫ್ ಕಾಮರ್ಸ್ ನ ಹಿರಿಯ ಉಪಾಧ್ಯಕ್ಷ ದೊಡ್ಡನಗೌಡ ಖಜಾಂಚಿ ಎಂ.ಟಿ.ಮಲ್ಲೇಶಪ್ಪ, ಪ್ರಧಾನ ಕಾರ್ಯದರ್ಶಿ ವಿ.ರಾಮಚಂದ್ರ,ಜಂಟಿ ಕಾರ್ಯದರ್ಶಿ ಜಿ.ಕೆ.ರಾಮಕೃಷ್ಣ,ಮುಂತಾದ ಪದಾಧಿಕಾರಿಗಳು

ಉಪಸ್ಥಿತರಿದ್ದರು.ಮಾತಾಜಿಯವರು ಪಂಚಾಂಗ ಕರ್ತೃ ಮಠಂ ಗುರುಪ್ರಸಾದ್ ರವರನ್ನು ಸಿ ಬಗ್ಗೆಸನ್ಮಾನಿಸಿದರು.ಕೆ.ಬಿ.ಸಿದ್ಧಲಿಂಗಪ್ಪ

ಕಾರ್ಯಕ್ರಮ ನಿರೂಪಿಸಿದರು.ಅಸಂಖ್ಯಾತ ಭಕ್ತರು ಪಂಚಾಂಗ ಶ್ರವಣ ಮಾಡಿದರು.

# ಸಂಡೂರು: ಬಿಜೆಪಿ ಸಂಘಟನೆ ಬಲವರ್ಧನೆಗೆ ಒತ್ತಾಯ



ಮಲ್ಲಮ್ಮ ನುಡಿ ವಾರ್ತೆ ಸಂಡೂರು

ಭಾರತೀಯ ಜನತಾ ಪಾರ್ಟಿಯ ಸಂಡೂರು ವಿಧಾನಸಭಾ ಕ್ಷೇತ್ರದ ವಿವಿಧ ಮೋರ್ಚಾಗಳಿಗೆ ಹೊಸದಾಗಿ ಆಯ್ಕೆಯಾದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಮಹಾಶಕ್ತಿ ಕೇಂದ್ರದ ಪ್ರಮುಖರು ಮತ್ತು ಸಹ ಪ್ರಮುಖರಿಗೆ ಅಭಿನಂದನೆ ಸಲ್ಲಿಸುವ ಕಾರ್ಯಕ್ರಮ ಭಾನುವಾರ ನಡೆಯಿತು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ರಾಜ್ಯ ಎಸ್.ಟಿ. ಮೋರ್ಚಾ ಅಧ್ಯಕ್ಷರಾದ ಶ್ರೀ ಬಂಗಾರು ಹನುಮಂತು ಮಾತನಾಡಿ, ಪಕ್ಷದ ಸಂಘಟನೆ ಬಲಪಡಿಸುವಲ್ಲಿ ಪದಾಧಿಕಾರಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು. ಕೆಳಮಟ್ಟದ ಕಾರ್ಯಕರ್ತರನ್ನು ಗುರುತಿಸಿ ಅವರನ್ನು ಸಕ್ರಿಯವಾಗಿ ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಸುವ ಮೂಲಕ ಪಕ್ಷವನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕು ಎಂದು ಅವರು ಸೂಚಿಸಿದರು.

ಪ್ರತಿಯೊಬ್ಬ ಪದಾಧಿಕಾರಿಯೂ ತಮ್ಮ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸಿ, ಪಕ್ಷದ ತತ್ವಗಳು ಮತ್ತು ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಹೇಳಿದರು. ಸಂಘಟಿತ ಕಾರ್ಯಪದ್ಧತಿ ಮತ್ತು ತಂಡಭಾವನೆ ಮೂಲಕ ಪಕ್ಷವನ್ನು ಇನ್ನಷ್ಟು ವಿಸ್ತರಿಸುವುದು ಅಗತ್ಯ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ಉಡೇದ ಸುರೇಶ, ಮಂಡಲ ಅಧ್ಯಕ್ಷರಾದ ಅಶೋಕ ಕುಮಾರ್, ಉಪಾಧ್ಯಕ್ಷರಾದ ನರೇಂದ್ರ ಪಾಟೀಲ್, ಚಂದ್ರಪ್ಪ, ವಸಂತ ಕುಮಾರ್, ವಗ್ಗರಣೆ ರಮೇಶ್, ಪ್ರಧಾನ ಕಾರ್ಯದರ್ಶಿ ನರಸಿಂಗ ಎನ್.ಟಿ.ಆರ್., ಕಚೇರಿ ಕಾರ್ಯದರ್ಶಿ ಎನ್. ರಮೇಶ್, ಸೋಶಿಯಲ್ ಮೀಡಿಯಾ ಸಂಚಾಲಕರಾದ ಹುಲಿರಾಜ್ ಬೊಮ್ಮಘಟ್ಟ ಸೇರಿದಂತೆ ಪಕ್ಷದ ಹಿರಿಯರು, ವಿವಿಧ ಮೋರ್ಚಾ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಮಹಾಶಕ್ತಿ ಕೇಂದ್ರದ ಪ್ರಮುಖರು ಹಾಗೂ ಸಹ ಪ್ರಮುಖರು, ಮಂಡಲ ಪದಾಧಿಕಾರಿಗಳು, ಪುರಸಭೆ ಹಾಗೂ ಗ್ರಾಮ ಪಂಚಾಯತಿ ಸದಸ್ಯರು ಉಪಸ್ಥಿತರಿದ್ದರು.

# ಪತ್ರಕರ್ತರಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ.ಬಸವಕಲ್ಯಾಣ

ನಗರದ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಮತ್ತು ವಿಶ್ವಸ್ಥ ಸಮಿತಿ ಸಹಯೋಗದಲ್ಲಿ ಶ್ರೀ ಬಸವೇಶ್ವರ ನಂದಿಧ್ವಜದ ಸೇವಾ ಸಮಿತಿಯಿಂದ ಶರಣ ನಾಗಿದೇವರ ಕಂಬಳಿಮಠ ದಲ್ಲಿ ಏರ್ಪಡಿಸಿದ್ದ 23 ನೇ ನಂದಿಧ್ವಜ ತರಬೇತಿ ಚಾಲನೆ ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾ ಅಧ್ಯಕ್ಷರಾದ ಮಾರ್ಥಂಡ್ ಜೋಶಿ. ಉಪಾಧ್ಯಕ್ಷರಾದ ಡಿ.ಕೆ.ಪ್ರಹ್ಲಾದ. ಪ್ರಧಾನ ಕಾರ್ಯದರ್ಶಿಗಳಾದ ಉದಯಕುಮಾರ್ ಮೂಳೆ. ಸದಸ್ಯರಾದ ಕಲ್ಯಾಣರಾವ ಮದರಗಾಂವಕರ್. ಧನರಾಜ ರಾಜೋಳೆ. ಹಾಗೂ ನಾಗಪ್ಪಾ ನಿಣ್ಣೆ. ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಖೇಳಗಿ ಪೂಜ್ಯರಾದ ಮ.ನಿ.ಪ್ರ ಶಿವಲಿಂಗೇಶ್ವರ ಮಹಾಸ್ವಾಮಿಜಿ. ಮಲ್ಲಯ್ಯ ಸ್ವಾಮಿ ಹಿರೇಮಠ. ಉದ್ಯಮಿ ಸುಭಾಷ ಹೊಳಕುಂದೆ. ಶಶಿಕಾಂತ ದುರ್ಗೆ. ಸಿಪಿಐ ಅಲಿಸಾಬ್. ಬಸವರಾಜ ಬಾಲಕಿಲೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಬಸವಕಲ್ಯಾಣ: ನಗರದ ಈದ್ಗಾ ಮೈದಾನದಲ್ಲಿ ಮುಸ್ಲಿಮರು ಈದ್-ಉಲ್-ಫಿತ್ರ್ ಹಬ್ಬದ ನಮಾಜ್ ಅನ್ನು ಭಕ್ತಿಭಾವದಿಂದ ನೆರವೇರಿಸಿದರು. ಈ ಸಂದರ್ಭದಲ್ಲಿ ಮುಸ್ಲಿಂ ಸಹೋದರರು ಪರಸ್ಪರ ಈದ್ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು, ಶಾಂತಿ, ಸೌಹಾರ್ದತೆ ಮತ್ತು ಸಹೋದರತ್ವದ ಸಂದೇಶವನ್ನು ಹಂಚಿಕೊಂಡರು.

# ಸಂಭ್ರಮದಿಂದ ನಡೆದ ರಂಜಾನ್ ಹಬ್ಬ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ

ಮುಸ್ಲಿಂ ಸಮುದಾಯದ ವಿಶಿಷ್ಟ ಹಬ್ಬ ರಂಜಾನ್ ಅನ್ನು ನಗರದಲ್ಲಿ ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ಮುಂಜಾನೆಯೆ ಪಟ್ಟಣದಲ್ಲಿರುವ ಈದ್ಗಾ ಮೈದಾನಕ್ಕೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಎಂ.ಡಿ.ಆಸೀಫ್, ಎಂ.ಡಿ.ಸುಭಾನ್, ಸೈಯದ್ ಬಾಡೇಸಾಬ್, ಮಹಮ್ಮದ್ ಗೌಸೋದ್ದಿನ್, ಎಂ.ಡಿ.ಅರೀಫ್ ಅಲಿ, ಮಹ್ಮದ್ ರಫೀಕ್, ಮಹಮ್ಮದ್ ಸಜೀದ್, ಮಹ್ಮದ್ ಬಾಬಾ, ಮಹ್ಮದ್ ಗೌಸ್ ಪಟೇಲ್ ಮಹ್ಮದ್ ಜಕೀರ್, ಮಹಮ್ಮದ್ ಜವೀದ್, ಮಹ್ಮದ್ ಜಿಶಾನ್ ಹಾಗೂ ಇನ್ನಿತರರು ರಂಜಾನ್ ಹಬ್ಬದ ವಿನಿಮಯ ಮಾಡಿಕೊಂಡು ಶುಭಾಶಯಗಳು ತಿಳಿಸಿದರು. .

# ಸಂಭ್ರಮದ ರಂಜಾನ್



ಹೊಸಪೇಟೆ; ನಗರದಲ್ಲಿ ಸಂಭ್ರಮದ ರಂಜಾನ್ ಹಬ್ಬ ಆಚರಣೆ ಅಂಬೇಡ್ಕರ್ ಸರ್ಕಲ್ ಹತ್ತಿರದ ಈದ್ಗಾ ಮೈದಾನ, ಮಸೀದಿಗಳಲ್ಲಿ ಜನಸಾಗರ ಸಾಮೂಹಿಕ ಪ್ರಾರ್ಥನೆ ಹೊಸ ಬಟ್ಟೆ ತೊಟ್ಟು ಸಡಗರ ಪ್ರಾರ್ಥನೆಯ ವೇಳೆ ಕಮಿಟಿ ಅಂಜುಮನ್ ಖಿದ್ಮತೆ ಇಸ್ಲಾಂ ಸಮಿತಿಯ ಅಧ್ಯಕ್ಷರಾದ ಹೆಚ್.ಎನ್. ಮೊಹಮ್ಮದ ಇಮಾಮ್ ನಿಯಾಜಿ ಉಪಾಧ್ಯಕ್ಷರಾದ ಎಮ್.ಎಮ್. ಫೈರೋಜ್ ಖಾನ್ ಮುಸ್ಲಿಂ ಸಮಾಜ ಬಾಂಧವರು ಉಪಸ್ಥಿತರಿದ್ದರು.

# ಚೆಕ್‌ಪೋಸ್ಟ್‌ನಲ್ಲಿ 32.50 ಲಕ್ಷ ಜಪ್ತಿ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯ ಹಿನ್ನೆಲೆಯಲ್ಲಿ ಹೊನ್ನಾಕಟ್ಟಿ ಚೆಕ್‌ಪೋಸ್ಟ್ ಅಧಿಕಾರಿಗಳ ತಂಡ ರವಿವಾರ ಬೆಳಗಿನ ಜಾವ 4 ಗಂಟೆ ವೇಳೆಗೆ ನಡೆಸಿದ ಕಾರ್ಯಾಚರಣೆಯಲ್ಲಿ ದಾಖಲೆಯಿಲ್ಲದ 32.50 ಲಕ್ಷ ರೂ.ಗಳ ನಗದು ಹಣವನ್ನು ಜಪ್ತಿ ಮಾಡಿದ್ದಾರೆ.

ಪಂಚಾಯತರಾಜ್ ಇಲಾಖೆಯ ಶಶಿಧರ ಸಂಗನಾಳ ನೇತೃತ್ವದ ಎಫ್‌ಎಸ್‌ಟಿ ತಂಡ ಚೆಕ್‌ಪೋಸ್ಟನಲ್ಲಿ ವಾಹನಗಳ ಪರಿಶೀಲನೆ ನಡೆಸುತ್ತಿರುವ ವೇಳೆಯಲ್ಲಿ ಕೆಎ-36, ಪಿ-3991 ಮಾರುತಿ ಎರ್ಟಿಗಾ ಕಾರಿನಲ್ಲಿ 32.50 ಲಕ್ಷ ರೂ.ಗಳ ನಗದು ಪತ್ತೆಯಾಗಿದೆ.

ಪತ್ತೆಯಾದ ಹಣಕ್ಕೆ ದಾಖಲೆಗಳನ್ನು ಒದಗಿಸಲಾಗದ ಹಿನ್ನಲೆಯಲ್ಲಿ ಹಣವನ್ನು ಜಪ್ತಿ ಮಾಡಲಾಗಿದೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ. ಕಾರ್ಯಾಚರಣೆ ತಂಡದಲ್ಲಿ ಎ.ಎಸ್.ಐ ಸುರೇಶ ನಾಯಕ, ಪಿಸಿ ಮಂಜುನಾಥ ಕುರಿ, ಅಬಕಾರಿ ಕಾನ್ಸಟೇಬಲ್ ಶಂಕರಾನಂದ ಮುಧೋಳ ಹಾಗೂ ಪೋಲಿಸ್ ಕಾನ್ಸಟೇಬಲ್ ಎಂ. ಹುಣಗುಂಡ ಇದ್ದರು.

# ಸಿದ್ಧರಾಮಯ್ಯ ವಿಜಯೇಂದ್ರ ಭಾಗಿ
# ಕಾಂಗ್ರೆಸ್ ಬಿಜೆಪಿ ಅಭ್ಯರ್ಥಿಗಳಿಂದ ನಾಮಪತ್ರ

• ಮಲ್ಲಮ್ಮ ನುಡಿ ವಾರ್ತೆ,ಬಾಗಲಕೋಟೆ



ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರಕ್ಕೆ ಎಪ್ರೀಲ್ 9 ರಂದು ನಡೆಯುವ ಉಪಚುನಾವಣೆಗೆ ನಾಮಪತ್ರ ಸಲ್ಲಿಸಲು ಮಾ.23 ಕೊನೆಯ ದಿನವಾಗಿದ್ದು, ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಸೋಮವಾರ ನಾಮಪತ್ರ ಸಲ್ಲಿಸಲಿದ್ದಾರೆ.

ಬಿಜೆಪಿ ಅಧಿಕೃತ ಅಭ್ಯರ್ಥಿ ವೀರಣ್ಣ ಚರಂತಿಮಠ ಈಗಾಗಲೇ ಒಂದು ಪ್ರತಿ ನಾಮಪತ್ರ ಸಲ್ಲಿಸಿದ್ದು, ಸೋಮವಾರ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವಾಯ್.ವಿಜಯೇಂದ್ರ ಸೇರಿ ಅನೇಕ ನಾಯಕರುಗಳೊಂದಿಗೆ ಮತ್ತೊಂದು ನಾಮಪತ್ರ ಸಲ್ಲಿಸಲಿದ್ದಾರೆ.

ಅದೇ ರೀತಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಸಹ ಸೋಮವಾರವೇ ನಾಮಪತ್ರ ಸಲ್ಲಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸೇರಿ ಅನೇಕ ಸಚಿವರು, ಶಾಸಕರು, ಪಕ್ಷದ ಮುಖಂಡರು ಈ ಸಮಯದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಲಾಗಿದೆ.

ಎರಡೂ ಪಕ್ಷಗಳು ನಾಮಪತ್ರ ಸಲ್ಲಿಕೆಗೂ ಮುನ್ನ ಮೆರವಣಿಗೆ ನಡೆಸಿ ಶಕ್ತಿಪ್ರದರ್ಶನ ಮಾಡಲಿದ್ದು, ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಜಮಾಯಿಸುವ ನಿರೀಕ್ಷೆಯಿದೆ. ಶಾಸಕ

ಎಚ್.ವೈ.ಮೇಟಿ ಅವರ ನಿಧನದಿಂದಾಗಿ ಕ್ಷೇತ್ರಕ್ಕೆ ಉಪಚುನಾವಣೆ ನಡೆಯುತ್ತಿದ್ದು, ಕಾಂಗ್ರೆಸ್ ಪಕ್ಷದಿಂದ ಮೇಟಿ ಅವರ ಕಿರಿಯ ಪುತ್ರ ಉಮೇಶ ಮೇಟಿ ಹಾಗೂ ಬಿಜೆಪಿಯಿಂದ ಮಾಜಿ ಶಾಸಕ ವೀರಣ್ಣ ಚರಂತಿಮಠ ಸ್ಪರ್ಧೆ ಮಾಡುತ್ತಿದ್ದಾರೆ. 2023 ರ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಎಚ್.ವೈ.ಮೇಟಿ ವಿರುದ್ಧ ವೀರಣ್ಣ ಚರಂತಿಮಠ ಸೋಲು

ಅನುಭವಿಸಿದ್ದರು. ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರಕ್ಕೆ ಇದು ಎರಡನೇ ಉಪಚುನಾವಣೆಯಾಗಿದೆ.

# ತರಬೇತಿ ಕೇಂದ್ರಕ್ಕೆ ಡಿಸಿ, ವೀಕ್ಷಕರ ಭೇಟಿ
# ಉಪಚುನಾವಣೆ: ಅಧಿಕಾರಿಗಳಿಗೆ ತರಬೇತಿ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಉಪಚುನಾವಣೆ ಹಿನ್ನೆಲೆಯಲ್ಲಿ ಪ್ರಿಸೆಂಡಿಂಗ್ ಮತ್ತು ಅಸಿಸ್ಟಂಟ್ ಪ್ರಿಸೆಂಡಿಂಗ್ ಅಧಿಕಾರಿಗಳಿಗೆ ಪ್ರಥಮ ಹಂತದ ತರಬೇತಿ ಕಾರ್ಯಕ್ರಮ ರವಿವಾರ ಜರುಗಿತು.

ನವನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ತರಬೇತಿ ಕೇಂದ್ರಕ್ಕೆ ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಹಾಗೂ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ಭೇಟಿ ನೀಡಿ ತರಬೇತಿ ಪ್ರಗತಿಯನ್ನು ಪರಿಶೀಲಿಸಿದರು.

ಮತದಾನದ ಪ್ರಕ್ರಿಯೆ, ಇವಿಎಂ ಹಾಗೂ ವಿವಿಪ್ಯಾಟ್ ಉಪಯೋಗ, ಮತದಾರರ ಗುರುತಿನ ಪರಿಶೀಲನೆ ಸೇರಿದಂತೆ ವಿವಿಧ ಪ್ರಮುಖ ಅಂಶಗಳ ಕುರಿತು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಲಾಯಿತು. ಚುನಾವಣಾ ಕರ್ತವ್ಯಗಳನ್ನು ಜವಾಬ್ದಾರಿಯಿಂದ ಹಾಗೂ ನಿಷ್ಠೆಯಿಂದ ನಿರ್ವಹಿಸಬೇಕು. ಮತಗಟ್ಟೆ ಅಧಿಕಾರಿಗಳ ಕಾರ್ಯನಿರ್ವಹಣೆಯನ್ನು ಪರಿಣಾಮಕಾರಿಯಾಗಿ ನಡೆಸುವ ಉದ್ದೇಶದಿಂದ ತರಬೇತಿ ನೀಡಲಾಗುತ್ತಿದೆ. ತರಬೇತಿಯಲ್ಲಿ ಅಣಕು ಮತದಾನ ಪ್ರಕ್ರಿಯೆ ನಡೆಸಲಾಗುತ್ತಿದ್ದು, ಎಲ್ಲ ಪ್ರಿಸೆಂಡಿಂಗ್ ಅಧಿಕಾರಿಗಳು ತರಬೇತಿಯಲ್ಲಿ ಹೇಳಿಕೊಟ್ಟ ವಿಷಯಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡು ಚುನಾವಣೆಯನ್ನು ಶಾಂತಿಯುತವಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ಸಹಕರಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಅವರು ತಿಳಿಸಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ ಸೇರಿದಂತೆ ಇತರರು ಇದ್ದರು.

# ಜಾಹಿರಾತು ನೀತಿ ಪತ್ರಿಕೆ ಪರವಾಗಿರಲಿ: ತಿಪ್ಪೇಸ್ವಾಮಿ



ಗದಗ: ರಾಜ್ಯ ಸರ್ಕಾರದ ಜಾಹೀರಾತು ನೀತಿ 2013 ಅನುಷ್ಠಾನ ನಿಯಮಗಳು 2014 ರ ಪ್ರಕಾರ ಇಲ್ಲಿಯವರೆಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿ ರಾಜ್ಯ ಮಟ್ಟದ , ಜಿಲ್ಲಾ ಮಟ್ಟದ ಮತ್ತು ಪ್ರಾದೇಶಿಕ ಮಟ್ಟದ 700ಕ್ಕೂ ಹೆಚ್ಚಿನ ಪತ್ರಿಕೆಗಳು ಸೇರ್ಪಡೆಯಾಗಿರುತ್ತವೆ.

ರಾಜ್ಯ ಸರ್ಕಾರವು ಸುಮಾರು 11 ವರ್ಷ ಕಳೆದ ನಂತರ "ಕರ್ನಾಟಕ ಜಾಹೀರಾತು ನೀತಿ-2026" ನ್ನು ಜಾರಿಗೆ ತರಲು ದಿನಾಂಕ : 12-03-2026ರಂದು ನಡೆದ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿದೆ. ಕರ್ನಾಟಕ ಜಾಹೀರಾತು ನೀತಿ-2026 ಇನ್ನೂ ಸರಕಾರದಿಂದ ಅದೇಶವಾಗಿ ಜಾರಿಗೆ ಬಂದಿಲ್ಲ. 2026-27ನೇ ಸಾಲಿನಿಂದ ಅನ್ವಯವಾಗುವಂತೆ ಈ ಜಾಹೀರಾತು ನೀತಿಯನ್ನು ಜಾರಿಗೆ ತರಲಾಗುವುದು ಎಂದು ಸರ್ಕಾರ ತಿಳಿಸಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಕರ್ನಾಟಕ ಜಾಹೀರಾತು ನೀತಿ-2026 ಹರಿದಾಡುತ್ತಿದೆ. ಇದನ್ನು ಅವಲೋಕಿಸಿದಾಗ ಇದರಲ್ಲಿ ಹಾಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಜಿಲ್ಲಾ ಮತ್ತು ಪ್ರಾದೇಶಿಕ ಮಟ್ಟದ ಪತ್ರಿಕೆಗಳಿಗೆ ಕಡಿವಾಣ ಹಾಕುವಂತಹ ನಿಯಮಗಳನ್ನು ಅಳವಡಿಸಿರುವುದು ಪತ್ರಿಕೆಗಳ ಬೆಳವಣಿಗೆಗೆ ಮಾರಕವಾಗಲಿದೆ ಎಂದು ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ ತಿಳಿಸಿದರು. ನಗರದ ಪ್ರವಾಸಿ ಮಂದಿರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸರಕಾರದ ಜಾಹೀರಾತು ನೀತಿ 2013 ಅನುಷ್ಠಾನ ನಿಯಮಗಳು 2014ರ ನಿಯಮಗಳನ್ವಯ ಇಲ್ಲಿಯವರೆಗೆ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳನ್ನು ಮಾಧ್ಯಮ ಪಟ್ಟಿಗೆ ಸೇರ್ಪಡೆ ಮಾಡಲಾಗಿದ್ದು, ಸರ್ಕಾರದ ಜನಪ್ರಿಯ ಯೋಜನೆಗಳು, ಜನಪರ ಕಾರ್ಯಕ್ರಮಗಳ ಕುರಿತು ಜಾಹೀರಾತುಗಳ ಮೂಲಕ ಪತ್ರಿಕೆಗಳಿಗೆ ಜಾಹೀರಾತು ನೀಡುತ್ತಿದ್ದು, ಪತ್ರಿಕೆಗಳ ಬೆಳವಣಿಗೆಗೆ ರಾಜ್ಯ ಸರ್ಕಾರ ಕಾರಣವಾಗಿದೆ ಎಂದು ಹೇಳಿದರು. ಈಗ ಕರ್ನಾಟಕ ಜಾಹೀರಾತು ನೀತಿ-2026ನ್ನು 2026-27ನೇ ಸಾಲಿನಿಂದ ಜಾರಿಗೆ ತರಲು ಹೊರಟಿರುವುದು ಸ್ವಾಗತವಾಗಿದ್ದರೂ ಸಹ ಈ ನೀತಿಯಲ್ಲಿ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಮಾರಕವಾಗುವಂತಹ ಅಂಶಗಳನ್ನು ಸೇರ್ಪಡೆ ಮಾಡಿ ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಗಳು ಮುಚ್ಚುವ ಪರಿಸ್ಥಿತಿಗೆ ಸರಕಾರ ತಂದೊಡ್ಡುವಂತಹ ಕೃತ್ಯ-ಕ್ಕೆ ಕೈ ಹಾಕಿರುವುದನ್ನು ಅವರು ಖಂಡಿಸಿದರು.

# ರೈಲು ಹೋರಾಟ ವೇಗಗೊಳಿಸಲು ನಿಯೋಗ ರಚನೆ : ಮಾಸಿಕ ಸಭೆ ತೀರ್ಮಾನ



• ಮಲ್ಲಮ್ಮ ನುಡಿ, ವಾರ್ತೆ ಹುಣಸಗಿ

ಆಲಮಟ್ಟಿ ಯಾದಗಿರಿ ರೈಲು ಮಾರ್ಗದ ಅಭಿವೃದ್ಧಿಗಾಗಿ ನಡೆಯುತ್ತಿರುವ ಹೋರಾಟವನ್ನು ಮತ್ತಷ್ಟು ಬಲಪಡಿಸಲು ಹುಣಸಗಿ ಪಟ್ಟಣದ ಮುಖಂಡರು ಹಾಗೂ ಸಾರ್ವಜನಿಕ ಪ್ರತಿನಿಧಿಗಳ ಸಭೆ ಪ್ರವಾಸಿ ಮಂದಿರದಲ್ಲಿ ನಡೆಯಿತು.

ಸಭೆಯಲ್ಲಿ ಮಾತನಾಡಿದ ಚಂದ್ರಶೇಖರ ದಂಡಿನ ಅವರು, ಆಲಮಟ್ಟಿ–ಯಾದಗಿರಿ ರೈಲು ಮಾರ್ಗ ಆರಂಭಿಸಲು ಕೇಂದ್ರ ಸರ್ಕಾರ ಮತ್ತು ರೈಲ್ವೆ ಸಚಿವರಿಗೆ ಮನವಿ ಸಲ್ಲಿಸಿ ಸಾಕಷ್ಟು ದಿನಗಳಾದರೂ, ಸರ್ವೇ ಕಾರ್ಯ ಇನ್ನೂ ಪ್ರಾರಂಭವಾಗದಿರುವುದು ಖಂಡನೀಯವಾಗಿದೆ ಎಂದು ಹೇಳಿದರು. ಈ ಬಗ್ಗೆ ಸ್ಥಳೀಯ ಜನಪ್ರತಿನಿಧಿಗಳು, ಮುಖಂಡರು ಹಾಗೂ ಹೋರಾಟಗಾರರನ್ನು ಒಳಗೊಂಡ ನಿಯೋಗವನ್ನು ರಚಿಸಿ ಸಂಬಂಧಿತ ಅಧಿಕಾರಿಗಳನ್ನು ಭೇಟಿ ಮಾಡುವಂತೆ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ನಂತರ ಚನ್ನಕುಮಾರ ಬ್ಯಾಕೋಡ ಮಾತಾಡಿ ಇತ್ತೀಚಿನವರೆಗೆ ನಡೆದ ಹೋರಾಟದ ಪ್ರಗತಿಯ ಕುರಿತು ಸಭೆಯಲ್ಲಿ ಸಮಗ್ರ ಚರ್ಚೆ ನಡೆಯಿತು. ರೈಲು ಮಾರ್ಗದ ಸರ್ವೇ ಕಾರ್ಯಕ್ಕೆ ಅನುದಾನ ಮಂಜೂರಾಗಿ, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದರೂ ನೆಲಮಟ್ಟದಲ್ಲಿ ಯಾವುದೇ ಕಾರ್ಯ ಆರಂಭವಾಗದಿರುವುದು ಬೇಸರದ ಸಂಗತಿಯಾಗಿದೆ ಎಂದು ಹೇಳಿದರು.

ನಂತರ ಈ ಕುರಿತು ರಾಘವೇಂದ್ರ ಜಾಗಿರದಾರ ಮಾತನಾಡಿ ಟೆಂಡರ್ ಪ್ರಕ್ರಿಯೆಯ ಸಂಪೂರ್ಣ ವಿವರಗಳನ್ನು ತಿಳಿದುಕೊಳ್ಳಲು ನೈರುತ್ಯ ರೈಲ್ವೆ ವಿಭಾಗದ ಹುಬ್ಬಳ್ಳಿ ಕಚೇರಿಗೆ ನಿಯೋಗದೊಂದಿಗೆ ತೆರಳಲು ನಿರ್ಧರಿಸಲಾಯಿತು. ಹುಣಸಗಿ , ಮುದ್ದೇಬಿಹಾಳ ಹಾಗೂ ತಾಳಿಕೋಟಿ ಭಾಗಗಳನ್ನು ಒಳಗೊಂಡಂತೆ ತಾಲೂಕಿನ ವಿವಿಧ ಪ್ರದೇಶಗಳ ಪ್ರತಿನಿಧಿಗಳನ್ನು ಸೇರಿಸಿಕೊಂಡ ನಿಯೋಗವನ್ನು ರಚಿಸಿ ಶೀಘ್ರದಲ್ಲೇ ಹುಬ್ಬಳ್ಳಿಗೆ ಭೇಟಿ ನೀಡಲು ತೀರ್ಮಾನ ಕೈಗೊಳ್ಳಲಾಯಿತು.


ಹಿರಿಯರ ಸಲಹೆಯಂತೆ ಅಗತ್ಯವಿದ್ದಲ್ಲಿ ಮತ್ತೊಮ್ಮೆ ದೆಹಲಿಗೆ ನಿಯೋಗ ಕೊಂಡೊಯ್ಯುವ ವಿಚಾರವೂ ಚರ್ಚಿಸಲಾಯಿತು. ಜೊತೆಗೆ, ರೈಲು ಹೋರಾಟದ ಪ್ರಗತಿಯನ್ನು ಪರಿಶೀಲಿಸಲು ಪ್ರತಿಮಾಸವೂ ಸಭೆ ನಡೆಸುವಂತೆ ನಿರ್ಧಾರ ಕೈಗೊಳ್ಳಲಾಯಿತು.

ರೈಲು ಹೋರಾಟದ ಕುರಿತು ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಭೆ ಒಪ್ಪಿಗೆ ನೀಡಿತು. ರೈಲು ಮಾರ್ಗ ಶೀಘ್ರ ಆರಂಭವಾಗಬೇಕೆಂಬ ಒತ್ತಡವನ್ನು ಹೆಚ್ಚಿಸಲು ಸಂಘಟಿತ ಹೋರಾಟ ಮುಂದುವರಿಸುವ ಸಂಕಲ್ಪವನ್ನು ಸಭೆ ವ್ಯಕ್ತಪಡಿಸಿತು.

ಸಭೆಯಲ್ಲಿ ವಿರೇಶ ಚಿಂಚೋಳಿ, ಸಂಗಣ್ಣ ವೈಲಿ, ಬಸವರಾಜ ಸಜ್ಜನ, ರಾಜಕುಮಾರ ಸರ್, ನಾಗರಾಜ ಸುಗೂರು, ಬಸವರಾಜ ಬೂದಿಹಾಳ, ಬಾಳೆಸಾಬ ದೇಸಮುಖ ಭೀಮಶೇನರಾವ್ ಕುಲಕರ್ಣಿ ಬಸವರಾಜ ಮರೊಳ, ಮಲ್ಲಿಕಾರ್ಜುನ ಕುತ್ತೇದಾರ, ರವಿ ಬಂಟನೂರು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆ : ಮರಿಯಪ್ಪ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ



ವಿಶ್ವ ಜಲ ದಿನವು ಮಾರ್ಚ್ 22 ರಂದು ನಡೆಯುವ ವಾರ್ಷಿಕ ವಿಶ್ವಸಂಸ್ಥೆಯ ಆಚರಣೆಯ ದಿನವಾಗಿದ್ದು, ಇದು ಸಿಹಿ ನೀರಿನ ಮಹತ್ವವನ್ನು ಎತ್ತಿ ತೋರಿಸುತ್ತದೆ. ಸಿಹಿನೀರಿನ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆಗಾಗಿ ಪ್ರತಿಪಾದಿಸಲು ಈ ದಿನವನ್ನು ಬಳಸಲಾಗುತ್ತದೆ. ಜಲ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆಗಾಗಿ ಜಾಗೃತಿ ಮೂಡಿಸಲು ವಿಶ್ವಸಂಸ್ಥೆಯು (ಗಓ) 1993 ರಿಂದ ಈ ದಿನವನ್ನು ಆಚರಿಸುತ್ತಿದೆ.

ನೀರಿನ ಉಳಿತಾಯ, ಸಂರಕ್ಷಣೆ ಮತ್ತು ಮುಂದಿನ ಪೀಳಿಗೆಗೆ ನೀರನ್ನು ಉಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಇದು ನೀರಿನ ಕೊರತೆ, ಮಾಲಿನ್ಯ ಮತ್ತು 2030 ರ ವೇಳೆಗೆ ಎಲ್ಲರಿಗೂ ಶುದ್ಧ ನೀರು ಮತ್ತು ನೈರ್ಮಲ್ಯವನ್ನು ಒದಗಿಸುವ (ಖಆಉ 6) ಗುರಿಯ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಜಲ ಸಂರಕ್ಷಣೆಗೆ ಕರೆ ನೀಡುತ್ತದೆ.

2026ರ ಥೀಮ್:

2026 ರ ವಿಶ್ವ ಜಲ ದಿನವು "ನೀರು ಮತ್ತು ಲಿಂಗ" (ಘಚಿಣಜಡಿ ಚಿಟಿಜ ಉಜಟಿಜಜಡಿ) ವಿಷಯದ ಮೇಲೆ ಕೇಂದ್ರೀಕರಿಸಿದೆ, ಇದು ನೀರು ಎಲ್ಲರಿಗೂ ಸುಲಭವಾಗಿ ಲಭ್ಯವಾಗುವಂತೆ ಮಾಡುವುದರ ಜೊತೆಗೆ ಲಿಂಗ ಸಮಾನತೆಯನ್ನು ಉತ್ತೇಜಿಸುತ್ತದೆ.

ವಿಶ್ವ ಜಲ ದಿನದ ಪ್ರಮುಖಾಂಶಗಳು:-

ಉದ್ದೇಶ:-* ಜಲ ಸಂರಕ್ಷಣೆ, ಶುದ್ಧ ನೀರಿನ ಮಹತ್ವ, ಮತ್ತು ಜಲ ಬಿಕ್ಕಟ್ಟಿನ ಬಗ್ಗೆ ಜಾಗೃತಿ.

ಹಿನ್ನೆಲೆ:-*1992 ರಲ್ಲಿ ರಿಯೋ ಡಿ ಜನ್ಯೆರೊದಲ್ಲಿ ನಡೆದ ವಿಶ್ವಸಂಸ್ಥೆಯ ಸಮ್ಮೇಳನದಲ್ಲಿ ನಿರ್ಧಾರವಾಗಿ, 1993 ರಿಂದ ಆಚರಣೆ ಆರಂಭವಾಯಿತು.

ಧ್ಯೇಯೋದ್ದೇಶ: ಸುಸ್ಥಿರ ಅಭಿವೃದ್ಧಿ ಗುರಿ 6 (ಖಆಉ 6) ಅಡಿಯಲ್ಲಿ, 2030 ರ ವೇಳೆಗೆ ಎಲ್ಲರಿಗೂ ಸುರಕ್ಷಿತ ಮತ್ತು ಶುದ್ಧ ನೀರು ಲಭ್ಯವಾಗುವಂತೆ ಮಾಡುವುದು.

ಆಚರಣೆ:-*.ಈ ದಿನದಂದು ಜಲ ಸಂಪನ್ಮೂಲಗಳ ರಕ್ಷಣೆ, ಮಳೆನೀರು ಕೊಯ್ಲು ಮತ್ತು ನೀರಿನ ಮಿತವ್ಯಯದ ಬಗ್ಗೆ ಕಾರ್ಯಾಗಾರಗಳು ಹಾಗೂ ಅಭಿಯಾನಗಳನ್ನು ನಡೆಸಲಾಗುತ್ತದೆ.

ಜಲ ಸಂರಕ್ಷಣೆಯ ಅವಶ್ಯಕತೆ:-

ಭೂಮಿಯ ಮೇಲಿರುವ ಸಕಲ ಜೀವರಾಶಿಗಳಿಗೆ ನೀರು ಅತ್ಯಗತ್ಯ. ಆದರೆ, ಹೆಚ್ಚುತ್ತಿರುವ ನೀರಿನ ಬಳಕೆ, ಮಲಿನತೆ ಮತ್ತು ಕಾಡಿನ ನಾಶದಿಂದ ಜಲಮೂಲಗಳು ಬತ್ತಿ ಹೋಗುತ್ತಿವೆ. ಮುಂದಿನ ಪೀಳಿಗೆಗೆ ನೀರನ್ನು ಉಳಿಸಲು ಮತ್ತು ಜಲ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಜಲ ಸಂರಕ್ಷಣೆ ಅತ್ಯಗತ್ಯ.

ವಿಶ್ವ ಜಲ ದಿನದ ಪ್ರಮುಖ ಮಹತ್ವಗಳು:-

ಜಾಗೃತಿ ಮೂಡಿಸುವುದು:-ನೀರು ಸೀಮಿತ ಸಂಪನ್ಮೂಲವಾಗಿದೆ ಎಂಬುದನ್ನು ಅರಿವು ಮೂಡಿಸುವುದು ಮತ್ತು ಜಲ ಸಂರಕ್ಷಣೆಯ ಮಹತ್ವವನ್ನು ಸಾರುವುದು.

ಸುಸ್ಥಿರ ನಿರ್ವಹಣೆ:-* ನೀರಿನ ಸಮರ್ಥ, ಸಮಾನ ಮತ್ತು ಸುಸ್ಥಿರ ನಿರ್ವಹಣೆಯನ್ನು ಉತ್ತೇಜಿಸುವುದು.

ಜಾಗತಿಕ ಬಿಕ್ಕಟ್ಟಿನ ಪರಿಹಾರ:-* ಅಂತರ್ಜಲದ ಕುಸಿತ, ಮಾಲಿನ್ಯ ಮತ್ತು ನೀರಿನ ಲಭ್ಯತೆಯ ಕೊರತೆಯಂತಹ ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ಜಾಗತಿಕವಾಗಿ ಒಂದಾಗುವುದು.

ಪೀಳಿಗೆಯ ರಕ್ಷಣೆ:-*ಭವಿಷ್ಯದ ಪೀಳಿಗೆಗೆ ನೀರಿನ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ನೀರನ್ನು ಉಳಿಸುವುದು.

ವ್ಯರ್ಥ ತಡೆಗಟ್ಟುವಿಕೆ:- ನಲ್ಲಿಗಳ ಸೋರಿಕೆ ತಡೆಗಟ್ಟುವಿಕೆ, ಮಳೆನೀರು ಕೊಯ್ಲು ಮತ್ತು ನೀರಿನ ಮರುಬಳಕೆಯಂತಹ ಸರಳ ಕ್ರಮಗಳನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸುವುದು.

ವಿಶ್ವಸಂಸ್ಥೆಯು ಗಓಇಖಅಔ ಮತ್ತು ಇತರ ಪಾಲುದಾರರೊಂದಿಗೆ ಪ್ರತಿ ವರ್ಷದ ವಿಶೇಷ ಥೀಮ್‌ಗಳ (ಉದಾಹರಣೆಗೆ 2022 ರಲ್ಲಿ ಅಂತರ್ಜಲ) ಮೂಲಕ ಜಲ ಸಂರಕ್ಷಣೆಯ ಜವಾಬ್ದಾರಿಯನ್ನು ನೆನಪಿಸುತ್ತದೆ.

# ರಂಜಾನ್ ಶಾಂತಿ, ಸೌಹಾರ್ದತೆಯ ಹಬ್ಬ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ರಂಜಾನ್ ಅತ್ಯಂತ ಪವಿತ್ರ ಮಾಸವಾಗಿದ್ದು,ಅದು ಶಾಂತಿ ಸೌಹಾರ್ದತೆಯ ಸಂಕೇತವಾಗಿದೆ ಎಂದು ಅರಣ್ಯ,ಜೀವಿಶಾಸ್ತರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಪ್ರತಿಪಾದಿಸಿದರು.

ಪಟ್ಟಣದ ಕೆಡಿಪಿ ಸದಸ್ಯ ಮೋಯಿಝು ಅವರ ನಿವಾಸದಲ್ಲಿ ರಂಜಾನ್ ಹಬ್ಬದ ನಿಮಿತ್ಯ ಏರ್ಪಡಿಸಿದ ಔತಣ ಕೂಟದಲ್ಲಿ ಭಾಗವಹಿಸಿ ಮಾತನಾಡಿದರು.

ಮುಸ್ಲಿಂ ಬಾಂಧವರು ರಂಜಾನ್ ಹಬ್ಬವನ್ನು ಅತ್ಯಂತ ಸಡಗರ,ಸಂಭ್ರಮದಿಂದ ಆಚರಿಸುತ್ತಾರೆ. ಅಂದು ಅವರು ಇದ್ಗಾ ಮೈದಾನದಲ್ಲಿ ಹೊಸ ಬಟ್ಟೆಗಳನ್ನು ಧರಿಸಿ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ,ನಂತರ ತಮ್ಮ ಮನೆಯಲ್ಲಿ ಸಿದ್ಧಪಡಿಸಿದ ಸಿಹಿ ಪದಾರ್ಥಗಳ ಭೋಜನ ಸವೆಯಲು ಅನ್ಯಧರ್ಮಿಯರನ್ನು ಅನೋನ್ಯಭಾವನೆಯಿಂದ ಆಮಂತ್ರಿಸಿ ಸಹೋದರತೆ ಭಾವನೆಯಿಂದ ದೈಹಿಕ ಅಲಂಗನ ಮಾಡಿ ಪರಸ್ಪರ ಶುಭ ಕೋರುತ್ತಾರೆ.ಅದರಿಂದ ಪ್ರೀತಿ,ಶಾಂತಿ ನೆಲೆಸಲು ಸಾಧ್ಯವಾಗುತ್ತದೆ.ನಾವೆಲ್ಲರೂ ಭಾರತೀಯರು ಎನ್ನುವ ಭಾವನೆ ಎಲ್ಲರಲ್ಲಿ ಮೂಡಿ ಬರಬೇಕು ಎಂದು ಕಿವಿ ಮಾತು ಹೇಳಿದರು.ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ವಂಕೆ,ಕೆಡಿಪಿ ಸದಸ್ಯ ಮೋಯಿಝು,ಪ್ರಮುಖರಾದ ಪ್ರವೀಣ ಪಾಟಿಲ್,ಅಂಬಾದಾಸ ಕೋರೆ,ಮೈನೋದಿನ್,ನಸೀರೋದಿನ್,ವಹಿದಭಾಯಿ ಚೌಧರಿ,ಸತೀಷ ಸ್ವಾಮಿಜಿ,ಪ್ರಶಾಂತ ಕೋಟಗೆರಾ,ಅಲಿಖಾ,ಅಬ್ದುಲ ಸತ್ತಾರ್,ಎಮ್‌ಡಿ ಅಬು,ಡಾ.ಸಂತೋಷ ಕಾಳೆ,ಮಲ್ಲಿಕಾರ್ಜುನ ಹಲ್ಮಂಡಗಿ,ಅಹಮದ್ ಭಾಯಿಜಾನ್,ನಸಿರ ಅಬ್ದುಲ್,ಜೈರಾಜ ಪಾತ್ರೆ,ಶಿವಶರಣಯ್ಯ ಸ್ವಾಮಿ,ಅಶೋಕ ವಂಕೆ,ಸಂಜೀವ ವಂಕೆ,ಓಂಕಾರ ಉಪ್ಪೆ,ಎಮ್‌ಡಿ ಮಝರ್,ಸೋಹೆಬ್,ಸುಧಾಕರ್ ಜಾಧವ,ಶಿವರಾಜಪ್ಪ ಬಾಜೋಳಗಾ,ಅಂಬಾದಾಸ ಕಪ್ಲಾಪುರ,ಪ್ರದೀಪ ಮುದಾಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

> “ವಿವಿಧತೆಯಲ್ಲಿ ಏಕತೆ ಪ್ರತಿಬಿಂಬಿಸುವುದೆ ರಂಜಾನ್ ಆಚರಣೆ.ಪ್ರತಿಯೊಬ್ಬರೂ ಜೀವನದಲ್ಲಿ ದುಡಿದು ತಿನ್ನುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು.ಜೀವನದಲ್ಲಿ ಆದ ಕಹಿ ಘಟನೆಗಳು ಮರೆತು ಸ್ನೇಹದಿಂದ ಬಾಳಬೇಕು.ಸರ್ಕಾರ ಸರ್ವ ಸಮುದಾಯದ ಏಳಿಗೆಗಾಗಿ ಹಲವಾರು ಯೋಜನೆಗಳು ಜಾರಿಗೆ ತಂದಿದೆ.ಅವುಗಳ ಸದ್ಬಳಕೆ ಮಾಡಿಕೊಂಡು ತಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಳ್ಳಬೇಕು
>
> ಈಶ್ವರ ಖಂಡ್ರೆ ಜಿಲ್ಲಾ ಉಸ್ತುವಾರಿ ಸಚಿವರು ಬೀದರ.

# ಮಾನವೀಯತೆಯೇ ಧರ್ಮದ ಮೂಲ



**ಕೋಟ:** ಸ್ಥಳೀಯ ಜಾಮಿಯಾ ಮಸ್ಜಿದ್ ಕೋಟ ಇದರ ವತಿಯಿಂದ "ರಮದಾನ್ ಈದ್ ಸಂದೇಶ 2026 ಮತ್ತು ಅರ್ಹರಿಗೆ ಸಹಾಯಧನ ವಿತರಣೆ" ಕಾರ್ಯಕ್ರಮವು ದಿನಾಂಕ 20/03/2026 ರಂದು ಕೋಟ ಜಾಮಿಯಾ ಮಸ್ಜಿದ್ ಆವರಣದಲ್ಲಿ ಮೌಲಾನ ಸಮೀಉರ್ರಾಹಮನ್ ಅವರ ಖಿರಾತ್ ನೊಂದಿಗೆ ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮಕ್ಕೆ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಹೂಡೆ ಐಡಿಯಲ್ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಇದ್ರಿಸ್ ಹೂಡೆರವರು ಈದ್ ಸಂದೇಶ ನೀಡಿ "ರಂಜಾನ್ ಕೇವಲ ಉಪವಾಸದ ತಿಂಗಳಲ್ಲ, ಅದು ಪವಿತ್ರ ಕುರಾನ್ ಅವತೀರ್ಣಗೊಂಡ ಮಾಸ. ಕುರಾನ್ ಮನುಕುಲಕ್ಕೆ ಮಾರ್ಗದರ್ಶಕವಾಗಿದ್ದು, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಲು ಪ್ರೇರೇಪಿಸುತ್ತದೆ. ನಾವು ಮಾಡುವ ಆರಾಧನೆಗಳು ಕೇವಲ ದೈಹಿಕವಾಗಿರದೆ, ಆಧ್ಯಾತ್ಮಿಕ ಉನ್ನತಿಗೆ ಮತ್ತು ಸಮಾಜದ ಕಷ್ಟಗಳಿಗೆ ಸ್ಪಂದಿಸುವಂತಿರಬೇಕು," ಎಂದು ಅವರು ತಿಳಿಸಿದರು.

ಮುಂದುವರಿದು ಮಾತನಾಡಿದ ಅವರು, "ಜಕಾತ್ ಎಂಬುದು ದಾನವಲ್ಲ, ಅದು ಶ್ರೀಮಂತರ ಸಂಪತ್ತಿನಲ್ಲಿ ಬಡವರಿಗಿರುವ ಹಕ್ಕು. ಪ್ರತಿಯೊಬ್ಬ ಮುಸ್ಲಿಮನು ತನ್ನ ಸಂಪತ್ತಿನ ಒಂದು ಪಾಲನ್ನು ಕಡ್ಡಾಯವಾಗಿ ಅರ್ಹರಿಗೆ ನೀಡುವ ಮೂಲಕ ಸಾಮಾಜಿಕ ಸಮಾನತೆಯನ್ನು ಕಾಪಾಡಬೇಕು. ಹಬ್ಬದ ಸಂತೋಷವು ನಮ್ಮ ನೆರೆಹೊರೆಯವರ ಹಸಿವು ನೀಗಿಸಿದಾಗ ಮಾತ್ರ ಸಾರ್ಥಕವಾಗುತ್ತದೆ," ಎಂದರು.

ಜಾಮಿಯಾ ಮಸ್ಜಿದ್ ಕೋಟ ಇದರ ವತಿಯಿಂದ ಹಮ್ಮಿಕೊಳ್ಳಲಾಗುವ ರಂಜಾನ್ ಸಹಾಯಧನ ವಿತರಣಾ ಕಾರ್ಯಕ್ರಮವು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗದೆ, ಸರ್ವ ಧರ್ಮದ ಅಶಕ್ತರನ್ನು ಗುರುತಿಸಿ ನೆರವಾಗುತ್ತಿರುವುದು ಭಾವೈಕ್ಯತೆಗೆ ಸಾಕ್ಷಿಯಾಗಿದೆ," ಎಂದು ಕೋಟತಟ್ಟು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ಕುಂದರ್ ಬಾರಿಕೆರೆ ಅವರು ಅಭಿಪ್ರಾಯಪಟ್ಟರು.

"ರಂಜಾನ್ ಆಚರಣೆಯು ದೇಹ ಮತ್ತು ಮನಸ್ಸನ್ನು ಒಗ್ಗೂಡಿಸುವ ಒಂದು ಪವಿತ್ರ ಪ್ರಕ್ರಿಯೆ. ದೇಹಕ್ಕೆ ದಂಡನೆ ಹಾಗೂ ಮನಸ್ಸಿಗೆ ಪ್ರಾರ್ಥನೆ ನೀಡುವ ಮೂಲಕ ಜಡತ್ವವನ್ನು ಹೋಗಲಾಡಿಸಿ, ಸಮಾಜದಲ್ಲಿ ದಾನ-ಧರ್ಮದಂತಹ ಸತ್ಕರ್ಮಗಳನ್ನು ಮಾಡಲು ಈ ಮಾಸ ಪ್ರೇರಣೆ ನೀಡುತ್ತದೆ. ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗುವ ಇಂತಹ ಕಾರ್ಯಕ್ರಮಗಳು ಪ್ರಜಾಪ್ರಭುತ್ವದ ವ್ಯವಸ್ಥೆಗೆ ಪೂರಕವಾಗಿವೆ," ಎಂದು ಕೋಟತಟ್ಟು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆರ್. ರವೀಂದ್ರ ರಾವ್ ಶ್ಲಾಘಿಸಿದರು.

ಕೋಟ ಪಂಚಾಯತ್ ಮಾಜಿ ಅಧ್ಯಕ್ಷೆ ಜ್ಯೋತಿ ಭರತ್ ಕುಮಾರ್ ಶೆಟ್ಟಿ ಮಾತನಾಡಿ, "ಉಪವಾಸವು ದೇವರ ಸಾನಿಧ್ಯವನ್ನು ಗಳಿಸುವ ಅತ್ಯುತ್ತಮ ಮಾರ್ಗ. ಈ ಮಸೀದಿಯೊಂದಿಗೆ ನಮಗೆ ದಶಕಗಳ ಹಳೆಯ ಸಂಬಂಧವಿದ್ದು, ಇಲ್ಲಿನ ಸೌಹಾರ್ದಯುತ ಬಾಂಧವ್ಯವು ಸದಾ ಮಾದರಿಯಾಗಿದೆ," ಎಂದರು.

# ಫ್ರೀಡಂ ಕುಂದಾಪುರ ಸಂಘಟನೆಯಿಂದ ಸೇವಾ ಕಾರ್ಯ





**ಕುಂದಾಪುರ:** ಸಾಮಾಜಿಕ ಹೋರಾಟಗಾರ, ದಿವಂಗತ ಜೆ.ಪಿ. ಮೊಹಮ್ಮದ್ ಗುಲ್ವಾಡಿ ಅವರ ಸವಿ ನೆನಪಿಗಾಗಿ 'ಫ್ರೀಡಂ ಕುಂದಾಪುರ' ಸಂಘಟನೆಯ ವತಿಯಿಂದ ಕುಂದಾಪುರ ತಾಲೂಕು ಆಸ್ಪತ್ರೆಯ ರೋಗಿಗಳಿಗೆ ಹಾಗೂ ಅನಾಥಾಶ್ರಮದ ನಿವಾಸಿಗಳಿಗೆ ಹಣ್ಣು-ಹಂಪಲು ಮತ್ತು ಅನ್ನದಾನ ಸೇವೆ ಭಾನುವಾರ (ಮಾ. 22) ನಡೆಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಉಡುಪಿ ಮುಸ್ಲಿಂ ಒಕ್ಕೂಟದ ಮಾಜಿ ಅಧ್ಯಕ್ಷ ಕೋಟ ಇಬ್ರಾಹಿಂ ಸಾಹೇಬ್, "ಪವಿತ್ರ ರಂಜಾನ್ ಮಾಸದ ಸಂದರ್ಭದಲ್ಲಿ ಬಡವರಿಗೆ ಮತ್ತು ರೋಗಿಗಳಿಗೆ ನೆರವಾಗುವುದು ಶ್ರೇಷ್ಠ ಪುಣ್ಯದ ಕೆಲಸ. ಜೆ.ಪಿ. ಮೊಹಮ್ಮದ್ ಅವರ ಸ್ಮರಣಾರ್ಥ ಫ್ರೀಡಂ ಕುಂದಾಪುರ ತಂಡವು ಹಮ್ಮಿಕೊಂಡಿರುವ ಈ ಸೇವಾ ಕಾರ್ಯವು ಶ್ಲಾಘನೀಯ. ಇಂತಹ ದಾನ ಧರ್ಮಗಳು ಸಮಾಜಕ್ಕೆ ಮಾದರಿಯಾಗಿವೆ," ಎಂದು ಹಾರೈಸಿದರು.

ಕೆಸಿಎಫ್ ಕರ್ನಾಟಕ ಕಲ್ಚರಲ್ ಫೋರಂ ಮಸ್ಕತ್ ಇದರ ಅಧ್ಯಕ್ಷರಾದ ಅಯೂಬ್ ಭಾಯಿ ಮಾತನಾಡಿ, "ಸಮಾಜದಲ್ಲಿ ಅವಶ್ಯಕತೆ ಇರುವವರನ್ನು ಗುರುತಿಸಿ ನೆರವಾಗುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ನಾರ್ತ್ ಕರ್ನಾಟಕದ ಶಿಕ್ಷಣ ಕ್ಷೇತ್ರ ಸೇರಿದಂತೆ ಅನೇಕ ಕಡೆಗಳಲ್ಲಿ ನಾವು ಸೇವಾ ಕಾರ್ಯಗಳನ್ನು ನಡೆಸುತ್ತಿದ್ದೇವೆ. ಫ್ರೀಡಂ ಕುಂದಾಪುರ ತಂಡವು ಇಂತಹ ಇನ್ನಷ್ಟು ಸಾಮಾಜಿಕ ಒಳಿತಿನ ಕೆಲಸಗಳನ್ನು ಮುಂದುವರಿಸಲಿ," ಎಂದರು.

ಸಂಘಟನೆಯ ಸಂಕಲ್ಪದ ಅಧ್ಯಕ್ಷತೆ ವಹಿಸಿದ್ದ ಫ್ರೀಡಂ ಕುಂದಾಪುರ ಸಂಘಟನೆಯ ಅಧ್ಯಕ್ಷ ದಸ್ತಗಿರಿ ಸಾಹೇಬ್ ಕಂಡ್ಲೂರು, "ನಮ್ಮ ಹಿರಿಯರಾದ ಜೆ.ಪಿ. ಮೊಹಮ್ಮದ್ ಅವರ ಮಾರ್ಗದರ್ಶನದಲ್ಲಿ ಈ ಸಂಘಟನೆಯನ್ನು ಕಟ್ಟಿ ಬೆಳೆಸಿದ್ದೇವೆ. ಅವರ ಸ್ಮರಣಾರ್ಥ ಇವತ್ತು ರೋಗಿಗಳಿಗೆ ಹಾಗೂ ಅಶಕ್ತರಿಗೆ ಕಿಟ್ ವಿತರಿಸುವ ಮೂಲಕ ಅವರ ಸಾಮಾಜಿಕ ಕಾಳಜಿಯನ್ನು ಮುಂದುವರಿಸುತ್ತಿದ್ದೇವೆ," ಎಂದು ತಿಳಿಸಿದರು. ಕುಂದಾಪುರ ಸರ್ಕಾರಿ ಆಸ್ಪತ್ರೆಯ 32 ರೋಗಿಗಳಿಗೆ ಹಣ್ಣು-ಹಂಪಲು ವಿತರಿಸಲಾಯಿತು. ಚೈತನ್ಯ ವೃದ್ಧಾಶ್ರಮದ 35 ನಿವಾಸಿಗಳಿಗೆ ಮಧ್ಯಾಹ್ನದ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಸಂಘಟನೆಯ ಗೌರವಾಧ್ಯಕ್ಷ ರಫೀಕ್ ಸಾಹೇಬ್, ಶಾಬಾನ್ ಹಂಗಳೂರು, ಜಮಾಲ್ ಜಾಹಿರ್ ಹಾಗೂ ಇತರ ಸದಸ್ಯರು ಉಪಸ್ಥಿತರಿದ್ದರು. ಸಂಘಟನೆಯ ಕಾರ್ಯದರ್ಶಿ ಹನೀಫ್ ಗುಲ್ವಾಡಿ ಸ್ವಾಗತಿಸಿ, ಮುನಾಫ್ ಕೊಡಿ ವಂದಿಸಿದರು.

# ಮಕ್ಕಳನ್ನು ಸರಕಾರಿ ಶಾಲೆಗೆ ಸೇರಿಸಿ: ಮಾಲಿ ಪಾಟೀಲ್

• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ಸರ್ಕಾರಿ ಶಾಲೆಗಳಲ್ಲಿ ನುರಿತ ಹಾಗೂ ತರಬೇತಿ ಪಡೆದು ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಶಿಕ್ಷಕರಿದ್ದಾರೆ. ಪೋಷಕರು ಖಾಸಗಿ ಶಾಲೆಗಳ ವ್ಯಾಮೋಹಕ್ಕೆ ಒಳಗಾಗದೆ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲು ಮಾಡುವಂತೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರವೀಂದ್ರರೆಡ್ಡಿ ಮಾಲಿ ಪಾಟೀಲ್ ಮನವಿ ಮಾಡಿದರು.

ಪಟ್ಟಣದ ಫಾತಿಮಾಪುರ ಸರ್ಕಾರಿ ಶಾಲೆಯ ದ್ವಿತೀಯ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾಮಾನ್ಯವಾಗಿ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಗಳನ್ನು ಖಾಸಗಿ ಶಾಲೆಗಳು ಅದ್ದೂರಿಯಾಗಿ ಆಚರಣೆ ಮಾಡುತ್ತವೆ. ಫಾತಿಮಾಪುರ ಸರ್ಕಾರಿ ಶಾಲೆ ಮುಖ್ಯ ಶಿಕ್ಷಕಿ ಹಾಗೂ ಸಿಬ್ಬಂದಿ ವರ್ಗದವರು, ಮಕ್ಕಳ ಪೋಷಕರು ಹಾಗೂ ಗ್ರಾಮಸ್ಥರ ಸಹಕಾರ ಪಡೆದು ಅದ್ದೂರಿಯಾಗಿ ಶಾಲಾ ವಾರ್ಷಿಕೋತ್ಸವ ಆಚರಣೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಜೂನ್ ತಿಂಗಳಲ್ಲಿ 7ನೇ ತರಗತಿ ಪ್ರಾರಂಭಿಸಲು ಅನುಮತಿ ಒದಗಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲುಕಾಧ್ಯಕ್ಷ ರಾಜಪ್ಪ ಜಮಾದರ್ ಮಾತನಾಡಿ, ಈ ಸರ್ಕಾರಿ ಶಾಲೆಯ ವಾರ್ಷಿಕೋತ್ಸವ ಉದ್ಘಾಟಿಸಲು ಕ್ಷೇತ್ರ ಶಿಕ್ಷಣಾಧಿಕಾರಿಯವರು ಬರಬೇಕಿತ್ತು, ಆದರೆ,





ಅವರಿಗೆ ಸರ್ಕಾರಿ ಶಾಲೆಗಳಕ್ಕಿಂತಲು ಖಾಸಗಿ ಶಾಲೆಗಳ ಮೇಲೆ ಬಹಳಷ್ಟು ಪ್ರೀತಿಯಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಾಲೆಯ ಮುಖ್ಯ ಶಿಕ್ಷಕಿ ಪ್ರೇಮಿಳಾರೆಡ್ಡಿ ಅವರ ಮಾತು ಕಡಿಮೆ ಕೆಲಸ ಹೆಚ್ಚು, ಆ ಮಾದರಿಯಲ್ಲಿ ಇವತ್ತಿನ ಸರ್ಕಾರಿ ಶಾಲೆಯ ವಾರ್ಷಿಕೋತ್ಸವವೇ ಸಾಕ್ಷಿಯಾಗಿದೆ ಎಂದರು. ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡಬೇಕು ಎಂದು ಹೇಳಿದರು.

ಶಾಲೆಯ ಮುಖ್ಯ ಶಿಕ್ಷಕಿ ಪ್ರೇಮಿಳಾ ರೆಡ್ಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಕಾರ್ಯಕ್ರಮ ಯಶಸ್ವಿಗೊಳಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳು ತಿಳಿಸುತ್ತನೆ. ಇದೇ ರೀತಿ ತಮ್ಮೆಲ್ಲರ ಸಹಕಾರ ಮುಂದೆಯೂ ಇರಲಿ ಎಂದು ಹೇಳಿದರು.

ಸಾವಿತ್ರಿಬಾಯಿ ಫುಲೇ ಸಂಘದ ಜಿಲ್ಲಾಧ್ಯಕ್ಷೆ ಸಾರಿಕಾ ಗಂಗಾ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲುಕಾಧ್ಯಕ್ಷ ಅನೀಲಕುಮಾರ ಸಿಂಧೆ ಮಾತನಾಡಿದರು. ಈ ಸಂದರ್ಭದಲ್ಲಿ ಸಾವಿತ್ರಿಬಾಯಿ ಫುಲೇ ಜಿಲ್ಲಾ ಕೋಶಾಧ್ಯಕ್ಷೆ ಶರಣಮ್ಮ ನಾರಾಯಣಪೇಟಕರ್, ರಾಜಶೇಖರ ಉಪ್ಪಿನ, ಅಶೋಕಕುಮಾರ ಮಹೇಂದ್ರಕರ್, ಪಂಡಿತ ಕಲ್ಯಾಣಿ, ಮಹೇಶ್ ಮೋಜೆಸ್, ಪ್ರಭು ಕಾಂಚನಾಳ, ದಿಲೀಪ ನರನಾಳ, ಅಂಬಾಜಿ ಪವಾರ, ಸುಭಾಷ ಜಮಾದರ್, ಗೌರಮ್ಮ ನರನಾಳ, ಶಶಿಕಲಾ ರಾಂಪುರ, ಜಗದೇವಿ ಸಿಂಧನಕೇರಾ, ನರಸಪ್ಪ ನರನಾಳ, ವೆಂಕಟ ಪೂಜಾರಿ, ದಿಲೀಪ ಪಂಚಾಳ, ನರೇಂದ್ರರೆಡ್ಡಿ ರಾಂಪುರ, ಬಸವರಾಜ ಮುದನ್ನಾಳ, ಆಕಾಶ ಭೋವಿ ಸಿಬ್ಬಂದಿಗಳಾದ ಶೇಖರ್, ಶಶಿಕಲಾ ನಂದಗಾಂವ, ರುಕ್ಮಿಣಿ ಹುಡಗಿಕ್ಕರ್, ಸುವರ್ಣ ನರನಾಳ ಹಾಗೂ ಎಸ್ಡಿಎಂಸಿ ಸದಸ್ಯರು ಸೇರಿದಂತೆ ವಿವಿಧ ಶಾಲೆಗಳ ಶಿಕ್ಷಕರು, ಗ್ರಾಮಸ್ಥರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಿಕ್ಷಕಿ ಅನ್ನಪೂರ್ಣ ನಿರೂಪಿಸಿದರು. ಲಲಿತಬಾಯಿ ಸ್ವಾಗತಿಸಿದರು. ನಾಗೇಶ್ವರಿ ವಂದಿಸಿದರು.

# ಅಧಿಕಾರಿಗಳೇ ಎಲ್ಲಿದ್ದೀರಿ ಸ್ವಾಮಿ

• **ವಿಶೇಷ ವರದಿ: ಚನ್ನಕೇಶವ ಕಂಪ್ಲಿ**

ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲೂಕಿಗೆ ಸಂಬಂಧಿಸಿದ ಕಂಪ್ಲಿ ಪಟ್ಟಣದ 10ನೇ ವಾರ್ಡಿಗೆ ಸಂಬಂಧಪಟ್ಟಿರುವ ಸಂತೆ ಕಾಯಿಪಲ್ಲೆ ಮಾರ್ಕೆಟ್ ಆರು ತಿಂಗಳ ಹಿಂದೆಯೇ ಅಷ್ಟೇ ನಿರ್ಮಿಸಿದ ಶೌಚಾಲಯ, ಕಿಡಿಗೇಡಿಗಳಿಂದ ಶೌಚಾಲಯ ಧ್ವಂಸಗೊಂಡಿದ್ದು ಶೌಚಾಲಯದ ದುರಸ್ತಿ ನೋಡಿಯೂ, ಕಣ್ಣುಮುಚ್ಚಿ ಕುಳಿತ ಅಧಿಕಾರಿಗಳು.!

ಶೌಚಾಲಯ ನಿರ್ಮಾಸಿ ಇನ್ನೂ ಒಂದು ವರ್ಷ ಕೂಡ ಕಳೆದಿಲ್ಲ ಆದರೆ ಕಿಡಿಗೇಡಿಗಳ ಅವಳಿ ಮತ್ತು ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಧ್ವಂಶಗೊಂಡಿರುತ್ತದೆ. ಇದಕ್ಕೆ ಮೂಲ ಕಾರಣ ಸಂಬಂಧಪಟ್ಟ ಅಧಿಕಾರಿಗಳೇ, ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾಯಿಪಲ್ಲೆ ಮಾರ್ಕೆಟ್ ನಲ್ಲಿ ಸಾರ್ವಜನಿಕಾರಿ ಮತ್ತು ವಾರ್ಡ್ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನಿರ್ಮಿಸಿದ ಶೌಚಾಲಯ ಸ್ಥಿತಿ ಇಂದು ನೋಡೋರಿಲ್ಲ.... ಕೇಳೋರಂತೂ, ಇಲ್ಲವೇ ಇಲ್ಲ.! ಅಧಿಕಾರಿಗಳಿಗೆ ದುಃಸ್ಥಿತಿ ಗಮನಕ್ಕೆ ಇದ್ದರೂ ಸಹ



ಯಾವುದೇ ಒಬ್ಬ ಅಧಿಕಾರಿಗಳು ಕೂಡ ಇಂತಹ ಕಣ್ಣೆತ್ತಿ ಸಹ ನೋಡುತ್ತಿಲ್ಲ. ಸರ್ಕಾರ ಅನುದಾನದಿಂದ ಕೇವಲ ಶೌಚಾಲಯದ ಕಟ್ಟಡ ನಿರ್ಮಿಸಿದ್ದು, ಕಂಪ್ಲಿ ಪಟ್ಟಣ ಮತ್ತು ಹಳ್ಳಿಗಳಲ್ಲಿ ಸಹ ಸಾಕಷ್ಟು ಇದೆ. ಆದರೆ ಇದಕ್ಕೆ ಮೂಲ ಕಾರಣ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸ್ಥಳೀಯ ಕಿಡಿಗೇಡಿಗಳೇ ದುಷ್ಕರ್ಮಿಗಳೇ ಮೂಲ ಕಾರಣ ಅಂತ ದುಷ್ಕರ್ಮಿಗಳಿಗೆ ತಕ್ಕ ಪಾಠ ಆಗಲೇಬೇಕು. ಸ್ವಚ್ಛತೆಯನ್ನು ಕಾಪಾಡೋಣ ಎಂದು ಪ್ರಮಾಣ ವಚನ ಸ್ವೀಕರಿಸಿದರೇ ಸಾಲದು ಸ್ವಾಮಿ... ಸ್ವಚ್ಛತೆ ಬಗ್ಗೆ ಪ್ರತಿದಿನ ಕಾಳಜಿ ವಹಿಸಬೇಕು, ಕಿಡಿಗೇಡಿಗಳಿಗೆ ತಕ್ಕ ಉತ್ತರ ಕೂಡಲೇ ನೀಡಿ, ಅವರ ವಿರುದ್ಧ ತಕ್ಕ ಕಾನೂನು ಕ್ರಮ ಜರುಗಿಸಬೇಕು.

# ಕತ್ನಳ್ಳಿಯ ಸ್ವಾಮೀಜಿಯಿಂದ ಕಾಲಜ್ಞಾನ

• **ಮಲ್ಲಮ್ಮ ನುಡಿ ವಾರ್ತೆ ವಿಜಯಪುರ**

ಅಕ್ರಾಳ, ವಿಕ್ರಾಳ, ಕರಾಳ ಈ ಬಾರಿಯೂ ಇದ್ದದ್ದೇ, ಯುದ್ಧ ಅಲ್ಲಿ ಅಷ್ಟೇ ಅಲ್ಲ ಇಲ್ಲಿಯೂ ಇದ್ದಂತೆಯೇ ಜಗತ್ತಿನ ಉದ್ಧಾರಕ್ಕಾಗಿ 'ಶು.ನ.ಕ. ಮೀಟಿಂಗ್ ನಡೆದಿದೆ ಎಂದು ಹೇಳುವ ಮೂಲಕ ಕತಕನಹಳ್ಳಿಯ ಶ್ರೀ ಶಿವಯ್ಯ ಮಹಾಸ್ವಾಮೀಜಿ ಕಾಲಜ್ಞಾನದ ಹೇಳಿಕೆ ನುಡಿದರು.

ಸುಕ್ಷೇತ್ರ ಕತಕನಹಳ್ಳಿಯಲ್ಲಿ ಶ್ರೀ ಗುರುಚಕ್ರವರ್ತಿ ಸದಾಶಿವ ಮುತ್ಯಾ ಅವರ ಜಾತ್ರಾ ಮಹೋತ್ಸವ ಪ್ರಯುಕ್ತ ಗುರು ಕರುಣೆಯ ಮೂಲಕ ಶ್ರೀ ಶಿವಯ್ಯ ಮಹಾಸ್ವಾಮೀಜಿ ಭವಿಷ್ಯದ ಕಾಲಜ್ಞಾನ ಹೇಳಿಕೆ ನೀಡುವುದು ಸಂಪ್ರದಾಯ.

ಈ ಸಂಪ್ರದಾಯ ಹಿನ್ನೆಲೆಯಲ್ಲಿ ಈ ಬಾರಿಯೂ ರವಿವಾರ ಕತಕನಹಳ್ಳಿಯ ಲಗಮವ್ವದೇವಿ ದೇವಾಲಯದ ಎದುರು ಶ್ರೀ ಶಿವಯ್ಯ ಸ್ವಾಮೀಜಿಗಳು ಗುರು ಕರುಣೆಯ ನುಡಿಗಳನ್ನಾಡಿದರು.

ಶು.ನ.ಕ. ಮೀಟಿಂಗ್ ನಡೆದಿದೆ ಎಂದು ತಾತ್ಪರ್ಯವುಳ್ಳ ಪದ ಹೇಳಿ ಅದನ್ನು ವಿಶ್ಲೇಷಿಸಿದ ಅವರು, ಶು



ಎಂದರೆ ಶುದ್ಧ, ನ ಎಂದರೆ ನಂಬಿಕೆ ಹಾಗೂ ಕ ಎಂದರೆ ಕರ್ತವ್ಯ, ಈ ಎಲ್ಲವೂ ಕೂಡಿದರೆ ಜಗತ್ತು ಉದ್ಧಾರ, ಹೀಗಾಗಿ ಜಗತ್ತು ಉಳಿಸಲು ಈ ತತ್ವಗಳು ಮೀಟಿಂಗ್ ಮಾಡುತ್ತಿವೆ ಎಂದರು. ಕಾವಿ, ಖಾದಿ, ಖಾಕಿ, ಮೂರು ಒಳಗೆ ಜಗಳ ಆಗ್ತದ ಎಂದು ಹಿಂದೆಯೂ ಹೇಳಿದೆ, ಕಾವಿ, ಖಾದಿ, ಖಾಕಿ, ಜೊತೆಗೆ ಕಪ್ಪು, ಹಸಿರು, ನೀಲಿ ಇನ್ನಷ್ಟೂ ಬಣ್ಣ ಕೂಡಿ ಮಿಕ್ಸರ್ ಆಗುತ್ತಿವೆ. ಗದ್ದಲವಾಗುತ್ತಿದೆ, ಹೀಗಾಗಿಯೇ ಇದನ್ನು ತಪ್ಪಿಸಲು ಶು.ನ.ಕ. ಮೀಟಿಂಗ್ ಮಾಡುತ್ತಿವೆ ಎಂದರು. ಆನೆ ಬೆಲೆ ಎತ್ತಿಗೆ, ಎತ್ತಿನ ಬೆಲೆ ಕುರಿಗೆ, ಕುರಿ ಬೆಲೆ ಕೋಳಿಗೆ, ಕೋಳಿ ಬೆಲೆ ಮನುಷ್ಯನಿಗೆ ಅಂದರೆ ಮನುಷ್ಯನಿಗೆ ಯಾವ ಕಿಮ್ಮತ್ತೂ ಉಳಿದಿಲ್ಲ ಎಂದರು.

# ಪೌರ ಕಾರ್ಮಿಕರ ಆರೋಗ್ಯ ರಕ್ಷಣೆ ನಮ್ಮೆಲ್ಲರ ಹೊಣೆ

• **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

ಹಗರಿಬೊಮ್ಮನಹಳ್ಳಿ ಪಟ್ಟಣ ಪುರಸಭೆ ಹಾಗೂ ಆರೋಗ್ಯ ಇಲಾಖೆ ವತಿಯಿಂದ ಪೌರಕಾರ್ಮಿಕರ ಆರೋಗ್ಯದ ಕುರಿತು ಜಾಗೃತಿ ಮೂಡಿಸುವ ವಿಶೇಷ ಕಾರ್ಯಕ್ರಮವನ್ನು ಇಂದು ಆಯೋಜಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಮಾತನಾಡಿದ ಆರೋಗ್ಯ ಅಧಿಕಾರ ಪ್ರವೀಣ್ ರವರು ಪೌರಕಾರ್ಮಿಕರಿಗೆ ಸ್ವಚ್ಛತೆ, ವೈಯಕ್ತಿಕ ಆರೋಗ್ಯ ಕಾಳಜಿ, ರೋಗ ನಿರೋಧಕ ಕ್ರಮಗಳು ಮತ್ತು ಸುರಕ್ಷತಾ ಉಪಕರಣಗಳ ಮಹತ್ವದ ಬಗ್ಗೆ ವಿವರವಾಗಿ ತಿಳಿಸಲಾಯಿತು. ಆರೋಗ್ಯ ಇಲಾಖೆ ಅಧಿಕಾರಿಗಳಾದ ಶ್ರೀಕಾಂತ್ ರವರು ಕಾರ್ಮಿಕರು ದಿನನಿತ್ಯ ಎದುರಿಸುವ ಆರೋಗ್ಯ ಸಮಸ್ಯೆಗಳು ಹಾಗೂ ಅವುಗಳನ್ನು ತಡೆಯುವ ವಿಧಾನಗಳ ಬಗ್ಗೆ ಪ್ರಾಯೋಗಿಕ ಮಾಹಿತಿ ನೀಡಿದರು.



ಪುರಸಭೆ ಮುಖ್ಯ ಅಧಿಕಾರಿಗಳಾದ ಮುಗಳಿಯವರು ಮಾತನಾಡಿ, ಪೌರಕಾರ್ಮಿಕರು ನಗರದ ಸ್ವಚ್ಛತೆಗಾಗಿ ಮಹತ್ವದ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಆರೋಗ್ಯ ಕಾಪಾಡುವುದು ನಮ್ಮ ಎಲ್ಲರ ಜವಾಬ್ದಾರಿ ಎಂದು ಹೇಳಿದರು. ಜೊತೆಗೆ, ಕೈಗವಸು, ಮಾಸ್ಕ್, ಶೂಗಳು ಸೇರಿದಂತೆ ಅಗತ್ಯ ಸುರಕ್ಷತಾ ಉಪಕರಣಗಳನ್ನು ಬಳಸುವಂತೆ ಸೂಚಿಸಿದರು. ಪುರಸಭೆ ಅಧ್ಯಕ್ಷರಾದ ಮರಿರಾಮಣ್ಣನವರು ಮಾತನಾಡಿ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿರುವವರ ಆರೋಗ್ಯ ಸುರಕ್ಷತೆ ನಮ್ಮಗಳ ಜವಾಬ್ದಾರಿಯಾಗಬೇಕು ಅದರಂತೆ ಪೌರಕಾರ್ಮಿಕರು ಸುರಕ್ಷಿತ ಕವಚಗಳನ್ನ ಬಳಸಿಕೊಂಡು ಸುರಕ್ಷಿತ ಮಾರ್ಗವಾಗಿ ಸ್ವಚ್ಛತೆಯನ್ನ ಮಾಡಬೇಕು ಆರೋಗ್ಯದ ಬಗ್ಗೆ ಹೆಚ್ಚಿನ ಗಮನವನ್ನು ವಹಿಸಬೇಕು ಮತ್ತು ಸರ್ಕಾರದಿಂದ ವಿಶೇಷವಾಗಿ ಅವರಿಗೆ ಸೌಲಭ್ಯಗಳನ್ನು ಸ್ವದುಪಯೋಗಪಡಿಸಿಕೊಳ್ಳಬೇಕು ಅದರ ಭಾಗವಾಗಿ ಪುರಸಭೆ ಅನುದಾನದಲ್ಲಿ ಮತ್ತು ಎಸ್ಸಿಪಿಟಿಎಸ್‌ಪಿ ಅನುದಾನದಲ್ಲಿ ವಿಶೇಷವಾಗಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಿದ್ದು ಇದು ನಮ್ಮಗಳ ಜವಾಬ್ದಾರಿಯಾಗಿದೆ ಎಂದರು

ಕಾರ್ಯಕ್ರಮದ ಅಂಗವಾಗಿ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ಸಹ ನಡೆಸಲಾಯಿತು. ರಕ್ತದ ಒತ್ತಡ, ಶುಗರ್ ಪರೀಕ್ಷೆ ಸೇರಿದಂತೆ ವಿವಿಧ ಪರೀಕ್ಷೆಗಳನ್ನು ಮಾಡಿ ವೈದ್ಯರು ಸಲಹೆ ನೀಡಿದರು.

ಈ ಜಾಗೃತಿ ಕಾರ್ಯಕ್ರಮದಿಂದ ಪೌರಕಾರ್ಮಿಕರಲ್ಲಿ ಆರೋಗ್ಯದ ಬಗ್ಗೆ ಅರಿವು ಹೆಚ್ಚಿದ್ದು, ಇಂತಹ ಕಾರ್ಯಕ್ರಮಗಳನ್ನು ಮುಂದುವರಿಸುವಂತೆ ಅವರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಪುರಸಭೆ ಆರೋಗ್ಯ ಅಧಿಕಾರಿಗಳಾದ ವಿಜಯಲಕ್ಷ್ಮಿ ಪೌರಕಾರ್ಮಿಕರ ಸಂಘಟನೆಯ ರಾಜ್ಯಾಧ್ಯಕ್ಷರಾದ ಪ್ರಭಾಕರ್, ಮೇಸ್ತ್ರಿ ಈರಣ್ಣ, ಸೇರಿದಂತೆ ಸದಸ್ಯರು, ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಪೌರಕಾರ್ಮಿಕರು ಉಪಸ್ಥಿತರಿದ್ದರು.

# ಮರೆವು: ಪ್ರಕೃತಿ ನೀಡಿದ ಅದ್ಭುತ ಕೊಡುಗೆ



**ಭೋಗ-ಐಭೋಗ**


• **ವೀರಣ್ಣ ಕಲಕೇರಿ**

**ಕೆಂಭಾವಿ**

ನಿಸರ್ಗವು ಮನುಕುಲಕ್ಕೆ ನೀಡಿರುವ ಕೊಡುಗೆಗಳು ಅಪಾರ. ಮನುಷ್ಯನ ಅಸ್ತಿತ್ವವೇ ಪ್ರಕೃತಿಯ ಮೇಲೆ ನಿಂತಿದೆ. ನೀರು, ಆಹಾರ, ಗಾಳಿ, ಬೆಳಕು ಮತ್ತು ಔಷಧಗಳು ಮನುಷ್ಯನಿಗೆ ಅತ್ಯವಶ್ಯಕವಾದ ನಿಸರ್ಗದತ್ತ ಕೊಡುಗೆಗಳು. ಅದರಂತೆಯೇ, ಮನುಷ್ಯನಿಗೆ "ಮರೆವು" ಕೂಡ ಪ್ರಕೃತಿಯು ನೀಡಿದ ಒಂದು ಅದ್ಭುತವಾದ ಕೊಡುಗೆಯಾಗಿದೆ ಎಂದರೆ ತಪ್ಪಾಗಲಾರದು.

ನಿಜ, ಈ ಮರೆವು ಮನುಷ್ಯನಿಗೆ ಲಭಿಸಿದ ಮಹತ್ವದ ರಕ್ಷಾಕವಚವೆಂದೇ ಹೇಳಬಹುದು. ನಮ್ಮ ಜೀವನದ ಪಯಣದಲ್ಲಿ ಕೆಲವು ವಿಷಯಗಳನ್ನು ನೆನಪಿಟ್ಟುಕೊಳ್ಳುವುದು ಎಷ್ಟು ಮುಖ್ಯವೋ, ಕೆಲವು ವಿಷಯಗಳನ್ನು ಮರೆಯುವುದು ಅಷ್ಟೇ ಅಗತ್ಯ. ಏಕೆಂದರೆ, ಮರೆವು ಆರೋಗ್ಯಕರ ಬದುಕಿಗೆ ಪೂರಕವಾಗಿದೆ ಎಂಬುದು ಹಿರಿಯರ ಅನುಭವದ ಮಾತು.

ಅದಕ್ಕಾಗಿ ಮನುಷ್ಯನ ನೆಮ್ಮದಿಯ ಬದುಕಿಗೆ ಮರೆವು ಸಂಜೀವಿನಿ ಎಂದೆ ಹೇಳಬಹುದು.



ಮನುಷ್ಯನ ಜೀವನದಲ್ಲಿ ಎಲ್ಲಾ ಸಂದರ್ಭಗಳೂ ಒಂದೇ ರೀತಿ ಇರುವುದಿಲ್ಲ. ಜೀವನದ ಹಾದಿಯಲ್ಲಿ ಕೆಲವು ಸಿಹಿ ಘಟನೆಗಳು ನಡೆದರೆ, ಇನ್ನು ಕೆಲವು ಕಹಿ ಘಟನೆಗಳು ಸಂಭವಿಸುತ್ತವೆ. ಅವಮಾನ, ಆತ್ಮೀಯರ ಅಗಲಿಕೆ, ಮೋಸ ಅಥವಾ ವಂಚನೆಗೊಳಗಾದ ನೆನಪುಗಳು ನಿರಂತರವಾಗಿ ಕಾಡುತ್ತಿದ್ದರೆ ನೆಮ್ಮದಿಯಿಂದ ಇರಲು ಸಾಧ್ಯವೇ? ಅಂತಹ ಸಂದರ್ಭಗಳಲ್ಲಿ, ಮರೆವು ನಮ್ಮ ನೋವಿನ ತೀವ್ರತೆಯನ್ನು ದಿನದಿಂದ ದಿನಕ್ಕೆ ಕಡಿಮೆ ಮಾಡುತ್ತಾ, ನಾವು ಸಹಜ ಸ್ಥಿತಿಗೆ ಮರಳಲು ಸಹಾಯ ಮಾಡುತ್ತದೆ. ಒಂದು ವೇಳೆ ಮರೆವು ಎಂಬುದು ಇಲ್ಲದಿದ್ದರೆ, ಮನುಷ್ಯ ನೆಮ್ಮದಿಯಿಂದ ಬದುಕಲು ಸಾಧ್ಯವೇ ಆಗುತ್ತಿರಲಿಲ್ಲ. ಆ ಕಾರಣ-ಕ್ಕಾಗಿಯೇ ಕೆಲವು ಘಟನೆಗಳನ್ನು ಮರೆಯುವುದು ಅನಿವಾರ್ಯವಾಗಿದೆ.

ನಮ್ಮ ಬೌದ್ಧಿಕ ಬೆಳವಣಿಗೆಗೆ ಕಾರಣವಾದ ಮೆದುಳು ಎಲ್ಲವನ್ನೂ ತನ್ನ ಸ್ಮೃತಿಪಟಲದಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರೆ, ಕಾಲಕ್ರಮೇಣ ಅದು ತನ್ನ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿತ್ತೇನೋ! ಮೆದುಳಿನ ಸಾಮರ್ಥ್ಯ ಮೀರಿ ಒತ್ತಡ ಉಂಟಾಗದಿರಲಿ ಎಂಬ ಕಾರಣಕ್ಕಾಗಿಯೇ, ಪ್ರಕೃತಿಯು ಮರೆವಿನ ಮೂಲಕ ಅನುಪಯುಕ್ತ ವಿಷಯಗಳನ್ನು ಹೊರಹಾಕಿ, ಹೊಸ ವಿಷಯಗಳನ್ನು ಅಳವಡಿಸಿಕೊಳ್ಳಲು ಜಾಗ ಮಾಡಿಕೊಡುತ್ತಿದೆ ಎನ್ನಬಹುದು.

ಮರೆವು ಇಲ್ಲದೆ ಹೋಗಿದ್ದರೆ ಕುಟುಂಬದಂತಹ ಆಂತರಿಕ ಸಂಬಂಧಗಳಲ್ಲಿ ಅಥವಾ ಸ್ನೇಹ ಮತ್ತು ಸಮುದಾಯದಂತಹ ಬಾಹ್ಯ ಸಂಬಂಧಗಳಲ್ಲಿ ನಡೆಯುವ ಸಣ್ಣಪುಟ್ಟ ಮನಸ್ತಾಪಗಳು ಶಾಶ್ವತವಾಗಿ ಉಳಿದುಬಿಡುತ್ತಿದ್ದವು. ತಪ್ಪುಗಳನ್ನೇ ನೆನಪಿನಲ್ಲಿಟ್ಟುಕೊಳ್ಳುತ್ತಾ ಹೋದರೆ ಪರಸ್ಪರ ದ್ವೇಷ-ಅಸೂಯೆಗಳು ಬೆಳೆದು, ಈ ಜಗತ್ತು ರಣರಂಗವಾಗಿ ಮಾರ್ಪಡುತ್ತಿತ್ತು ಎಂಬುವುದೂ ಅಲ್ಲಗಳೆಯುವಂತಿಲ್ಲ.

ಈ ಮರೆವಿನ ಕಾರಣದಿಂದಲೇ ದೈನಂದಿನ ಜೀವನದ ಸಣ್ಣಪುಟ್ಟ ಕಿರಿಕಿರಿಗಳು, ಸೋಲುಗಳು ಮತ್ತು ಆತಂಕಗಳು ದೂರವಾಗಿ ಮನಸ್ಸಿನ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಇದು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಲು ನೆರವಾಗುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಭೂತಕಾಲದ ಕಹಿ ಘಟನೆಗಳನ್ನು ಮರೆತಾಗ ಮಾತ್ರ ಮನುಷ್ಯ ವರ್ತಮಾನದಲ್ಲಿ ಉತ್ಸಾಹದಿಂದ ಇರಲು ಸಾಧ್ಯ. ಹಾಗಾಗಿ ಮರೆವು ವರ್ತಮಾನದ ಬದುಕಿಗೆ ಪ್ರೇರಣೆಯಾಗಿದೆ ಎಂದೇ ಹೇಳಬಹುದು.

ಕೊನೆಯದಾಗಿ, ಮರೆವು ಎಂಬುದು ಮನುಷ್ಯನ ದೌರ್ಬಲ್ಯವಲ್ಲ; ಅದು ಕಹಿ ನೆನಪುಗಳಿಂದ ತುಂಬಿದ ಮನಸ್ಸನ್ನು ಶುದ್ಧೀಕರಿಸುವ ಒಂದು ಪ್ರಕ್ರಿಯೆ. ಅನಗತ್ಯವಾದುದನ್ನು ಮರೆತು, ಉಪಯುಕ್ತವಾದುದನ್ನು ಉಳಿಸಿಕೊಳ್ಳುವ ಮೂಲಕ ಜೀವನ ಕಲೆಗೆ ಇದು ಮಾರ್ಗದರ್ಶಿಯಾಗಿದೆ. ಪ್ರಕೃತಿಯ ಈ ಅದ್ಭುತ ಕೊಡುಗೆಗಾಗಿ ನಾವು ಕೃತಜ್ಞರಾಗಿರಲೇಬೇಕು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)